Editor: NITYANANDASWAMI Publisher: U. BASAVARAJA
RNI No. KARKAN/2006/17926


ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 32 | ಆಗಸ್ಟ್ 1–7, 2022 | ಪುಟ 16 | ರೂ.10/-
Volume: 16 Issue: 32 August 1-7, 2022 Pages: 16 Price: 10/-
https://janashakthi.wordpress.com e-mail : js_weekly@yahoo.com



ಮಹಿಳಾ ಸಮಾನತೆ, ದೇಶದ ಐಕ್ಯತೆಯತ್ತ, ಸ್ಪಷ್ಟ ನೋಟ–ದಿಟ್ಟ ಹೆಜ್ಜೆ



ವರ್ಷದ ಸಾಧನೆ: ಸಂಘದ ಬಿಗಿ ಮುಷ್ಠಿಯಲ್ಲಿ ಗೊಂಬೆಯಾದ ಬೊಮ್ಮಾಯಿ



ಸುಪ್ರೀಂ ಕೋರ್ಟ್‌ನ ವಿರೋಧಾಭಾಸ ಪ್ರವೃತ್ತಿಗಳು



ಕರಾವಳಿಯಲ್ಲಿ ಮತ್ತೇ ಗರಿಗೆದರಿದ ಕೋಮು ರಾಜಕಾರಣದ ಆಟ



ಕಸ್ತೂರಿ ರಂಗನ್ ವರದಿ ಕರಡು ಅಧಿಸೂಚನೆ ಕಣ್ಣಿಗೆ ಮಣ್ಣೆರೆಚುವ ತಂತ್ರವೇ?

ಸರಕಾರದಿಂದ ತನಿಖಾ ಸಂಸ್ಥೆಗಳ ದುರ್ಬಳಕೆ, ಹಟಮಾರಿ ನಿಲುವು –ಮಧ್ಯಪ್ರವೇಶಿಸುವಂತೆ ಕೋರಿ ರಾಷ್ಟ್ರಪತಿಗಳಿಗೆ ಪ್ರತಿಪಕ್ಷಗಳ ಪತ್ರ

ನರೇಂದ್ರ ಮೋದಿ ಸರಕಾರವು ತನ್ನ ರಾಜಕೀಯ ವಿರೋಧಿಗಳ ವಿರುದ್ಧ ತನಿಖಾ ಸಂಸ್ಥೆಗಳ ದುರ್ಬಳಕೆಯನ್ನು ತೀವ್ರಗೊಳಿಸುತ್ತಿದು ರಾಷ್ಟ್ರಪತಿಗಳು ಈ ವಿಚಾರದಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕು ಮತ್ತು ಬೆಲೆ ಏರಿಕೆ ಮತ್ತು ಜಿಎಸ್‌ಟಿ ಹೆಚ್ಚಳದ ವಿಷಯದ ಬಗ್ಗೆ ಸಂಸತ್ತಿನಲ್ಲಿ ತುರ್ತು ಚರ್ಚೆಗೆ ಅವಕಾಶ ನೀಡದ ಸರ್ಕಾರದ "ಹಠಮಾರಿ ಧೋರಣೆ"ಯಿಂದ ಇದುವರೆಗಿನ ಮುಂಗಾರು ಅಧಿವೇಶನದಲ್ಲಿ ಕಲಾಪದ ಮೇಲೆ ದುಷ್ಪರಿಣಾಮ ಬೀರಿರುವ ಬಗ್ಗೆ ಪ್ರತಿಪಕ್ಷಗಳ ನಾಯಕರು ರಾಷ್ಟ್ರಪತಿ ದ್ರೌಪದಿ ಮುರ್ಮುರವರಿಗೆ ಜುಲೈ 26 ರಂದು ಪತ್ರ ಬರೆದಿದ್ದಾರೆ.

"ಮೋದಿ ಸರಕಾರವು ತನ್ನ ರಾಜಕೀಯ ವಿರೋಧಿಗಳ ವಿರುದ್ಧ ವ್ಯವಸ್ಥಿತ ಸೇಡಿನ ಅಭಿಯಾನದ ಭಾಗವಾಗಿ ತನಿಖಾ ಸಂಸ್ಥೆಗಳ ನಿರಂತರ ಮತ್ತು ತೀವ್ರ ದುರುಪಯೋಗವನ್ನು ನಿಮ್ಮ ಗಮನಕ್ಕೆ ತರಲು ನಾವು ಬರೆಯುತ್ತಿದ್ದೇವೆ. ಈ ವಿಷಯದಲ್ಲಿ ನೀವು ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ನಾವು ವಿನಂತಿಸುತ್ತೇವೆ" ಎಂದು ಮುಖಂಡರು ಪತ್ರದಲ್ಲಿ ಹೇಳಿದ್ದಾರೆ.

"ಕಾನೂನು ಕಾನೂನಾಗಿದೆ ಮತ್ತು ಭಯ ಅಥವಾ ಪಕ್ಷಪಾತವಿಲ್ಲದೇ ಅದನ್ನು ಜಾರಿಗೊಳಿಸಬೇಕು. ಇದನ್ನು ಪ್ರಸ್ತುತ ಮಾಡುತ್ತಿರುವಂತೆ ಮನಬಂದಂತೆ, ಆಯ್ದ ವಿರೋಧ ಪಕ್ಷಗಳ ಪ್ರಮುಖ ನಾಯಕರ ವಿರುದ್ಧ ಮತ್ತು ಯಾವುದೇ ಸಮರ್ಥನೆ ಇಲ್ಲದೆ ಬಳಸಲಾಗದು. ಈ ಅಭಿಯಾನದ ಏಕೈಕ ಗುರಿ ಬಿಜೆಪಿಯನ್ನು ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಎದುರಿಸುತ್ತಿರುವ ಶಕ್ತಿಗಳ ಹೆಸರನ್ನು ನಾಶಪಡಿಸುವುದು ಮತ್ತು ಅವನ್ನು ದುರ್ಬಲಗೊಳಿಸುವುದು" ಎಂದು ಪ್ರತಿಪಕ್ಷಗಳ ನಾಯಕರ ಪತ್ರ ಹೇಳಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಜೀವನೋಪಾಯಗಳ ನಷ್ಟ ಹಾಗೂ ಹೆಚ್ಚುತ್ತಿರುವ ಜೀವನ, ಸ್ವಾತಂತ್ರ್ಯ ಮತ್ತು ಸೊತ್ತುಗಳ ಅಭದ್ರತೆಯ ಬಗ್ಗೆ ನಮ್ಮ ದೇಶದ ಜನಗಳ ದಿನನಿತ್ಯದ ಆತಂಕಗಳಿಂದ ಅವರ ಗಮನವನ್ನು ಬೇರೆಡೆಗೆ ತಿರುಗಿಸಲು ಕೂಡ ಇದನ್ನು ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

"ಅತ್ಯಂತ ದುರದೃಷ್ಟದ ಸಂಗತಿಯೆಂದರೆ, ಬೆಲೆ ಏರಿಕೆ ಮತ್ತು ಅಗತ್ಯ ಆಹಾರ ಪದಾರ್ಥಗಳ ಮೇಲಿನ ಜಿಎಸ್‌ಟಿ ದರಗಳ ಹೆಚ್ಚಳದ ಕುರಿತ ಬಹಳ ಮಹತ್ವದ ವಿಷಯಗಳ ತುರ್ತು ಚರ್ಚೆಗೆ ಸರ್ಕಾರವು ಮೊಂಡುತನದಿಂದ ನಿರಾಕರಿಸುತ್ತಿರುವುದರಿಂದಾಗಿಯೇ ಸಂಪೂರ್ಣವಾಗಿ ಸಂಸತ್ತಿನ ಮುಂಗಾರು ಅಧಿವೇಶನವು ಇದುವರೆಗೆ ಸ್ಥಗಿತಗೊಂಡಿದೆ. ಇಂತಹ ತುರ್ತು ಚರ್ಚೆಗೆ ಅವಕಾಶ ನೀಡಿರುವ ಅನೇಕ ಪೂರ್ವನಿದರ್ಶನಗಳಿವೆ.ಆದರೆ ಈ ಬಾರಿ ಸರ್ಕಾರ ಹಠ ಹಿಡಿದಿದೆ ಮತ್ತು ಅದಕ್ಕೆ ಅವಕಾಶ ನೀಡುತ್ತಿಲ್ಲ" ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಈ ಪತ್ರಕ್ಕೆ ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ, ಎಎಪಿಯ ಸಂಜಯ್ ಸಿಂಗ್, ಆರ್‌ಜೆಡಿಯ ಮನೋಜ್ ಝಾ, ಸಿಪಿಐ(ಎಂ)ನ ಎಳಮಾರಮ್ ಕರೀಂ ಮತ್ತು ಎಸ್‌ಪಿಯ ರಾಮ್ ಗೋಪಾಲ್ ಯಾದವ್ ಮತ್ತಿತರ ಮುಖಂಡರು ಸಹಿ ಹಾಕಿದ್ದಾರೆ.

24 ಸಂಸದರ ಅಮಾನತು: ಸಂಸತ್ತಿನ ಕತ್ತು ಹಿಸುಕುವ ಕ್ರಮ

ಕಳೆದ ಎರಡು ದಿನಗಳಲ್ಲಿ ಲೋಕಸಭೆಯ 4 ಪ್ರತಿಪಕ್ಷ ಸಂಸದರು ಮತ್ತು ರಾಜ್ಯಸಭೆಯಲ್ಲಿ ಪ್ರತಿಪಕ್ಷದ 20 ಸಂಸದರನ್ನು ಅಮಾನತುಗೊಳಿಸಲಾಗಿದೆ. ಇವರಲ್ಲಿ ಇಬ್ಬರು ಸಿಪಿಐ(ಎಂ)ನ ಸಂಸದರು. ಇದು ಸಂಸತ್ತಿನ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೊಂದು ಗಂಭೀರ ಹೊಡೆತವಾಗಿದೆ ಮತ್ತು ಇದು ಸಂಸತ್ತಿನ ಸದಸ್ಯರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ಮೇಲೆ ನಡೆಸಿರುವ ಪ್ರಹಾರವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಮೋದಿ ಸರಕಾರವೇ ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು, ಅವರ ಜೀವನವನ್ನು ನಾಶಪಡಿಸುವ ಬೆಲೆ ಏರಿಕೆ, ನಿರುದ್ಯೋಗ ಇತ್ಯಾದಿಗಳ ಬಗ್ಗೆ ಸಂರಚನಾತ್ಮಕ ಚರ್ಚೆಗಾಗಿ ನಿಯಮಗಳ ಅಡಿಯಲ್ಲಿ ಪ್ರತಿಪಕ್ಷಗಳು ಮಂಡಿಸುವ ಯಾವುದೇ ಗೊತ್ತುವಳಿಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವುದು. ತಾವು ಸಂಸತ್ತಿನಲ್ಲಿ ಎಲ್ಲಾ ವಿಷಯಗಳನ್ನು ಕೂಡ ಚರ್ಚಿಸಲು ಬಯಸುತ್ತೇವೆ ಎಂದು ಸಾರ್ವಜನಿಕವಾಗಿ ಹೇಳಿಕೊಂಡರೂ, ಅವರು ಉದ್ದೇಶಪೂರ್ವಕವಾಗಿಯೇ ಅಂತಹ ಯಾವುದೇ ಚರ್ಚೆಗೆ ಅವಕಾಶವಾಗದಂತೆ ಅಡ್ಡಿಪಡಿಸುತ್ತಿದ್ದಾರೆ. ಜನರ ಕಾಳಜಿಯ ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಚರ್ಚಿಸುವ ಸರ್ವೋಚ್ಚ ವೇದಿಕೆಯಾಗಿ ಸಂಸತ್ತನ್ನು ನಾಶಪಡಿಸುತ್ತಿರುವುದಕ್ಕೆ ಮೋದಿ ಸರ್ಕಾರವೇ ಏಕೈಕ ಹೊಣೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮೋದಿ ಸರಕಾರವು ವ್ಯವಸ್ಥಿತವಾಗಿ ಸಂಸತ್ತನ್ನು ಅಪಮೌಲ್ಯಗೊಳಿಸುತ್ತಿದೆ ಮತ್ತು ಪ್ರತಿಪಕ್ಷಗಳ ದನಿಯನ್ನು ಅಡಗಿಸುತ್ತಿದೆ. ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸುವ ಮೂಲಕ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಒಗ್ಗಟ್ಟಿನ ಹೋರಾಟವನ್ನು ಪ್ರಾರಂಭಿಸುವ ಮೂಲಕ ಇದನ್ನು ಪ್ರತಿರೋಧಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವಿದ್ಯಾರ್ಥಿಗಳ ವಿರುದ್ಧ ಈಗಲೂ ತಾರತಮ್ಯ–ಡಾ.ಶಿವದಾಸನ್

2021–22ರಲ್ಲಿ 12 ಕೇಂದ್ರೀಯ ನಿಧಿ ಪಡೆಯುವ ತಾಂತ್ರಿಕ ಸಂಸ್ಥೆಗಳು ಒಬ್ಬನೇ ಒಬ್ಬ ದಲಿತ ಸಂಶೋಧನಾ ವಿದ್ಯಾರ್ಥಿಗೆ ಪ್ರವೇಶ ನೀಡಿಲ್ಲ ಮತ್ತು 21 ಶಿಕ್ಷಣ ಸಂಸ್ಥೆಗಳು ಒಬ್ಬನಾದರೂ ಆದಿವಾಸಿ ಸಂಶೋಧನಾ ವಿದ್ಯಾರ್ಥಿಗೆ ಪ್ರವೇಶ ನೀಡಿಲ್ಲ.

ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಂಶೋಧಕರ ಸಂಖ್ಯೆಗೆ ಸಂಬಂಧಿಸಿದಂತೆ ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸಂಸದ ಡಾ. ವಿ ಶಿವದಾಸನ್ ಅವರ ಪ್ರಶ್ನೆಗೆ ಉತ್ತರಿಸುತ್ತ ಕೇಂದ್ರ ಶಿಕ್ಷಣ ರಾಜ್ಯ ಸಚಿವ ಸುಭಾಸ್ ಸರ್ಕಾರ್ ಅವರಿಂದ ಈ ಆಘಾತಕಾರಿ ಮಾಹಿತಿ ಬಯಲಿಗೆ ಬಂದಿದೆ. ಈ ಅಂಕೆ–ಸಂಖ್ಯೆ ಉನ್ನತ ಶಿಕ್ಷಣದಲ್ಲಿನ ಸಾಮಾಜಿಕ ಆರ್ಥಿಕ ಎಷ್ಟೊಂದು ತಾರತಮ್ಯಗಳಿವೆ ಎಂಬುದರ ಮೇಲೆ ಬೆಳಕು ಚೆಲ್ಲುತ್ತವೆ ಎಂದು ಶಿವದಾಸನ್ ಹೇಳುತ್ತಾರೆ.



ಈ ಎಲ್ಲಾ ಸಂಸ್ಥೆಗಳಲ್ಲಿ ಬಹಳಷ್ಟು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಸೇರಿದ ಅರ್ಹ ಅರ್ಜಿದಾರರು ಇದ್ದರು ಎಂಬುದು ಸರ್ಕಾರದ ಉತ್ತರದಿಂದಲೇ ತಿಳಿಯುತ್ತದೆ. ಸಂಶೋಧನೆಯ ಪ್ರವೇಶಗಳಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು **IIM** ಐಐಎಂಗಳು ಜಾರಿಗೆ ತಂದಿಲ್ಲ ಎಂಬುದು ಈ ಉತ್ತರದಲ್ಲಿ ಸ್ಪಷ್ಟವಾಗಿದೆ, ಅಲ್ಲದೆ ಇವು ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದ ಯಾರನ್ನೂ ಸೇರಿಸಿಕೊಂಡಿಲ್ಲ ಎಂಬುದೂ ತಿಳಿದು ಬರುತ್ತದೆ.

ಭಾರತದ ಉನ್ನತ ಶಿಕ್ಷಣ ಕ್ಷೇತ್ರವು ಇನ್ನೂ ಬೃಹತ್ ಪ್ರಮಾಣದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಿಂದ ಮುಕ್ತವಾಗಿಲ್ಲ. ಈ ಅಂಕಿಅಂಶಗಳು ಸಾಮಾಜಿಕ ನ್ಯಾಯದತ್ತ ತೀವ್ರವಾದ ಪ್ರಯತ್ನಗಳನ್ನು ನಡೆಸಬೇಕಾದ ಅಗತ್ಯವನ್ನು ತೋರಿಸುತ್ತವೆ ಎಂದು ಡಾ. ವಿ. ಶಿವದಾಸನ್ ಹೇಳುತ್ತಾರೆ.

ರಾಜ್ಯ ಸರ್ಕಾರದ ಸಾಲದಲ್ಲಿ ರಾಜ್ಯ ಸಂಸ್ಥೆಗಳ ಎರವಲುಗಳನ್ನು ಸೇರಿಸಬೇಡಿ: ಕೇಂದ್ರ ಹಣಕಾಸು ಮಂತ್ರಿಗಳಿಗೆ ಕೇರಳ ಹಣಕಾಸು ಮಂತ್ರಿಗಳ ಪತ್ರ

ಆಗಸ್ಟ್ 2017 ರ ಹಿಂದೆ ಇದ್ದಂತೆ, ರಾಜ್ಯಗಳ ನಿವ್ವಳ ಸಾಲ ಸಾಮರ್ಥ್ಯವನ್ನು ನಿರ್ಧರಿಸುವಾಗ ಅವುಗಳ ಸಾರ್ವಜನಿಕ ಖಾತೆಯಲ್ಲಿನ ಶಿಲ್ಕುಗಳನ್ನು ಮತ್ತು ರಾಜ್ಯ ಸರಕಾರಗಳು ನಡೆಸುತ್ತಿರುವ ಸಂಸ್ಥೆಗಳ ಎರವಲುಗಳನ್ನು ಸೇರಿಸಬಾರದು ಎಂದು ಕೇರಳ ಹಣಕಾಸು ಸಚಿವ ಕೆಎನ್ ಬಾಲಗೋಪಾಲ್ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬರೆದಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.

ರಾಜ್ಯಗಳ ನಿವ್ವಳ ಸಾಲದ ಮಿತಿಯನ್ನು ನಿಗದಿಪಡಿಸುವಲ್ಲಿ ಕಳೆದ ಐದು ವರ್ಷಗಳಲ್ಲಿ ಕೇಂದ್ರದ ಕೆಲವು ಕ್ರಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಬಾಲಗೋಪಾಲ್, ರಾಜ್ಯಗಳ ಶಾಸನಬದ್ಧ ಸಂಸ್ಥೆಗಳು ಮತ್ತು ಕಂಪನಿಗಳಂತಹ ರಾಜ್ಯ ಸಾಧನಗಳ ಹೊಣೆಗಾರಿಕೆಗಳು ರಾಜ್ಯದ ಸಾಲದ ವ್ಯಾಖ್ಯಾನದೊಳಗೆ ಬರುವುದಿಲ್ಲ ಎಂದು ತರ್ಕಿಸಿದ್ದಾರೆ.

ಆದ್ದರಿಂದ, ಅಂತಹ ಸಂಸ್ಥೆಗಳ ಸಾಲವನ್ನು ರಾಜ್ಯ ಸರ್ಕಾರದ ಸಾಲದೊಂದಿಗೆ ಸಂಯೋಜಿಸುವುದು ಸಂವಿಧಾನದ ನಿಬಂಧನೆಗಳಿಗೆ ವಿರುದ್ಧವಾಗಿದೆ, ಇದು ರಾಜ್ಯಗಳ ಸಾಲ ಪಡೆಯುವ ಅಧಿಕಾರಕ್ಕೆ "ಕಂಟಕ"ವಾಗುತ್ತದೆ ಮತ್ತು



ರಾಜ್ಯ ಸರಕಾರಗಳ ಅಭಿವೃದ್ಧಿ ಯೋಜನೆಗಳನ್ನು "ತೊಂದರೆಗೆ ಸಿಲುಕಿಸುತ್ತವೆ" ಎಂದು ಅವರು ಜುಲೈ 22 ರ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಆದಾಗ್ಯೂ, ಜುಲೈ 25 ರಂದು, ಲೋಕಸಭೆಯಲ್ಲಿ ಲಿಖಿತ ಉತ್ತರದಲ್ಲಿ ನಿರ್ಮಲಾ ಸೀತಾರಾಮನ್, ರಾಜ್ಯ ಸಾರ್ವಜನಿಕ ವಲಯದ ಸಂಸ್ಥೆಗಳು ಅಥವಾ ರಾಜ್ಯಗಳ ವಿಶೇಷ ಉದ್ದೇಶದ ವಾಹಕಗಳು (ಎಸ್‌ಪಿವಿ) ಪಡೆಯುವ ಸಾಲವನ್ನು ಒಪ್ಪಿಗೆಯ ಅಗತ್ಯವಿರುವ ಸಾಲವೆಂದು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಬಾಲಗೋಪಾಲ್ ಅವರು ತಮ್ಮ ಪತ್ರದಲ್ಲಿ ಕೇರಳವು ಪ್ರಸ್ತುತ ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ, ಇದು ವಸತಿ, ಶಿಕ್ಷಣ ಮತ್ತು ಆರೋಗ್ಯ ಸೇರಿದಂತೆ ಬಡವರ ಕಲ್ಯಾಣ ಯೋಜನೆಗಳ ವೆಚ್ಚವನ್ನು ಭರಿಸುವಲ್ಲಿ ಸರ್ಕಾರಕ್ಕೆ ಗಂಭೀರ ಬೆದರಿಕೆ ಒಡ್ಡುತ್ತದೆ ಎಂದು ಹೇಳಿದ್ದಾರೆ.

ಕೇರಳಕ್ಕೆ ಈ ವರ್ಷ ಸುಮಾರು 7,000 ಕೋಟಿ ರೂ. ವರೆಗೆ ಆದಾಯ ಕೊರತೆ ಅನುದಾನ ಕಡಿತ ಮತ್ತು ಸುಮಾರು 12,000 ಕೋಟಿ ರೂ. ಗಳ ಜಿಎಸ್‌ಟಿ ಪರಿಹಾರವನ್ನು ಸ್ಥಗಿತಗೊಳಿಸಿದ್ದರಿಂದ ಆಗಿರುವ ನಷ್ಟ ರಾಜ್ಯದ ಹಣಕಾಸು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಇದಲ್ಲದೆ, ಹಣಕಾಸು ಸಚಿವಾಲಯವು ತನಗೆ ತೋಚಿದಂತೆ ಬಜೆಟ್ ಹೊರಗಿನ ಸಾಲದ ಹೆಸರಿನಲ್ಲಿ, ರಾಜ್ಯದ ನಿವ್ವಳ ಸಾಲದ ಮಿತಿಯಲ್ಲಿ ಸುಮಾರು 4,000 ಕೋಟಿ ರೂಪಾಯಿಗಳ ಕಡಿತವನ್ನು ಮಾಡಿದೆ. ಒಟ್ಟಾರೆಯಾಗಿ, ರಾಜ್ಯ ಸರ್ಕಾರವು. ಪ್ರಸಕ್ತ ಹಣಕಾಸು ವರ್ಷದಲ್ಲಿ ಬಜೆಟ್‌ಗೆ ಹಣಕಾಸು ಒದಗಿಸಲು ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳಲ್ಲಿ 23,000 ಕೋಟಿ ರೂ. ಕಡಿತವನ್ನು ಎದುರಿಸಬೇಕಾಗಿದೆ.

"ಕೋವಿಡ್ ಸಾಂಕ್ರಾಮಿಕ ಉಂಟುಮಾಡಿರುವ ಆರ್ಥಿಕ ನಿತ್ರಾಣತೆ" ಯಿಂದ ಹೊರಬರಲು ಹೋರಾಡುತ್ತಿರುವ ಕೇರಳ ಎದುರಿಸುತ್ತಿರುವ ಈ ವಾಸ್ತವತೆಗಳನ್ನು ಕೇಂದ್ರವು ಗುರುತಿಸದಿದ್ದರೆ, ಕಳೆದ ಹಲವಾರು ದಶಕಗಳಿಂದ ಈ ರಾಜ್ಯವು ಕಟ್ಟಿ ಬೆಳೆಸಿರುವ ಸಾಮಾಜಿಕ–ಆರ್ಥಿಕ ಭದ್ರತಾ ವ್ಯವಸ್ಥೆ ಅಪಾಯಕ್ಕೊಳಗಾಗುತ್ತದೆ ಎಂದು ಬಾಲಗೋಪಾಲ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಸಂಪಾದಕೀಯ

ಮತೀಯ ರಾಜಕಾರಣದ ಬಲಿ ಪೀಠ ಮತ್ತು ಬಲಿಯಾಗುತ್ತಿರುವ ಜೀವಗಳು

ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರದಲ್ಲಿ ನಡೆದಿರುವ ಸರಣಿ ಹತ್ಯಾ ಘಟನೆಗಳು ಅತ್ಯಂತ ಆತಂಕವನ್ನು ಉಂಟು ಮಾಡುತ್ತಿವೆ. ಕಳೆದ ಹತ್ತು ದಿನಗಳೊಳಗೆ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಮಸೂದ್, ಪ್ರವೀಣ್ ನೆಟ್ಟಾರು ಮತ್ತು ಸುರತ್ಕಲ್ಲಿನ ಕಾಟಿಪಳ್ಳದ ಫಾಜಿಲ್ ಹೀಗೆ ಮೂರು ಯುವಕರು ಹತ್ಯೆಗೀಡಾಗಿದ್ದಾರೆ. ಕಾರಣಗಳು ಏನಿವೆ, ಯಾರಿಂದಾಗಿದೆ ಎನ್ನುವ ಬಗ್ಗೆ ತನಿಖೆ ಈಗ ಆರಂಭಗೊಂಡಿದೆ ಯಾದರೂ ಆಗಲೇ 'ಕೆಲವು ಹಿತಾಸಕ್ತಿಗಳು' ಮತಾಂಧತೆಯ ಕನ್ನಡಕದ ಮೂಲಕ ಅವರಿವರನ್ನು ಅಪರಾಧಿಗಳನ್ನು ಗುರುತಿಸಿ ಗುರಿಯಾಗಿಸಿದ್ದಾರೆ. ಎಲ್ಲವಕ್ಕೂ ಮತೀಯ ಲೇಪನ ಹಚ್ಚುತ್ತಿರುವುದು ಆರೋಪಿಸಿರುವವರ ಮನಸ್ಥಿತಿ, ಉದ್ದೇಶಗಳನ್ನೇ ಅವಲಂಬಿಸಿದೆ. ಕಾರಣ ಏನೇ ಇರಲಿ ಬದುಕಿ ಬಾಳಬೇಕಾದ ಯುವ ಚೈತನ್ಯಗಳ ಕಗ್ಗೊಲೆ ಅತ್ಯಂತ ಕಠಿಣ ಶಬ್ದಗಳಲ್ಲಿ ಖಂಡಿಸಬೇಕಾದ, ಮತ್ತೆಂದೂ ನಡೆಯಬಾರದ ಅಮಾನುಷ ಕೃತ್ಯಗಳಾಗಿವೆ. ಇವನ್ನು ತಡೆಯಲೇಬೇಕು.

ಆಳ, ನಿಷ್ಪಕ್ಷಪಾತವಾದ ತನಿಖೆ ನಡೆದು ಇಂತಹ ಕೃತ್ಯಗಳನ್ನೆಸಗಿದ ಕ್ರಿಮಿನಲ್ ಗಳ ಮೇಲೆ ಅತ್ಯಂತ ಕಠಿಣವಾದ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡು ಶಿಕ್ಷಿಸಬೇಕು.

ಈ ಧಾರುಣ ಹತ್ಯೆಗಳಿಗೆ ಮತೀಯ ದ್ವೇಷ, ಉನ್ಮತ್ತತೆ ಕಾರಣ ಎನ್ನಲಾಗುತ್ತಿದೆ. ಇಂತಹ ಮಾತುಗಳು ಮತ್ತು ಆ ಜಾಡಿನಲ್ಲಿ ನಡೆಯುವ ತನಿಖೆಗಳು ನಿಜವಾದ ಸತ್ಯವನ್ನು ಬಯಲಿಗೆ ತರುವುದಿಲ್ಲ. ಮೇಲಾಗಿ ಅಂತಹ ಮಾತುಗಳು ಮುಂದೆ ನಡೆಯುವ ಕೊಲೆಗಳಿಗೆ ಹುಸಿ ಸಮರ್ಥನೆಯಾಗಬಹುದು ಅಷ್ಟೇ. ಬಹಿರಂಗವಾಗಿ ನಡೆಯುವ ಇಂತಹ ಕೊಲೆಗಳು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಎತ್ತಿ ತೋರಿಸುತ್ತದೆ. ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿಗಳು ವೈಫಲ್ಯವನ್ನು ಒಪ್ಪಿಕೊಳ್ಳಬೇಕು. ದುರಂತವೆಂದರೆ ಭಿನ್ನ ಅಭಿಪ್ರಾಯಗಳು, ವಿಭಿನ್ನ ಧಾರ್ಮಿಕ ನಂಬಿಕೆ, ಆಚರಣೆಗಳನ್ನು ಪರಸ್ಪರ ಗೌರವಿಸಬೇಕು, ಸಹಿಷ್ಣತೆಯಿಂದ ಕೂಡಿ ಬಾಳ ಬೇಕು ಎನ್ನುವ ಕನಿಷ್ಠ ವಿವೇಕವೂ ಇಲ್ಲವಾಗುತ್ತಿರುವುದು. ಮತ್ತು ಅದೇ ಜೀವನದ ಧ್ಯೇಯವಾಗಿ ಉನ್ಮತ್ತ ದ್ವೇಷದ ದಳ್ಳುರಿಯಾಗಿ ಸಮಾಜವನ್ನು ಸುಡುತ್ತಿದೆ. ಸಮಾಜದ ಪ್ರತಿಷ್ಠಿತರೆನಿಸಿ ಕೊಂಡವರು, ಚುನಾಯಿತ ಜನಪ್ರತಿನಿಧಿಗಳು, ಧಾರ್ಮಿಕತೆಯ ಮುಖಂಡರು, ಮುಖ್ಯವಾಗಿ ಅಧಿಕಾರದ ಹೊಣೆ ಹೊತ್ತ ಆಡಳಿತಗಾರರೂ ತಮ್ಮ ಹೊಣೆಗಾರಿಕೆಯನ್ನು ಮರೆತು ಕಿಚ್ಚು ಹೆಚ್ಚಿಸಲೇ ಆರ್ಭಟಿಸುವುದು ಕ್ಷುಲ್ಲಕ ರಾಜಕಾರಣವಲ್ಲದೇ ಬೇರೇನಲ್ಲ.

ಕರಾವಳಿಯಲ್ಲಿ ಇಂತಹ ಕಗ್ಗೊಲೆಗಳು ಹೊಸತನಲ್ಲ. ಅಂತಹವು ರೂಢಿಯಾಗಿ ಬಿಟ್ಟಿದೆ. ಕರಾವಳಿಯಲ್ಲಿ ಕೋಮುವಾದದ ರಾಜಕಾರಣ ಎನ್ನುವುದು ಮಾನವನ ರಕ್ತದ ರುಚಿ ಕಂಡ ಹುಲಿಯಂತೆ ಆಗಿದೆ. ಬಹುತೇಕರು ಅವಲೋಕಿಸಿದಂತೆ ಚುನಾವಣೆಗಳು ಹತ್ತಿರ ಬಂದಾಗ ಇಂಥ ಕೊಲೆಗಳ ಸರಣಿ ಆರಂಭಗೊಳ್ಳುವುದು ಹಿಂದಿನಿಂದಲೂ ನಡೆದು ಬಂದ ನಿದರ್ಶನಗಳಿವೆ. ಅಂದರೆ ಚುನಾವಣೆಯ ಲಾಭಕ್ಕಾಗಿ ಕೋಮು ವಿಭಜನೆಯನ್ನು ತರಲು ಮತ್ತು ಈಗಿರುವ ದ್ವೇಷಾಂತರವನ್ನು ಮತ್ತಷ್ಟು ಹೆಚ್ಚಿಸಿ ವಿಭಜನೆಯನ್ನು ಉಂಟು ಮಾಡಲು, ಮತ್ತದನ್ನು ಕ್ರೋಢೀಕರಿಸಲು ಪ್ರಯತ್ನಗಳು ನಡೆಯುತ್ತವೆ ಎನ್ನುವುದು ಪ್ರವೀಣ್ ನೆಟ್ಟಾರು ಅವರ ಕಗ್ಗೊಲೆ ಮತ್ತು ನಂತರದಲ್ಲಿ ಸಂಘ ಪರಿವಾರ ವಿಶೇಷವಾಗಿ ಬಿಜೆಪಿ ನಾಯಕರು ಅದನ್ನು ವ್ಯಾಖ್ಯಾನಿಸಿ ಬಳಸಿಕೊಳ್ಳಲು ನಡೆಸಿದ ಪ್ರಯತ್ನಗಳು ನಿದರ್ಶನವಾಗಿವೆ. ಇದು ಅತ್ಯಂತ ಹೇಸಿಗೆಯನ್ನು ಉಂಟು ಮಾಡುತ್ತದೆ.

ಇಡೀ ಘಟನೆಯನ್ನು ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಆರೋಪಿಸಲು ಪ್ರಯತ್ನಗಳು ನಡೆದಿವೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಈ ಪ್ರದೇಶದಲ್ಲಿ ಇಂತಹ ಕಗ್ಗೊಲೆಗಳು ಮತ್ತು ಇದರ ಹಿಂದಿರುವ ರಾಜಕಾರಣದಿಂದ ತತ್ತರಿಸಿ ತಲ್ಲಣಗೊಂಡಿರುವ ಸಂಘ ಪರಿವಾರದ ಕಾರ್ಯಕರ್ತರು, ಬೆಂಬಲಿಗರೇ ಬಹಿರಂಗವಾಗಿ ಈ ಕಗ್ಗೊಲೆಗಳ ಕುರಿತಾದಂತೆ ಅತ್ಯಂತ ಬೇಸರವನ್ನು ಮತ್ತು ತಮ್ಮನ್ನು ಬಲಿಪಶುಗಳನ್ನಾಗಿ ಮಾಡುತ್ತಿರುವುದರ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಇದನ್ನು ಬಿಜೆಪಿ ಮತ್ತು ಸಂಘ ಪರಿವಾರದ ನಾಯಕತ್ವ ತಮ್ಮ ಕೋಮುವಾದೀ ರಾಜಕಾರಣವನ್ನು ಕೈಬಿಡದೆ ಅದನ್ನು ಮತ್ತಷ್ಟು ಮತಾಂಧಗೊಳಿಸಲೆಂದೇ ಪ್ರಯತ್ನಿಸುತ್ತಿರುವುದು ನಿಜಕ್ಕೂ ಆತಂಕಕಾರಿಯಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಇತರೆ ಜನಪ್ರತಿನಿಧಿಗಳಿಗೆ ಘೆರಾವು ಹಾಕಿದ ಕಾರ್ಯಕರ್ತರು ಕೊಟ್ಟ ಸಂದೇಶ ಸಂಘ ಪರಿವಾರ ಇಲ್ಲಿವರೆಗೂ ನಡೆಸಿಕೊಂಡು ಬಂದಿರುವ ರಾಜಕಾರಣದ ವಸ್ತು ಸ್ಥಿತಿಗೆ ಕನ್ನಡಿ ಹಿಡಿದಂತೆ ಆಗಿದೆ. ಸಂಘ ಪರಿವಾರದ ಒಳ ಜಗಳವು ಪ್ರವೀಣ್ ನೆಟ್ಟಾರು ಅವರ ಹತ್ಯೆಯ ಪ್ರಕರಣದಲ್ಲಿ ಪ್ರಭಾವಿಸಿರಬಹುದು ಎನ್ನುವ ಶಂಕೆಯು ವ್ಯಕ್ತವಾಗಿದೆ. ಕಂಡವರ ಮಕ್ಕಳನ್ನು ಕದನಕ್ಕಿಳಿಸಿ ಅಧಿಕಾರದ ಗದ್ದುಗೆ ಏರಿದ್ದರ ಕುರಿತಾದಂತೆ ವ್ಯಾಪಕ ಆಕ್ರೋಶ ವ್ಯಕ್ತಗೊಂಡಿದೆ. ಈ ಕೃತ್ಯಗಳ ಹಿಂದಿರುವ ಮೂಲ ಶಕ್ತಿಗಳನ್ನು ಮರೆಯಾಗಿಸುವ ಬಗೆಗೂ ಅನುಮಾನಗಳು ವ್ಯಕ್ತಗೊಂಡಿವೆ. ಆದರೆ ಇದನ್ನು ಮುಚ್ಚಿ ಹಾಕಲು ಬಿಜೆಪಿ ಮತ್ತು ಸಂಘ ಪರಿವಾರ ಬಂಧಿಸಲಾದ ಆರೋಪಿಗಳನ್ನು ಕಾನೂನು, ಸಂವಿಧಾನಾತ್ಮಕತೆಯನ್ನು ಮೀರಿ ಕಲ್ಲು ಹೊಡೆಯುವ, ಎನ್ಕೌಂಟರ್ ಮಾಡುವಂತಹ ಕ್ರಮಗಳ ಮೂಲಕ ದಂಡಿಸುವ ಮಾತುಗಳನ್ನು ಆಡುತ್ತಿರುವುದು, ಅದೇ ಪರಿಹಾರ ಎಂದು ಬಿಂಬಿಸುವುದು ಮತ್ತಷ್ಟು ಅಪಾಯಕಾರಿಯಾಗಿದೆ. ಪ್ರಭುತ್ವ ಪ್ರಾಯೋಜಿಸುವ ಇಂತಹ ಕಗ್ಗೊಲೆಗಳು ನಮ್ಮ ನಾಗರಿಕ ಸಮಾಜದ ಮೌಲ್ಯಗಳನ್ನು, ಪ್ರಜಾಪ್ರಭುತ್ವ ಮತ್ತು ಕಾನೂನು ಬದ್ಧ ಆಡಳಿತವನ್ನು ನಿರ್ನಾಮಗೊಳಿಸುತ್ತದೆ. ನ್ಯಾಯಾಲಯದ ತೀರ್ಪಿಗೆ ಮೊದಲೇ ಗುಂಡಿಕ್ಕಿ ಕೊಲ್ಲುವ ಎನ್ಕೌಂಟರ್ ನಂತಹ ಕ್ರಮಗಳ ಬಗ್ಗೆ ಸ್ವತಃ ಮುಖ್ಯಮಂತ್ರಿ ಮತ್ತು ಸಂಪುಟದ ಹಲವು ಸಚಿವರು, ಬಿಜೆಪಿ ನಾಯಕರು ಪ್ರತಿಪಾದಿಸುತ್ತಿರುವುದು ಮುಂದಿನ ದಿನಗಳಲ್ಲಿ ಕರ್ನಾಟಕವನ್ನು ಉತ್ತರ ಪ್ರದೇಶದ ಬುಲ್ಡೋಜರ್ ಮಾದರಿಯ 'ಜಂಗಲ್ ರಾಜ್ಯ'ವನ್ನಾಗಿ ಮಾಡುವ ಒಂದು ಪುಟ 7 ಕ್ಕೆ

ಬಸವರಾಜ ಬೊಮ್ಮಾಯಿ ಸರಕಾರಕ್ಕೆ ಒಂದು ವರ್ಷ. ಬಿಜೆಪಿ ಸರಕಾರಕ್ಕೆ ಮೂರು ವರ್ಷ! ಬೊಮ್ಮಾಯಿ ಸರಕಾರವೂ ಬಿಜೆಪಿ ಸರಕಾರವೇ. ಆದರೆ ಬೊಮ್ಮಾಯಿ ಮಖ್ಯಮಂತ್ರಿ ಆದದ್ದನ್ನೇ ಉತ್ಸವ ಆಚರಿಸಲು ವಿಶೇಷವಾಗಿ ಪರಿಗಣಿಸಿರುವುದು ಯಾಕೆ? ಪಕ್ಷವೇ ಮುಖ್ಯ, ಸಿದ್ಧಾಂತವೇ ಮುಖ್ಯ, ವ್ಯಕ್ತಿಗಳಲ್ಲ ಎಂದೆಲ್ಲಾ ಡಂಗುರ ಹೊಡೆಯುವ ಬಿಜೆಪಿ ಬೊಮ್ಮಾಯಿಯ ಆಡಳಿತದ ಒಂದು ವರ್ಷವನ್ನು ಸಾಧನೆಯ ಜನೋತ್ಸವ ಸಮಾವೇಶವನ್ನಾಗಿ ಆಚರಿಸಲು ಸಿದ್ಧತೆ ಮಾಡಿದ್ದು ಯಾಕೆ? ಪ್ರವೀಣ ನೆಟ್ಟಾರು ಅವರ ಹತ್ಯೆಯ ಬೆನ್ನಲ್ಲಿ ಕರಾವಳಿ ಮತ್ತು ಕರ್ನಾಟಕದ ಇತರೆಡೆಗಳಲ್ಲಿ ಬಿಜೆಪಿ ನಾಯಕರ ವಿರುದ್ಧ ಬಿಜೆಪಿ ಕಾರ್ಯಕರ್ತರ ಭುಗಿಲೆದ್ದ ಭಾರಿ ಆಕ್ರೋಶವನ್ನು ಎದುರಿಸಲಾಗದೇ ಮತ್ತಷ್ಟೂ ಮುಖಭಂಗ ಅನುಭವಿಸುವುದನ್ನು ತಪ್ಪಿಸಿಕೊಳ್ಳಲು ಕೊನೇ ಗಳಿಗೆಯಲ್ಲಿ ಜುಲೈ 28 ರ ವಿಧಾನಸೌಧದ ಬಾಂಕ್ವೆಟ್ ಹಾಲ್ ಮತ್ತು ದೊಡ್ಡಬಳ್ಳಾಪುರದ 'ಜನೋತ್ಸವ' ಸಮಾವೇಶವನ್ನು ರದ್ದು ಪಡಿಸಲಾಯಿತು. ಆದರೂ ಜುಲೈ 28ಕ್ಕೂ ಮೊದಲು ಒಂದು ವಾರ, ನಂತರದಲ್ಲಿಯೂ ಪತ್ರಿಕೆಗಳಲ್ಲಿ(ಗಳಿಗೆ) ಜಾಹೀರಾತಿನ ಭರ್ಜರಿ ಪ್ರಚಾರದೂಟಕ್ಕೇನೂ ಕೊರತೆಯಾಗಲಿಲ್ಲ.

ಈ ವಾರ

ಎಸ್.ವೈ. ಗುರುಶಾಂತ್

ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ನವರನ್ನು ಬಿಜೆಪಿ ಹೈಕಮಾಂಡ್ ಪದಚ್ಯುತಗೊಳಿಸಿದ ಮೇಲೆ ಬಂಡಾಯವಿಲ್ಲದ ನಯವಾದ ಅಧಿಕಾರ ವರ್ಗಾವಣೆಯ ರಾಜೀ ಸೂತ್ರದಲ್ಲಿ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗುವ ಲಾಟರಿ ಹೊಡೆದರು. ಅತ್ತ ಬಿ.ಎಸ್.ವೈ.ಗೆ ಇತ್ತ ಬಿಜೆಪಿ ಹೈಕಮಾಂಡ್ ಗೂ ಒಂದೊಂದು ಕೈ ಚಾಚಿ ಪಯಣ ಆರಂಭಿಸಿದರು. ಆಗ ಆರ್.ಎಸ್.ಎಸ್.ಗೆ ಕಾರ್ಯಕರ್ತನಾಗಿಲ್ಲದ, 'ಸಮಾಜವಾದಿ' (?!) ಹಿನ್ನೆಲೆಯ ಬೊಮ್ಮಾಯಿಯವರ ಆಡಳಿತ ಸಮತೂಕದಲ್ಲಿ ಸಾಗಬಹುದು ಎಂದು ಕೆಲವರು ನಿರೀಕ್ಷಿಸಿದ್ದರು. ಆದರೆ ಯಡಿಯೂರಪ್ಪನವರನ್ನು ಬದಲಾಯಿಸಿದ ಹೈಕಮಾಂಡ್ ದೃಷ್ಟಿ ಮುಖ್ಯವಾಗಿ2025 ರಲ್ಲಿ 'ಹಿಂದೂ ರಾಜ್ಯ' ಸ್ಥಾಪಿಸುವ ಹಿಂದುತ್ವದ ಕೋಮುವಾದಿ ಫ್ಯಾಸಿಸ್ಟ್ ಅಜೆಂಡವನ್ನು ಕರ್ನಾಟಕದಲ್ಲಿಯೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮತ್ತು ಇನ್ನಷ್ಟು ಕಾರ್ಪೊರೇಟ್ ಕಂಪನಿಗಳ ಲೂಟಿಗೆ ರಾಜ್ಯವನ್ನ ಉತೆರೆದಿಡುವ ಅಜೆಂಡಾದ ಭಾಗವಾಗಿತ್ತು ಎನ್ನುವುದನ್ನು ಅರಿತ ಯಾರೂ, ಅಷ್ಟು ಸುಲಭದಲ್ಲಿ ಅದನ್ನು ನಂಬಿರಲಿಲ್ಲ. ಬಸವರಾಜ ಬೊಮ್ಮಾಯಿ ಅವರ ಮೂಲಕ ಯಡಿಯೂರಪ್ಪನವರನ್ನು ಸಂತೈಸುತ್ತಲೇ ತಮ್ಮ ಅಜೆಂಡವನ್ನು ಬಸವರಾಜ ಬೊಮ್ಮಾಯಿ ಮೂಲಕ ತೀವ್ರಗತಿಯಲ್ಲಿ ಜಾರಿಗೊಳಿಸುತ್ತಿರುವುದು ಆರ್.ಎಸ್.ಎಸ್.ನ ತಂತ್ರ. ಈ ಒಂದು ವರ್ಷದಲ್ಲಿ ಬೊಮ್ಮಾಯಿ ಕಲಿತಿರುವ ಬಹು ಮುಖ್ಯ ಪಾಠವೆಂದರೆ ಕುರ್ಚಿಯಲ್ಲಿ ಉಳಿದುಕೊಳ್ಳಬೇಕಾದರೆ ಆರ್.ಎಸ್.ಎಸ್. ಹೇಳಿದಂತೆ ಕವಾಯಿತನ್ನು ಮಾಡಬೇಕು ಎನ್ನುವುದು. ಮೂಲ ಸಂಘಿಗಳಲ್ಲದವರನ್ನು ಹೇಗೆ ಆಟ ಆಡಿಸಬೇಕು ಎನ್ನುವುದು ಕೂಡ ಸಂಘಕ್ಕೆ ಕರತಾ ಮಲಕವಾದ ವಿದ್ಯೆಯಲ್ಲಿ ಸಿದ್ಧ ಹಸ್ತವಿದೆ.

ವರ್ಷದ ಸಾಧನೆ: ಸಂಘದ ಬಿಗಿ ಮುಷ್ಠಿ ಯಲ್ಲಿ ಗೊಂಬೆಯಾದ ಬೊಮ್ಮಾಯಿ



ಕೃಪೆ: ಪಿ. ಮಹಮ್ಮದ್

ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ನಂತರದ ಕೆಲವು ದಿನಗಳಲ್ಲಿ ಮಂಗಳೂರಿನಲ್ಲಿ ನಡೆಯುತ್ತಿರುವ ಸಂಘ ಪರಿವಾರದ 'ಅನೈತಿಕ ಪೊಲೀಸ್ ಗಿರಿ'ಯ ಬಗ್ಗೆ ಮಾಧ್ಯಮದವರು ಕೇಳಿದಾಗ 'ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಇಲ್ಲದಿರುವಾಗ ಇವು ಘಟಿಸುತ್ತವೆ' ಎಂದು ತತ್ವಜ್ಞಾನಿಯಂತೆ ಹೇಳುವ ಮೂಲಕ ಪರಿವಾರದ ಪುಂಡಾಟಕೆಗಳನ್ನು ಬಹಿರಂಗವಾಗಿಯೇ ಸಮರ್ಥಿಸಿ ಪ್ರೋತ್ಸಾಹಿಸಿದರು.

ಬೊಮ್ಮಾಯಿ ಕಡು ಹಿಂದುತ್ವವಾದಿ ಅಲ್ಲ ಎನ್ನುವ ಕಲ್ಪನೆಯನ್ನು ಈ ವರುಷದುದ್ದಕ್ಕೂ ಚಿಂದಿ ಮಾಡಿದರು. ಅದರರ್ಥ ಈಶ್ವರಪ್ಪ, ರೇಣುಕಾಚಾರ್ಯ, ತೇಜಸ್ವಿ ಸೂರ್ಯ, ಪ್ರತಾಪಸಿಂಹ ನಂತಹ ಕೆಲವು ಹರುಕುಬಾಯಿ ನಾಯಕರಂತೆ ಬೊಮ್ಮಾಯಿ ಮಾತನಾಡದಿದ್ದರೂ ಸಂಘಪರಿವಾರ ಮಾಡಿದ್ದನ್ನೆಲ್ಲಾ ಸಮರ್ಥಿಸುತ್ತಾ, ಮತ್ತಷ್ಟು ಮಾಡಲು ಅವಕಾಶಗಳನ್ನು ಕಲ್ಪಿಸುತ್ತಾ ಶಿಸ್ತಿನ ವಿನಮ್ರ ಸ್ವಯಂ ಸೇವಕನಾಗಿ ಅಂಜನಾದ್ರಿ ಬೆಟ್ಟದ 'ಹನುಮ'ನಾದರು.

ಮುಂದೆ ಸಂಘಪರಿವಾರ ತೀವ್ರವಾಗಿ ಕೋಮುವಾದಿ ಧೃವೀಕರಣವನ್ನು ಹೆಚ್ಚಿಸುವ ಕ್ರಿಶ್ಚಿಯನ್, ಮುಸ್ಲಿಮರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆಸಿದಾಗ, ಆನಂತರ ಅಂತರಾಷ್ಟ್ರೀಯ ಗಮನ ಸೆಳೆದ ಹಿಜಾಬ್ ವಿವಾದದಲ್ಲಿ, ಮುಸ್ಲಿಮರ ಆರ್ಥಿಕ ವಹಿವಾಟಿಗೆ ಹಾಕಲಾದ ಬಹಿಷ್ಕಾರಗಳು, ಪುಟ 4 ಕ್ಕೆ

2022 ಆಗಸ್ಟ್ 6 ರಿಂದ 12 ರವರೆಗೆ
ಜನಶಕ್ತಿ ಪತ್ರಿಕೆ ಪ್ರಸಾರ ಅಭಿಯಾನ ಸಪ್ತಾಹ
ಆಗಸ್ಟ್ 11 ಇಡೀ ದಿನ
ಬೆಳಗಿನ 8 ಗಂಟೆಯಿಂದ ರಾತ್ರಿ 8 ರವರೆಗೆ
ಸಾಮೂಹಿಕ ಚಂದಾ ನೊಂದಾವಣಿ ಅಭಿಯಾನ
ಪಾಲ್ಗೊಳ್ಳಿ, ಯಶಸ್ವಿಗೊಳಿಸಿ

ಕಾಂ. ತಿರುಮಲಾಚಾರ್ ನಿಧನ



ಜೀವ ವಿಮಾ ನೌಕರರ ನಾಯಕ ಸಿಪಿಐ(ಎಂ) ನ ಮೈಸೂರು ಜಿಲ್ಲಾ ಸಂಘಟನಾ ಸಮಿತಿಯ ಮಾಜಿ ಕಾರ್ಯದರ್ಶಿಗಳಾದಿದ್ದ ಕಾಂ. ತಿರುಮಲಾಚಾರ್ ಅವರು ಮೈಸೂರಿನಲ್ಲಿ ನಿಧನರಾಗಿದ್ದಾರೆ. ಅವರು ವಿಮಾ ನೌಕರರ anti-automation ಚಳುವಳಿ (1968–70) ಯ ಕಾರಣ ಮಾರ್ಕ್ಸ್‌ವಾದಿ ಚಿಂತನೆಗೆ ಆಕರ್ಷಿತರಾದರು. ಎಲ್ಐಸಿಯ ಉಡುಪಿ ಮತ್ತು ಬೆಂಗಳೂರು ವಿಭಾಗಗಳಲ್ಲಿ ಕೆಲಸ ಮುಗಿಸಿ ಮೈಸೂರಿಗೆ ವರ್ಗಾವಣೆ ಆದರು. ವರ್ಗಾವಣೆ ಆಗಿ ಬಂದ ನಂತರ ಮಾರ್ಕ್ಸ್ ವಾದಿ ಗುಂಪುಗಳಲ್ಲಿ ಸಕ್ರಿಯರಾಗಿದ್ದರು. ತುರ್ತು ಪರಿಸ್ಥಿತಿ, ವಿಮಾ ನೌಕರರ 1974 ಮತ್ತು 1981 ರ ಅನಿರ್ದಿಷ್ಟ ಮುಷ್ಕರಗಳಲ್ಲಿ ಮುಂಚೂಣಿ ಪಾತ್ರ ವಹಿಸಿದರು.

ತುರ್ತು ಪರಿಸ್ಥಿತಿಯ ನಂತರ ಸಿಪಿಐ(ಎಂ) ಸೇರಿದ ಕಾ॥ ತಿರುಮಲಾಚಾರ್, ಪಕ್ಷದ ಮೈಸೂರು ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾಗಿ, ನಂತರ ಪಕ್ಷದ ಕಾರ್ಯದರ್ಶಿ ಆಗಿ ಇಲ್ಲಿನ ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಯ ಬೆಳವಣಿಗೆಗೆ ಕಾರಣರಾದರು.

ಮೃದು ಮಾತಿನ, ದೃಢ ನಿಲುವಿನ ಸಂಗಾತಿ ಮಾರ್ಕ್ಸ್ ವಾದಿ ಸಿದ್ದಾಂತಕ್ಕೆ ತಮ್ಮ ಕೊನೆಯುಸಿರು ಇರುವವರೆಗೂ ತಮ್ಮನ್ನು ಅರ್ಪಿಸಿಕೊಂಡಿದ್ದರು. ಇಂತಹ ಸಂಗಾತಿಗಳ ಬದುಕು ನಮಗೆ ಮಾರ್ಗದರ್ಶಿ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಜಿಲ್ಲಾ ಸಂಘಟನಾ ಸಮಿತಿಯೂ ಶ್ರದ್ದಾಂಜಲಿಯನ್ನು ಸಲ್ಲಿಸಿದೆ.

ಬಲವಂತದ ಭೂ ಸ್ವಾಧೀನಕ್ಕೆ ತುಮಕೂರು ರೈತನ ಬಲಿ-ರೈತ ಸಂಘ ಆಕ್ರೋಶ



ಪರಿಹಾರ ನೀಡದೇ ಭೂಮಿ ಕಿತ್ತುಕೊಂಡಿದ್ದರಿಂದಾಗಿ ಮನ ನೊಂದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಲಕಟ್ಟೆ ಗ್ರಾಮದ ರೈತ ರಂಗಣ್ಣ ರವರ ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ. ಇದು ಹೆದ್ದಾರಿ ಕಾಮಗಾರಿ ವೇಗಕ್ಕೆ ಪಡೆದಿರುವ ಬಲಿ ಎಂದು ಟೀಕಿಸಿದೆ.

'ಕೆ.ಬಿ.ಕ್ರಾಸ್ ನಿಂದ ಹುಳಿಯಾರಿನವರೆಗೂ ರಸ್ತೆ ಕಾಮಗಾರಿ ನಡೆಸುವ ಉದ್ದೇಶಕ್ಕೆ ರಂಗಣ್ಣ ರವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ ಪರಿಹಾರ ನೀಡಿರಲಿಲ್ಲ. ಪರಿಹಾರ ನೀಡದೇ ಭೂಮಿ ಬಿಡುವುದಿಲ್ಲ ಎಂದು ರಂಗಣ್ಣ ನ್ಯಾಯಯುತವಾಗಿ ಒತ್ತಾಯಿಸುತ್ತಿದ್ದರು. ಆದರೆ ರೈತನ ನ್ಯಾಯಬದ್ಧವಾದ ಹಕ್ಕನ್ನು ಉಲ್ಲಂಘಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಬಲವಂತವಾಗಿ ಭೂಮಿ ಕಿತ್ತುಕೊಂಡಿದ್ದರು. ಇದರಿಂದ ಮನನೊಂದು ರೈತ ರಂಗಣ್ಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಈ ಸಾವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರವೇ ಹೊಣೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರವು ರೈತ ಚಳವಳಿಯ ಒತ್ತಡದಿಂದ ತಂದಿದ್ದ 2013 ರ ಭೂ ಸ್ವಾಧೀನ ಕಾಯ್ದೆಗೆ ವಿರುದ್ಧವಾಗಿ ಕರ್ನಾಟಕ ರಾಜ್ಯ ಸರ್ಕಾರವು 2019 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ತಂದಿರುವ ಕರ್ನಾಟಕ ಭೂ ಸ್ವಾಧೀನ ತಿದ್ದುಪಡಿ ಕಾಯ್ದೆ 2019 ರಲ್ಲಿ 10(ಎ) ಎನ್ನುವ ಹೊಸ ಪರಿಚ್ಛೇದವನ್ನು ಸೇರಿಸುವ ಮೂಲಕ ಭೂ ಸ್ವಾಧೀನಕ್ಕೆ ಬಾಧಿತ ರೈತ ಸಮುದಾಯದ ಒಪ್ಪಿಗೆ ಕಡ್ಡಾಯ ಎನ್ನುವ 2013 ರ ಕಾಯ್ದೆಯ ಷರತ್ತನ್ನು ತೆಗೆದು ಹಾಕಿದೆ. ಪರಿಹಾರ ನೀಡದೇ ವಶಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ ಕೋರ್ಟ್‌ನ ತಡೆಯಾಜ್ಞೆಯೂ ಯಾವುದೇ ಪರಿಣಾಮ ಬೀರದಂತೆ ಪರಿಚ್ಛೇದ 24(ಎ) ಗೆ ತಿದ್ದುಪಡಿ ತರಲಾಗಿದೆ. ಹೀಗೆ ಯಾವುದೇ ಸಾಮಾಜಿಕ ಪರಿಶೋಧನೆ ಇಲ್ಲದೇ, ರೈತ ಸಮುದಾಯದ ಒಪ್ಪಿಗೆ ಇಲ್ಲದೇ ಯಾವುದೇ ಪರಿಹಾರ ನೀಡದೇ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಸರ್ಕಾರಿ ಹಾಗೂ ಖಾಸಗಿ ಏಜೆನ್ಸಿಗಳಿಗೆ ಪರಮಾಧಿಕಾರ ನೀಡಿರುವ ಕರ್ನಾಟಕ ರಾಜ್ಯ ಭೂ ಸ್ವಾಧೀನ ತಿದ್ದುಪಡಿ ಕಾಯ್ದೆ 2019 ಅನ್ನು ರದ್ದುಪಡಿಸಬೇಕು' ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಆಗ್ರಹಿಸಿದೆ.

'ಯಾವುದೇ ಕಾರಣಕ್ಕೂ ರೈತರ ಗಮನಕ್ಕೆ ತರದೇ, ರೈತರ ಒಪ್ಪಿಗೆ ಪಡೆಯದೇ, ರೈತರಿಗೆ ಪರಿಹಾರ ನೀಡದೇ ಭೂಮಿ ವಶಕ್ಕೆ ಪಡೆಯಬಾರದು. ಈಗಾಗಲೇ ಬೇಸಾಯ ನಷ್ಟ, ಸಾಲ ಬಾಧೆ ಕಾರಣಗಳಿಂದ ನಡೆಯುತ್ತಿರುವ ರೈತರ ಆತ್ಮಹತ್ಯೆ ಪಟ್ಟಿಗೆ ಸ್ವಾಧೀನದ ವಂಚನೆಯೂ ಸೇರ್ಪಡೆ ಆಗಿರುವುದು ಸರ್ಕಾರದ ಕ್ರೂರ ಮುಖವನ್ನು ಬಯಲುಗೊಳಿಸುತ್ತದೆ' ಎಂದು ಟೀಕಿಸಿದೆ. 'ಬಲವಂತವಾಗಿ, ಯಾವುದೇ ಪರಿಹಾರ ನೀಡದೇ ಭೂ ಸ್ವಾಧೀನಕ್ಕೆ ಅವಕಾಶ ನೀಡಿರುವ ಕರ್ನಾಟಕ ಭೂ ಸ್ವಾಧೀನ ತಿದ್ದುಪಡಿ ಕಾಯ್ದೆ 2019 ರದ್ದಾಗಬೇಕು. ಈ ಕೂಡಲೇ ಹೆದ್ದಾರಿ ಕಾಮಗಾರಿಗೆ ಭೂಮಿ ಕಳೆದುಕೊಂಡಿರುವ ರೈತ ರಂಗಣ್ಣ ಕುಟುಂಬಕ್ಕೆ ಭೂ ಸ್ವಾಧೀನ ಪರಿಹಾರ ಹಣವನ್ನು ಮಾರುಕಟ್ಟೆ ದರದ ನಾಲ್ಕು ಪಟ್ಟು ಪಾವತಿಸಬೇಕು. ರಂಗಣ್ಣ ಅವರ ಕುಟುಂಬಕ್ಕೆ ಕನಿಷ್ಠ 25 ಲಕ್ಷ ರೂ ಪರಿಹಾರ ಹಾಗೂ ಕುಟುಂಬದ ಸದಸ್ಯರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಲ್ಲಿ ಖಾಯಂ ಉದ್ಯೋಗ ಕೊಡಬೇಕು' ಎಂದು ಆಗ್ರಹಿಸಿದೆ. •



ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ಸಮಾಲೋಚನಾ ಸಭೆ: 25ನೇ ಸಂಸ್ಮರಣಾ ದಿನವನ್ನು ಆಚರಿಸಲು ನಿರ್ಧಾರ

ಮಹಾ ಮಾನವತಾವಾದಿಗಳಾದ ಸಂತ ಮದರ್ ತೆರೇಸಾರವರ 25ನೇ ಸಂಸ್ಮರಣಾ ದಿನಾಚರಣೆಯನ್ನು ವ್ಯವಸ್ಥಿತವಾಗಿ ನಡೆಸುವ ಅಂಗವಾಗಿ ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ಸಮಾಲೋಚನಾ ಸಭೆಯನ್ನು ನಗರದ ಸಂದೇಶ ಸಂಸ್ಥೆಯಲ್ಲಿ ವೇದಿಕೆಯ ಗೌರವಾಧ್ಯಕ್ಷರಾದ ರೋಯ್ ಕ್ಯಾಸ್ತಲಿನೋ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪ್ರೀತಿಯ ದ್ಯೋತಕವಾದ ಸಂತ ಮದರ್ ತೆರೇಸಾರವರ ನಿಸ್ವಾರ್ಥ ಸೇವೆ ಹಾಗೂ ಆದರ್ಶಗಳನ್ನು ಭವಿಷ್ಯದ ವಿದ್ಯಾರ್ಥಿ ಯುವಜನರಿಗೆ ತಿಳಿ ಹೇಳುವ ಮೂಲಕ ಸುಂದರ ಸಮಾಜದ ನಿರ್ಮಾಣಕ್ಕೆ ಕಟಿ ಬದ್ಧರಾಗಬೇಕಾಗಿದೆ. ಈ ನಿಟ್ಟಿನಲ್ಲಿ ಜನ್ಮ ತಾಳಿದ ವೇದಿಕೆಯು ಕಳೆದ 5 ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಾಗೃತಿ ಮೂಡಿಸಿದೆ. ಈ ವರ್ಷ ಮದರ್ ತೆರೇಸಾರವರ 25ನೇ ಸಂಸ್ಮರಣಾ ದಿನಾಚರಣೆಯನ್ನು ಜಿಲ್ಲಾ ಮಟ್ಟದ ವಿಚಾರ ಸಂಕಿರಣ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಸಾಕ್ಷ್ಯಚಿತ್ರ ಪ್ರದರ್ಶನ, ಸೌಹಾರ್ದ ಗಾಯನದ ಮೂಲಕ ಅತ್ಯಂತ ಯಶಸ್ವಿಯಾಗಿ ನಡೆಸಲು ತೀರ್ಮಾನಿಸಲಾಯಿತು.

ವೇದಿಕೆಯಲ್ಲಿ ಸಂದೇಶ ಸಂಸ್ಥೆಯ ನಿರ್ದೇಶಕರಾದ ಫಾ.ಸುದೀಪ್ ಪೌಲ್, ದಲಿತ ಚಳುವಳಿಯ ಹಿರಿಯ ನೇತಾರ ಎಂ.ದೇವದಾಸ್, ಯುವ ನಾಯಕರಾದ ಮುನೀರ್ ಕಾಟಿಪಳ್ಳ, ಮಹಿಳಾ ಮುಖಂಡರಾದ ಸುಮತಿ ಎಸ್ ಹೆಗ್ಡೆ, ವಿಚಾರ ವೇದಿಕೆಯ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಉಪಸ್ಥಿತರಿದ್ದರು.

ಸಭೆಯಲ್ಲಿ ಪ್ರಮುಖರಾದ ಫಾ.ರೂಪೇಶ್ ಮಾಡ್ತಾ, ಜೋಸೆಫ್ ಕ್ರಾಸ್ತಾ, ಫಾ.ಜೆ.ಬಿ.ಸಲ್ಡಾನಾ, ಸ್ಟಾನಿ ಲೋಬೋ, ರೊನಾಲ್ಡ್ ಗೋಮ್ಸ್, ಲ್ಯಾನ್ಸಿ ಕಾರ್ಲೋ, ಲ್ಯಾನ್ಸಿ ಡಿ ಕುನ್ಹಾ, ಸುಶೀಲ್ ನೊರೋನ್ಹಾ, ಜೈಸನ್ ಡಿಸೋಜ, ಆಲ್ವಿನ್ ಮೊಂತೆರೋ, ಇಸ್ಮಾಯಿಲ್ ಶಾಫಿ ಬಬ್ಬುಕಟ್ಟೆ, ಮಹಮ್ಮದ್ ಕುಂಜತ್ತಬೈಲ್, ಡಾ. ಕೃಷ್ಣಪ್ಪ ಕೊಂಚಾಡಿ ಯಾದವ ಶೆಟ್ಟಿ, ಬಿ.ಕೆ.ಇಮ್ತಿಯಾಜ್, ಮನೋಜ್ ವಾಮಂಜೂರು, ಯೋಗೀಶ್ ಜಪ್ಪಿನಮೊಗರು, ರಘು ಎಕ್ಕಾರು, ವಿನೀತ್ ದೇವಾಡಿಗ, ರೇವಂತ್ ಕದ್ರಿ, ರೋಬಿನ್ ಪ್ರೀತಂ, ಶಾಂತಿ ಡಾಯಸ್, ಡಯಾನ ಡಿಸೋಜ, ಪ್ಲೋರಿನ್ ಡಿಸೋಜ, ಪ್ಲೇವಿ ಕ್ರಾಸ್ತಾ, ನ್ಯಾನ್ಸಿ ಅತ್ತಾವರ, ಹರಿಪ್ರಸಾದ್ ರೈ, ಕಿಶೋರ್ ಫರ್ನಾಂಡೀಸ್, ಪ್ಲೇವಿ ಡಿಮೆಲ್ಲೋ ಮುಂತಾದವರು ಉಪಸ್ಥಿತರಿದ್ದರು.

ವರ್ಷದ ಸಾಧನೆ: ಸಂಘದ ಬಿಗಿ ಮುಷ್ಟಿಯಲ್ಲಿ ಗೊಂಬೆಯಾದ ಬೊಮ್ಮಾಯಿ

ಪುಟ 3 ರಿಂದ

ಧಾಳಿಗಳು, ಹಲಾಲ್ ಕಟ್ ಜಟ್ಕಾ ಕಟ್ ಮುಂತಾದ ವಿವಾದ, ಆಜಾನ್ ವಿರುದ್ಧ ಮತ್ತು ಶಿವಮೊಗ್ಗ, ಹುಬ್ಬಳ್ಳಿ ಯಂತಹ ರಾಜ್ಯದ ಹಲವೆಡೆಗಳಲ್ಲಿ ನಡೆದ ಕೋಮು ಗಲಭೆಗಳು, ಒಂದೆಡೆ ಮುಸ್ಲಿಂ ಯುವಕರ ಕೊಲೆಗಳು, ಸಂಘ ಪರಿವಾರದ ಕಾರ್ಯಕರ್ತರ ಕೊಲೆಗಳು ಸಂಭವಿಸಿದಾಗ ಸರ್ಕಾರದ ಆಡಳಿತ ಯಂತ್ರ ಮತ್ತು ವಿಶೇಷವಾಗಿ ಮುಖ್ಯಮಂತ್ರಿ ಬೊಮ್ಮಾಯಿಯವರು ನಡೆದುಕೊಂಡ ಪಕ್ಷಪಾತದ ರೀತಿ, ಪಠ್ಯಕ್ರಮದ ವಿಕೃತಿಗಳ ಸಮರ್ಥನೆ, ಕರ್ನಾಟಕ ರಾಜ್ಯದ ಶಾಂತಿ ಸೌಹಾರ್ದತೆಯನ್ನು ಹಾಳು ಗೆಡಹುವ ವಿಸ್ತೃತ ಪ್ರಯತ್ನಗಳಾಗಿವೆ. ಕೇಂದ್ರದ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಅತಿ ಉತ್ಸುಕತೆ, ಶಾಲೆಗಳನ್ನು ಮುಚ್ಚುವ ನಿರ್ಧಾರಗಳು ಖಾಸಗೀಕರಣದ ಪರವಾಗಿ ಶಿಕ್ಷಣ ವಿರೋಧಿಯಾಗಿವೆ. ಅಲ್ಪಸಂಖ್ಯಾತರ ವಿಶೇಷವಾಗಿ ಜನತೆಯ ಪ್ರಜಾಪ್ರಭುತ್ವದ ಹಕ್ಕುಗಳನ್ನ ದಮನಿಸುವಂತಹ ಸಂವಿಧಾನದ ಆಶಯಗಳಿಗೆ ಪೆಟ್ಟು ಕೊಡುವ ಮತಾಂತರ ನಿಷೇಧ ಕಾಯ್ದೆ, ಭೂ ಸಂರಕ್ಷಣಾ ಕಾಯ್ದೆ, ಮುಂತಾದವುಗಳನ್ನು ಈ ಸರ್ಕಾರ ರೂಪಿಸಿದೆ. ಸರಕಾರದ ಸ್ವಾಮ್ಯದಲ್ಲಿರುವ ಮುಜರಾಯಿ ಇಲಾಖೆಯ ಒಡೆತನದ ದೇವಸ್ಥಾನಗಳನ್ನು ಖಾಸಗಿಯವರಿಗೆ ವಹಿಸುವ ಪ್ರಸ್ತಾವನೆಯನ್ನು ಸೂಚಿಸಿದೆ. ಇಲ್ಲೆಲ್ಲಾ ಸಮಾಜವಾದಿ (ಅಪ್ಪನ) ಹಿನ್ನೆಲೆಯ ಬೊಮ್ಮಾಯಿ ಸಂಘದ ನಿಷ್ಠ ದೊಣ್ಣೆಯಾಗಿ ಸೇವೆ ಸಲ್ಲಿಸಿದ್ದಾರೆ.

ಈ ನಡುವಿನಲ್ಲಿಯೇ ಬೊಮ್ಮಾಯಿ ಅವರ ಗುರು 'ರಾಜಾಹುಲಿ' ಬಿ.ಎಸ್. ಯಡಿಯೂರಪ್ಪ ನವರು ಇಲಿಯಂತಾಗಿ ರಾಜಕೀಯ ನಿವೃತ್ತಿಯನ್ನು ಘೋಷಿಸಿದ್ದು ಸಂಘದ ಒಳ ಹೊಡೆತದ ಒಂದು ಅದೃಶ್ಯ 'ಪವಾಡ'ದ ಅದ್ಭುತಗಳಲ್ಲಿ ಒಂದು. ಬೊಮ್ಮಾಯಿಯವರಿಗೆ ಕೆಲವು ಆರ್ಥಿಕ ಲಾಭಗಳು ಇರಬಹುದು. ಆದರೆ ಅವರೀಗ ಸಂಘ ಪರಿವಾರದ ಪೂರ್ಣ ಕೈಗೊಂಬೆ. ಯಾಕೆಂದರೆ ಇಡೀ ಅವಧಿಯ ಉದ್ದಕ್ಕೂ ಅವರ ಆತ್ಮ ಸಾಕ್ಷಿ ಜಾಗೃತಗೊಂಡು ಸಣ್ಣ ದನಿಯಲ್ಲಾದರೂ ಕುಯ್ಂ ಗುಡಲೇ ಇಲ್ಲ. ಸ್ವಂತಿಕೆಯಿಂದ ನಡೆದುಕೊಳ್ಳುವ ಅಥವಾ ಭಿನ್ನಾಭಿಪ್ರಾಯದ ಚಕಾರ ದನಿ ಎತ್ತುವ ಒಂದೇ ಒಂದು ಪ್ರಸಂಗವನ್ನು ತೋರಲಿಲ್ಲ. ಬಿ.ಎಲ್.ಸಂತೋಷ ರಂತಹ ಚಡ್ಡಿ ಚತುರನ ಮುಂದೆ ಬಸವರಾಜ ಬೊಮ್ಮಾಯಿ 'ಕೌಲೆತ್ತಿನ ಬಸವ'ನಂತೆ ಆಗಿರುವುದೇ ಒಂದು ವರ್ಷದ ಮಹಾ ಪರಿವರ್ತನೆ!

ಹಿಂದೆ ಯಡಿಯೂರಪ್ಪನವರ ಸರ್ಕಾರವಾಗಲಿ ಅಥವಾ ಬಸವರಾಜ ಬೊಮ್ಮಾಯಿ ಅವರ ಸರ್ಕಾರವಾಗಲಿ ಅಂತಿಮವಾಗಿ ಇದು ಕಾರ್ಪೊರೇಟ್ ಕಂಪನಿಗಳ ಗುಲಾಮನಾಗಿ ➚

ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನಿಗೆ ಆಗ್ರಹಿಸಿ ರೈತರ ಪ್ರತಿಭಟನಾ ಧರಣಿ

ಬೆಂಬಲ ಬೆಲೆ (MSP) ಒದಗಿಸಲು ಕಾನೂನು ಜಾರಿ ಮಾಡುವಂತೆ, ದೇಶದಾದ್ಯಂತ ಪ್ರತಿಭಟನಾ ರೈತರ ಮೇಲಿನ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು, ಲಖೀಂಪುರ್ ಖೇರಿ ರೈತರ ಹತ್ಯಾಕಾಂಡದ ಪ್ರಮುಖ ಪಿತೂರಿ ಆರೋಪಿ ಅಜಯ್ ಮಿಶ್ರಾ ರನ್ನು ಕೇಂದ್ರ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ದೇಶದಾದ್ಯಂತ ಸಂಯುಕ್ತ ಕಿಸಾನ್ ಮೋರ್ಚಾ ನೀಡಿದ್ದ ಕರೆಯ ಭಾಗವಾಗಿ ಜುಲೈ 31 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ರೈತರು –ಕಾರ್ಮಿಕರು ಪ್ರತಿಭಟನಾ ಧರಣಿ ನಡೆಸಿದರು.

ಐತಿಹಾಸಿಕ ದೆಹಲಿ ರೈತ ಹೋರಾಟದ ಸಂದರ್ಭದಲ್ಲಿ ಕರಾಳ ಕೃಷಿ ಕಾಯ್ದೆಗಳನ್ನು ರದ್ದುಪಡಿಸಿ ಉಳಿಕೆ ಹಕ್ಕೊತ್ತಾಯಗಳನ್ನು ಈಡೇರಿಸಲು ಕ್ರಮ ವಹಿಸುವುದಾಗಿ ಡಿಸೆಂಬರ್ 9, 2021 ರಂದು ಲಿಖಿತ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿತ್ತು. ಆದರೆ ಭರವಸೆಗೆ ವಿರುದ್ದವಾಗಿ ನಡೆದುಕೊಳ್ಳುತ್ತಾ ರೈತ ಸಮುದಾಯಕ್ಕೆ ದ್ರೋಹ ವೆಸಗಿದೆ. ಕನಿಷ್ಠ ಬೆಂಬಲ ಬೆಲೆ ಖಾತರಿ ಸಂಬಂಧ ಸಮಿತಿ ರಚಿಸುವುದಾಗಿಯೂ, ಆ ಸಮಿತಿಯಲ್ಲಿ ರೈತ ಪ್ರತಿನಿಧಿಗಳನ್ನು ಒಳಗೊಳ್ಳುವುದಾಗಿಯೂ ಹೇಳಿದ್ದ ಕೇಂದ್ರ ಸರ್ಕಾರ ಕರಾಳ ಕೃಷಿ ಕಾಯ್ದೆಗಳನ್ನು ಸಮರ್ಥಿಸಿಕೊಳ್ಳುತ್ತಿದ್ದವರೇ ಬಹುಸಂಖ್ಯಾತರಿರುವಂತೆ ಸಮಿತಿ ರಚಿಸಿದೆ. ಲಖೀಂಪುರ್ ಖೇರಿಯಲ್ಲಿ



ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ರೈತರ ಮೇಲೆ ಕಾರು ನುಗ್ಗಿಸಿ ಕೊಲೆ ಮಾಡಿರುವ ಅಪರಾಧಿಗಳನ್ನು ಕೇಂದ್ರ ಸರ್ಕಾರ ಹಾಗೂ ಉತ್ತರ ಪ್ರದೇಶ ಸರ್ಕಾರಗಳು ರಕ್ಷಿಸುತ್ತಿವೆ. ಈ ಹತ್ಯಾಕಾಂಡ ಸಂಚಿನ ಪ್ರಮುಖ ಸೂತ್ರಧಾರಿಯಾದ ಅಜಯ್ ಮಿಶ್ರಾ ಈಗಲೂ ಕೇಂದ್ರ ಮಂತ್ರಿಯಾಗಿ ಮುಂದುವರೆದಿದ್ದಾರೆ. ಐತಿಹಾಸಿಕ ದೆಹಲಿ ರೈತ ಹೋರಾಟದ ಸಂದರ್ಭದಲ್ಲಿ ಹಾಕಿದ್ದ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯದೇ ರೈತರಿಗೆ ಬಂಧನದ ವಾರೆಂಟ್ ಗಳನ್ನು ಹೊರಡಿಸಲಾಗುತ್ತಿದೆ. ಇಂತಹ ದ್ರೋಹದ ಧೋರಣೆಗಳನ್ನು ಕೈ ಬಿಟ್ಟು ತಾನೂ ಕೊಟ್ಟ ಭರವಸಯಂತೆ ನಡೆದುಕೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ದೇವನೂರು ಮಹಾದೇವ ರವರ ಮೇಲೆ ಕೀಳು ಟೀಕೆಗೆ ಖಂಡನೆ

ಆರ್.ಎಸ್.ಎಸ್. ಆಳ ಆಗಲ ಪುಸ್ತಕ ಬರೆದಿರುವ ಹಿನ್ನೆಲೆಯಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ ರವರನ್ನು ಗುರಿಯಾಗಿರಿಸಿ ಬಲಪಂಥೀಯ ತೀವ್ರಗಾಮಿ ಶಕ್ತಿಗಳು ಸಾಮಾಜಿಕ ಜಾಲತಾಣ ಸೇರಿದಂತೆ ಎಲ್ಲೆಡೆ ಕೀಳು ಮಟ್ಟದ ಟೀಕೆ–ನಿಂದನೆ ಮಾಡುತ್ತಿರುವುದನ್ನು ಧರಣಿ ನಿರತರು ಖಂಡಿಸಿದರು.

ದೇವನೂರು ಮಹಾದೇವ ಸೇರಿದಂತೆ ಸುಮಾರು 60 ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಗಣ್ಯರಿಗೆ ಕೊಲೆ ಬೆದರಿಕೆ ಒಡ್ಡಿರುವುದು ವರದಿಯಾದರೂ ರಾಜ್ಯ ಸರ್ಕಾರ ಪ್ರತಿಕ್ರಿಯಿಸದೇ ಮೌನವಾಗಿದೆ. ಎಂ.ಎಂ. ಕಲ್ಬುರ್ಗಿ, ಗೌರಿ ಲಂಕೇಶ್ ರವರ ಕೊಲೆಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಕೊಲೆ ಬೆದರಿಕೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಆರೋಪಿಗಳನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆ ಧರಣಿಯ ನೇತೃತ್ವವನ್ನು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡ ಟಿ ಯಶವಂತ, ರಾಜ್ಯ ರೈತ ಸಂಘದ ಕಛೇರಿ ಕಾರ್ಯದರ್ಶಿ ಪಿ ಗೋಪಾಲ್, ಜೆಸಿಟಿಯು ಸಂಚಾಲಕ ಕೆ.ವಿ.ಭಟ್, ಎಐಸಿಸಿಟಿಯು ರಾಜ್ಯ ಮುಖಂಡ ಅಪ್ಪಣ್ಣ, ಎಐಕೆಕೆಎಂಎಸ್ ನ ಶಿವಪ್ರಕಾಶ್, ವಕೀಲರ ಸಂಘಟನೆಯ ಮೈತ್ರಿ, ವಿದ್ಯುತ್ ಬಳಕೆದಾರರ ಸಂಘದ ಜ್ಞಾನಮೂರ್ತಿ ವಹಿಸಿದ್ದರು.

ಶಾಲೆಗಳನ್ನು ಮುಚ್ಚುವುದಲ್ಲ, ಬಲಪಡಿಸಿ–ವಿದ್ಯಾರ್ಥಿಗಳ ಆಗ್ರಹ

ರಾಜ್ಯ ಸರಕಾರ ರಾಜ್ಯದಾದ್ಯಂತ 13,800 ಸರಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರ ಮಾಡಿರುವುದು ಬಡವರ ಹಾಗೂ ದಲಿತರ ಮಕ್ಕಳಿಗೆ ಶಿಕ್ಷಣವನ್ನು ವಂಚಿಸುವ ಮತ್ತು ಕನ್ನಡ ವಿರೋಧಿ ನಿಲುಮೆಯಾಗಿದೆಯೆಂದು ಭಾರತ ವಿದ್ಯಾರ್ಥಿ ಫೆಡರೇಷನ್ SFI ಸಂಘಟನೆಯ ರಾಜ್ಯ ಅಧ್ಯಕ್ಷ ಅಮರೇಶ ಕಡಗದ ಆರೋಪಿಸಿದರು.

ಇಂದು ಗಂಗಾವತಿಯಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಸಿ ಮಾತನಾಡಿ, ರಾಜ್ಯ ಸರ್ಕಾರ ಈ ಹಿಂದೆ 2011 ರಲ್ಲಿ ಪ್ರೋ: ಗೋವಿಂದ ಅವರ ವರದಿ ತರಿಸಿಕೊಂಡು ಸುಮಾರು 12000 ಸಾವಿರ ಸರಕಾರಿ ಶಾಲೆಗಳನ್ನು ಮುಚ್ಚಲು ಚಿಂತನೆ ಮಾಡುತ್ತ ಇತ್ತು ಅಂದಿನ ಮುಖ್ಯಮಂತ್ರಿ ಸದಾನಂದ ಗೌಡ ಅವರ ನಿಲುವನ್ನು ವಿರೋಧಿಸಿ ಎಸ್ಎಫ್ಐ ಸಂಘಟನೆ ಅಂದು ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ಮಾಡಿತ್ತು. ಅಷ್ಟೇ ಅಲ್ಲ ಗಂಗಾವತಿ ನಗರದಲ್ಲಿ ಅಂದು ನಡೆದ 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದ ಮುಖ್ಯಮಂತ್ರಿಗಳ ವಿರುದ್ಧ ಸಮ್ಮೇಳನದಲ್ಲಿ ಪ್ರತಿಭಟನೆ ಮಾಡಿ ಬಂಧನ ಕೊಳ್ಳಗಾಗಿ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಅಂದು ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರಿ ಶಾಲೆಯಲ್ಲಿ ಒಂದು ಮಗುವಿದ್ದರೂ ಶಾಲೆಯನ್ನು ಮುಚ್ಚುವುದಿಲ್ಲ ಎಂದು ಸರಕಾರ ಹೇಳಿತ್ತು ಮತ್ತು ಕಸಾಪ ಕಾರ್ಯಕ್ರಮದಲ್ಲಿ ನಿರ್ಣಯ ಮಾಡಲು ಸಾಧ್ಯವಾಗಿತ್ತು. ಇದನ್ನು ಮುಖ್ಯಮಂತ್ರಿಗಳು ಅಧಿಕಾರಿಗಳು ತಿಳಿದುಕೊಳ್ಳಲಿ ಎಂದರು.

ತಕ್ಷಣವೇ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಹಿಂಪಡೆಯ ಬೇಕೆಂದು ಸರಕಾರದ ಅಧಿಕಾರಿಗಳನ್ನು ಮತ್ತು ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದರು. ಮುಚ್ಚುವಿಕೆಯ ಪ್ರಮಾಣ ಬಹಳ ದೊಡ್ಡದಿದೆ, ಸುಮಾರು ಶೇ 20 ಕ್ಕೂ ಅಧಿಕವಾಗುತ್ತದೆ. ಇದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯ ಮುಂದುವರೆದ ದುರ್ನಡೆಯಾಗಿದೆ ಎಂದರು.

ರಾಜ್ಯದಲ್ಲಿ ಕನ್ನಡ ಶಾಲೆಗಳು ಮುಚ್ಚುವಂತಹ ದುಸ್ಥಿತಿಗೆ ಒಕ್ಕೂಟ ಹಾಗೂ ರಾಜ್ಯ ಸರಕಾರಗಳೇ ನೇರ ಹೊಣೆಗಾರರಾಗಿವೆ. ಶಾಲೆಗೆ ಬರ ಬೇಕಾದ ಮಕ್ಕಳು ಬರದೇ ಇರುವುದಕ್ಕೆ ಕಾರಣ ಪ್ರಾಥಮಿಕ ಶಾಲೆಗಳು ಮಕ್ಕಳನ್ನು ಆಕರ್ಶಿಸುತ್ತಿಲ್ಲ. ಅಂತಹ ಆಕರ್ಷಣೀಯ ಶೈಕ್ಷಣಿಕ ಕೇಂದ್ರಗಳನ್ನಾಗಿ ಅವುಗಳನ್ನು ಸಾಕಷ್ಟು ಅನುದಾನ ಒದಗಿಸಿ ಮೇಲ್ದರ್ಜೆಗೆ ಏರಿಸುವ ಅಗತ್ಯ ಕ್ರಮಗಳನ್ನು ಅನುಸರಿಸದೇ ಉಪೇಕ್ಷೆ ಮಾಡಿ, ನಾಯಿಕೊಡೆಗಳಂತೆ ಎದ್ದಿರುವ ಖಾಸಗೀ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ನೆರವಾಗುತ್ತಿರುವುದು ಪ್ರಮುಖ ಕಾರಣವಾಗಿದೆ.

ಪಕ್ಕದ ಕೇರಳ ರಾಜ್ಯದಲ್ಲಿ ಶಾಲೆಗಳ ಗುಣಮಟ್ಟವನ್ನು ವ್ಯಾಪಕವಾಗಿ ಹೆಚ್ಚಿಸಿರುವುದರಿಂದ, ಸಾವಿರಾರು ಖಾಸಗೀ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚುವಂತಾಗಿ, ಅಲ್ಲಿನ ಲಕ್ಷಾಂತರ ಮಕ್ಕಳು ಸಾರ್ವಜನಿಕ ಶಾಲೆಗಳಿಗೆ ವಾಪಾಸು ಬಂದಿರುವುದು ನಮ್ಮ ಕಣ್ಣ ಮುಂದಿದೆ.

ದೆಹಲಿ ಸರಕಾರ ನಡೆಸುವ ಶಾಲೆಗಳು ಅಂತರ್ರಾಷ್ಟ್ರೀಯ ಗುಣಮಟ್ಟದ ಶಾಲೆಗಳೆಂದು ಸ್ವತಃ ಪ್ರಧಾನ ಮಂತ್ರಿಗಳು ಜಗತ್ತಿಗೆ ಪರಿಚಯಿಸಿದ್ದಿದೆ.

ದೇಶದ ಅನುಭವ ಹೀಗಿರುವಾಗ, ಕರ್ನಾಟಕ ಸರಕಾರ ಶಿಕ್ಷಣವನ್ನು ಖಾಸಗೀಕರಿಸುವ ಮತ್ತು ಕೋಮುವಾದಿ ಕರಿಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಬಡವರು ಹಾಗೂ ಕನ್ನಡ ವಿರೋಧಿಯಾದ ನಿಲುಮೆಗಳನ್ನು ಕೈಬಿಟ್ಟು ಸರಕಾರಿ ಶಾಲೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸುವಂತಹ ಶೈಕ್ಷಣಿಕ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಅಗತ್ಯ ಬಜೆಟ್ ಒದಗಿಸಿ ಯೋಜಿತ ಕ್ರಮಗಳಿಗೆ ಮುಂದಾಗಬೇಕೆಂದು ಆಗ್ರಹಿಸಿದರು.

ಸರಕಾರಿ ಕನ್ನಡ ಶಾಲೆಗಳನ್ನು ಮುಚ್ಚುವುದರಿಂದ ಬಹುತೇಕ ಶಿಕ್ಷಣವನ್ನು ಸರ್ಕಾರಿ ಶಾಲೆ ಮೇಲೆ ಅವಲಂಬಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಶಿಕ್ಷಣದಿಂದ ವಂಚಿತರಾಗುತ್ತಾರೆ ಅಷ್ಟೇ ಅಲ್ಲ ಈ ಎರಡು ವರ್ಷದ ಕರೋನ್ ಸಂದರ್ಭದಲ್ಲಿ ಸುಮಾರು 10 ಲಕ್ಷ ವಿದ್ಯಾರ್ಥಿಗಳು ಶಾಲೆಯಿಂದ ಹೊರಗಡೆ ಉಳಿದಿದ್ದಾರೆ ಎಂಬ ಅಂಕಿ ಸಂಖ್ಯೆಯನ್ನು ನೀವು ಗಮನಿಸಬಹುದು ಇದರ ಮಧ್ಯೆ ಸತಕಾರ ಶಾಲೆಗಳ ವಿಲೀನ ಪ್ರಕ್ರಿಯ ಕೈ ಹಾಕಿರುವುದು ಸರಿಯಲ್ಲ ಕೂಡಲೇ ಆ ನಿರ್ಧಾರವನ್ನು ಕೈ ಬಿಟ್ಟು ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೊಡುವಲ್ಲಿ ಅಧಿಕಾರಿಗಳು ಶ್ರಮವಹಿಸಲಿ ಎಂದರು. ಪ್ರತಿಭಟನೆಯಲ್ಲಿ ಎಸ್ಎಫ್ಐ ತಾಲೂಕ ಕಾರ್ಯದರ್ಶಿ ಶಿವಕುಮಾರ, ಪ್ರಮುಖರಾದ ಸೋಮನಾಥ ಗೌಡ್ರ, ನಾಗರಾಜ ಸೂಗುರು, ಶರೀಫ್, ರಾಜಭಕ್ಷಿ, ಅಂಜಲಿ, ಪ್ರೀಯಾ, ಮಂಜುಳ, ನೇತ್ರ, ರೇಣುಕಾ, ಯಶೋಧ ಇತರರು ಇದ್ದರು.



ಕೋಮುವಾದಿಗಳ ಆಡಂಬೋಲದ ಮೈದಾನವಾಗಿ ಅವೆರಡರ ಸಂಯೋಜನೆಯಿಂದ ನಡೆಯುತ್ತಿದೆ ಎನ್ನುವುದು ನಿಚ್ಚಳ. ಕರ್ನಾಟಕ ಅಭಿವೃದ್ಧಿಯ, ಸಮೃದ್ಧತೆಯ ಹಾಡಿಗಳನ್ನು ಅದೆಷ್ಟೇ ಹಾಡಿದರೂ ಅಂತಿಮವಾಗಿ, ಕರ್ನಾಟಕ ರಾಜ್ಯ ಆಂತರಿಕ ಉತ್ಪನ್ನಗಳ ಆದಾಯವಿಲ್ಲದೆ ಹೊರ ಸಾಲಗಳ ಮೇಲೆ ಅವಲಂಬಿತವಾಗಿರುವ ಸರ್ಕಾರ. ಕೇಂದ್ರ ಸರ್ಕಾರ ರೈತರ ಮಹಾನ್ ಆಂದೋಲನದ ನಂತರದಲ್ಲಿ ಮೂರು ಕಾಯ್ದೆಗಳನ್ನು ಹಿಂಪಡೆದರೂ ಇಲ್ಲಿ ಹಿಂದೆ ಪಡೆಯದೆ ಕರ್ನಾಟಕ ರಾಜ್ಯದಲ್ಲಿ ಅವನ್ನು ಜಾರಿಗೊಳಿಸಲು ಬದ್ಧವಾಗಿಯೇ ಇದೆ. ಕಾರ್ಮಿಕರ ವಿರೋಧಿ ಕಾಯ್ದೆಗಳು, ಜಾರಿಯಲ್ಲಿವೆ. ಶೋಷಿತ ಸಮುದಾಯಗಳ ಮೀಸಲಾತಿ ಯಂತಹ ಮೂಲಭೂತ ಹಕ್ಕಿಗೆ ಚ್ಯುತಿ ತರುವಂತೆ ವಿವಿಧ ಜಾತಿಗಳನ್ನು ಎತ್ತಿ ಕಟ್ಟಿ ಮತ್ತು ಜಾತಿಗಳನ್ನು ವಿಭಜಿಸುತ್ತಾ ಕುತಂತ್ರವನ್ನು ನಡೆಸಿ ಸಾಮಾಜಿಕ ನ್ಯಾಯವನ್ನು ಈ ಸರ್ಕಾರ ಮಣ್ಣು ಪಾಲು ಮಾಡಲು ಬಯಸುತ್ತಿದೆ.

ಬಸವರಾಜರವರ ಈ ಬಿಜೆಪಿ ಆಡಳಿತ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬಿರಿಯುತ್ತಿದೆ. ಪ್ರತಿ ಕಚೇರಿಗಳು ಕಲೆಕ್ಷನ್ ಕೇಂದ್ರಗಳಾಗಿ ಜನಪೀಡಕವಾಗಿ ಮಾರ್ಪಾಡಾಗಿವೆ. ಜನರ ಅಳಲಿಗೆ ಸ್ಪಂದಿಸುವ ಆಡಳಿತ ಇಲ್ಲವಾಗಿದೆ. ಇತ್ತೀಚೆಗೆ ಬಹಿರಂಗಗೊಂಡ ಪಿಎಸ್ಐ ನೇಮಕಾತಿ ಹಗರಣ ಎಂತಹವರನ್ನು ಬೆಚ್ಚಿಬೀಳಿಸುವಂತಿದೆ. ಪಾರದರ್ಶಕತೆ ಇಲ್ಲದ ಈ ಸರ್ಕಾರ ಅವೆಲ್ಲವನ್ನು ಮುಚ್ಚಿ ಹಾಕುವ ಭ್ರಷ್ಟಾಚಾರದ ಪ್ರಶ್ನೆಯನ್ನು ಎಲ್ಲೂ ಕೇಳಿಸದ ಹಾಗೆ ಹಿಂದುತ್ವದ ಅಬ್ಬರದ ಮಬ್ಬಿನಲ್ಲಿ ಜನರನ್ನು ಮುಳುಗಿಸಲು ಬಯಸುತ್ತಿದೆ. ಇತ್ತೀಚೆಗೆ ಸುರಿದ ಮಹಾಮಳೆಗೆ ಉಂಟಾದ ಅಪಾರ ಹಾನಿಯನ್ನು ತುಂಬಲು ಸರ್ಕಾರದ ಒಂದು ಕಿಂಚಿತ್ತು ಪ್ರಯತ್ನಗಳಿಲ್ಲ. ಯಾವುದೇ ನೆರವಿಗೆ ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿಗಳು ಅಥವಾ ಬಿಜೆಪಿ ಪಕ್ಷದ ನಾಯಕರು ಧಾವಿಸಲಿಲ್ಲ. ಬದಲಾಗಿ ಸಂಪುಟ ವಿಸ್ತರಣೆಯಲ್ಲಿ ಮಂತ್ರಿ ಸ್ಥಾನ ಗಿಟ್ಟಿಸಲು ಪರದಾಡುತ್ತಿದ್ದರು. ಚುನಾವಣಾ (ಕು) ತಂತ್ರ ಹೆಣೆಯುವಲ್ಲಿ ನಿರತರಾಗಿದ್ದರು.

ಇಂತಹ ಮಹಾ ಸಂಕಷ್ಟಗಳನ್ನು ಸೃಷ್ಟಿಸಿದ ಬಸವರಾಜ ಬೊಮ್ಮಾಯಿಯವರು ಸಾಧನೆಗಳ ಡೋಲು ಹೊಡೆಯುವಾಗ ನಾಚಿಕೆಯೂ ಆಗದಿರುವುದು ಆತ್ಮ ವಂಚನೆಯಾಗಿದೆ. ಬೊಮ್ಮಾಯಿ ಇಷ್ಟೆಲ್ಲಾ ಶರಣಾಗಿದ್ದರೂ ಸಂಘ ಪರಿವಾರಕ್ಕೆ ತೃಪ್ತಿ ಇಲ್ಲ. ಅವರನ್ನು ಆದಷ್ಟು ಬೇಗ ಮೂಲೆಗೆ ತಳ್ಳಿ ಸಂಘ ಪರಿವಾರದ ಕಟ್ಟಾಳುವನ್ನು ಅಧಿಕಾರದಲ್ಲಿ ಕೂಡಿಸಲು ಸಂಘ ಪರಿವಾರ ಪ್ರಯತ್ನಿಸುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ. ಅಂದರೆ ಸ್ಥಿರತೆಯೇ ಇಲ್ಲದ ಬಿಜೆಪಿ ಸರ್ಕಾರದಲ್ಲಿ ಜನತೆಯ ಬದುಕೂ ಸದಾ ಅಸ್ಥಿರ.

ಇತ್ತೀಚೆಗೆ ಹೊಸ National Curriculum Framework (NCF) ರಚನೆಗೆ ಸಂಬಂಧಿಸಿದ ಹಾಗೆ ಕರ್ನಾಟಕ ಸರಕಾರ ವಿವಿಧ ಅಂಶಗಳ ಬಗ್ಗೆ Position Papers ಗಳನ್ನು NCERTಗೆ ಕಳಿಸಿದೆ. ಈ ಪೇಪರ್‌ಗಳಲ್ಲಿ ಈಗಾಗಲೇ ವಿವಾದಕ್ಕೆ ಗುರಿಯಾದ ಅಂಶಗಳಲ್ಲದೆ ಏನೂ ಹೊಸದಿಲ್ಲ. ಅದೇ ಸಾವರ್ಕರ್, ಗೋಳ್‌ವಲ್‌ಕರ್ ಪ್ರೇರಿತ ವಿಚಾರಗಳೇ ಇವೆ. ಪಶ್ಚಿಮದ ವಿಜ್ಞಾನವು ಫೇಕ್ ನ್ಯೂಸ್‌ಗಳಿಂದ ಕೂಡಿದೆ. ಈ ವಿಜ್ಞಾನದ ಅನೇಕ ಆವಿಷ್ಕಾರಗಳು ಸಿದ್ಧಾಂತಗಳು ಸಾವಿರಾರು ವರ್ಷ ಮೊದಲೇ ಭಾರತದಲ್ಲಿದ್ದವು. ಇದನ್ನು ನಮ್ಮ ಶಿಕ್ಷಣದಲ್ಲಿ ಹೇಳಿಕೊಡಬೇಕು. ಅದೇ ಹಳೆಯ ಪುಷ್ಪಕ ವಿಮಾನ, ಗಣಪತಿಯ ಪ್ಲಾಸ್ಟಿಕ್ ಸರ್ಜರಿ ಮಾದರಿಯ ವಾದಗಳಿವು.. ಒಂದು ಪೇಪರ್‌ನಲ್ಲಿ ಮಾಂಸಾಹಾರ ದೇಹದ ಸಮತೋಲನ ಕೆಡಿಸುತ್ತದೆ. ಮೊಟ್ಟೆ ತಿನ್ನುವುದು ಅಪಾಯಕಾರಿ, ಇತ್ಯಾದಿ ಸಲಹೆಗಳನ್ನು ನೀಡಿದೆ. ಈ ಸಲಹೆ ನೀಡಿದ ಸಮಿತಿಯ ಅಧ್ಯಕ್ಷರು ಪ್ರತಿಷ್ಠಿತ NIMHANS ಸಂಸ್ಥೆಯ ಪ್ರಾಧ್ಯಾಪಕರು. ಇನ್ನೊಂದು ಪೇಪರ್ ಪ್ರಕಾರ ನಾವು ಇತಿಹಾಸದಲ್ಲಾದ ಅನ್ಯಾಯಗಳನ್ನು ಎದುರಿಸಬೇಕು, ಅರ್ಥಮಾಡಿಕೊಳ್ಳಬೇಕು. ಆ ಸತ್ಯಗಳಿಂದ ಓಡಿ ಹೋಗಬಾರದು. ಸೂಕ್ತವಾದ ಸಲಹೆ. ಆದರೆ ಸಮಿತಿ ನೀಡುವ ಉದಾಹರಣೆ ಹಿಂದೂಗಳ ಹತ್ಯಾಕಾಂಡಗಳನ್ನು ಪಠ್ಯಗಳಲ್ಲಿ ಸೇರಿಸಬೇಕು. ಗುಜರಾತಿನಲ್ಲಿ ನಡೆದ ಮುಸ್ಲಿಮ್ ಹತ್ಯಾಕಾಂಡವನ್ನಲ್ಲ. ಪ್ರತಿನಿತ್ಯ ನಡೆಯುವ ದಲಿತರ ಹತ್ಯೆಯನ್ನಲ್ಲ.

‘ಪೊಸಿಶನ್ ಪೇಪರ್’ಗಳು: ಮುಂಬರುವ ಪಠ್ಯಗಳ ಟ್ರೈಲರ್

ಪುಷ್ಪಕ ವಿಮಾನ, ಅಪಾಯಕಾರಿ ಮೊಟ್ಟೆ, ಹಿಂದೂಗಳ ಹತ್ಯಾಕಾಂಡ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ



ಪೊಸಿಶನ್ ಪೇಪರ್ ಸಿದ್ಧಪಡಿಸಿದ ಪರಿಣತರಿಗೆ ಸನ್ಮಾನ ಸಮಾರಂಭ ಜೂನ್ 3, 2022

ಇತ್ತೀಚೆಗೆ ಹೊಸ National Curriculum Framework (NCF) ರಚನೆಗೆ ಸಂಬಂಧಿಸಿದ ಹಾಗೆ ಕರ್ನಾಟಕ ಸರಕಾರ ವಿವಿಧ ಅಂಶಗಳ ಬಗ್ಗೆ Position Papers ಗಳನ್ನು NCERTUE ಕಳಿಸಿದೆ. Position Papers ಅಂದರೆ ಶಿಕ್ಷಣದ ಪಠ್ಯಕ್ರಮದ ರಚನೆಗೆ ಪೂರಕವಾಗುವಂತೆ ತಜ್ಞರ ಸಮಿತಿಗಳು ಒಂದು ಗಂಭೀರವಾದ ವರದಿಯನ್ನು ಸಲ್ಲಿಸುವ ಕ್ರಮ. ಅದು ಕೇವಲ ಅಭಿಪ್ರಾಯ ಸಂಗ್ರಹವಾಗಿರುವುದಿಲ್ಲ. ಗಂಭೀರ ಚಿಂತನೆಯ ಸುಸಂಗತ ಮಂಡನೆಯಾಗಿರುತ್ತದೆ. ಈ ಹಿಂದೆ ಈ ವರದಿಗಳು ಅಧ್ಯಯನಕ್ಕೆ ಲಾಯಕ್ಕಾದ ಬರಹಗಳಾಗಿರುತ್ತಿದ್ದವು. ಈಗ ಕರ್ನಾಟಕ ಸರಕಾರ ವಿವಿಧ ಸಮಿತಿಗಳ ಮೂಲಕ ಸಿದ್ಧಪಡಿಸಿದ 27 ವರದಿಗಳನ್ನು ಸಾರ್ವಜನಿಕ ವಲಯದಲ್ಲಿ ಪ್ರಕಟಿಸಿದೆ. ಈ ಕೆಲಸದ ಉಸ್ತುವಾರಿ ವಹಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಕೆಲವು ಹೇಳಿಕೆಗಳನ್ನು ನೀಡಿದ್ದಾರೆ. ಮತ್ತು ಈಗಾಗಲೇ ಬಂದಿರುವ ಟೀಕೆ, ಆಕ್ಷೇಪಣೆಗಳಿಗೆ ತಾವೇ ಉತ್ತರಿಸಿದ್ದಾರೆ. ಅವರ ಪ್ರಕಾರ ಗಂಭೀರ ಚರ್ಚೆ, ಸಮಾಲೋಚನೆಯ ನಂತರ ಇವುಗಳನ್ನು ಸಿದ್ಧಪಡಿಸಲಾಗಿದೆ. ಅಲ್ಲದೆ ಈ ಬಾರಿ ಅಧ್ಯಕ್ಷರಾಗಿದ್ದವರು ನಿಜವಾಗಿಯೂ I.I.T. Professor ಎಂದು ತಿಳಿಸಿದ್ದಾರೆ!

ಸದ್ಯ ಕೋಚಿಂಗ್ ಕ್ಲಾಸ್ ಪ್ರೊಫೆಸರ್ ಅಲ್ಲವೆಂದು ಸಮಾಧಾನ ಪಟ್ಟುಕೊಂಡು ಇಂಟರ್‌ನೆಟ್‌ನಲ್ಲಿ ಅವರ ವೈಯಕ್ತಿಕ ವಿವರ ಹಾಗೂ ಪ್ರಕಟಣೆಗಳು ಮತ್ತು ವಿಡಿಯೋಗಳನ್ನು ನೋಡಿದೆ. ಅವರ ವಿಷಯವು ರಸಾಯನ ಶಾಸ್ತ್ರ. ಆ ಕ್ಷೇತ್ರದಲ್ಲಿ ಸಂಶೋಧನೆ ಇತ್ಯಾದಿಯನ್ನು ಮಾಡಿದ್ದಾರೆ. ಆದರೆ ಭಾರತದ ಅನೇಕ I.I.T. ಗಳಲ್ಲಿಯ ವಿಜ್ಞಾನಿಗಳು ಹಾಗೂ ಪ್ರಾಧ್ಯಾಪಕರಂತೆ ಅವರು ಬಲಪಂಥೀಯ ಚಿಂತನೆಗಳ ವಕ್ತಾರರಾಗಿದ್ದಾರೆ. Ideology ಯಲ್ಲಿ ಆಸಕ್ತರೂ ಆಗಿದ್ದಾರೆ. ನಾನು ನೋಡಿದ ಒಂದು ಚರ್ಚೆಯ ವಿಡಿಯೋನಲ್ಲಿ ವಿಜ್ಞಾನಿಗಳು, ಬುದ್ಧಿಜೀವಿಗಳು ಯಾಕೆ ಎಲ್ಲದಕ್ಕೂ ಮೋದಿಯವರನ್ನು ಟೀಕಿಸುತ್ತಾರೆ ಎಂದು ಚರ್ಚಿಸಿದ್ದಾರೆ. ಇನ್ನೊಂದು ಮಾತುಕತೆಯಲ್ಲಿ ಪ್ರಸಿದ್ಧ ಸಂಗೀತಕಾರ ಹಾಗೂ ಚಿಂತಕರಾದ ಟಿ.ಎಮ್. ಕೃಷ್ಣ ಅವರ "Sebastian and Sons: A Brief History of Mrdangam Makers” ಕೃತಿಯ ಬಗ್ಗೆ ಉಗ್ರವಾಗಿ ಟೀಕಿಸಿದ್ದಾರೆ. ಅವರು ಮತ್ತು ಚರ್ಚೆಯಲ್ಲಿದ್ದ ಇನ್ನೊಬ್ಬ ಬಲಪಂಥೀಯರ ಪ್ರಕಾರ ಟಿ.ಎಂ. ಕೃಷ್ಣ ಅವರು ವಿಶಿಷ್ಟವಾದ ಶ್ರೇಷ್ಠವಾದ ಕರ್ನಾಟಕ ಸಂಗೀತದ ಪರಂಪರೆಯನ್ನು ಅವಮಾನಿಸಿದ್ದಾರೆ. ಏಕೆಂದರೆ ಸಂಗೀತವು ಜಾತ್ಯಾತೀತ, ಕೃಷ್ಣ ಜಾತಿ ವ್ಯವಸ್ಥೆಯನ್ನು ಬಳಸಿಕೊಂಡು ಅದನ್ನು ಅಪವಿತ್ರಗೊಳಿಸಿದ್ದಾರೆ. ಹೀಗೆ ಚರ್ಚೆ ಸಾಗುತ್ತದೆ.


ಇತ್ತೀಚಿನ ವರ್ಷಗಳಲ್ಲಿ ಪ್ರತಿಷ್ಠಿತ I.I.T. ಸಂಸ್ಥೆಗಳಲ್ಲಿ ಸಾಮಾಜಿಕ ರಾಜಕೀಯ ನಿಲುವುಗಳು ಬಲಪಂಥದ ಕಡೆಗೆ ವಾಲುತ್ತಿದೆ. ಪ್ರಸಿದ್ಧ ಅಮೇರಿಕನ್ ವಿದ್ವಾಂಸ ಶೆಲ್ಡನ್ ಪೋಲಾಕ್ ಬಿ.ಜೆ.ಪಿ.ಯ ರಾಜಕೀಯವನ್ನು ಟೀಕಿಸಿದ್ದಕ್ಕಾಗಿ 100ಕ್ಕಿಂತ ಹೆಚ್ಚು ಜನ ಅವರು ಸಂಪಾದನೆ ಮಾಡುತ್ತಿದ್ದ Moorthy Classics ಎನ್ನುವ ಯೋಜನೆಯಿಂದ ಅವರನ್ನು ಹೊರಹಾಕಬೇಕೆಂದು ಅಹವಾಲಿಗೆ ಸಹಿ ಮಾಡಿದರು. ಇದರಲ್ಲಿ ಬಹುಪಾಲು ಜನ ಐ.ಐ.ಟಿ.ಗಳ ಪ್ರಾಧ್ಯಾಪಕರು. ಇತ್ತೀಚೆಗೆ ಖರಗಪೂರ ಐ.ಐ.ಟಿ.ಯಿಂದ ಭಾರತೀಯ ಜ್ಞಾನಪರಂಪರೆಯ ಹೆಸರಿನಲ್ಲಿ ಅವೈಜ್ಞಾನಿಕ ಸಂಗತಿಗಳನ್ನು ಪ್ರಕಟಿಸಲಾಯಿತು. ಇದು ಭಾರತೀಯ ವಿಜ್ಞಾನಿಗಳಿಗೆ ಹೊಸದಲ್ಲ. ಅವರು ತಮ್ಮ ವಿಜ್ಞಾನ ವೃತ್ತಿಯನ್ನು ಸಾಮಾಜಿಕ ಸಾಂಪ್ರದಾಯಿಕತೆಯನ್ನು ವಿರುದ್ಧವಾಗಿ ನೋಡುವುದಿಲ್ಲ.

ಹೀಗಾಗಿ ಈ Position Paper ಗಳ ಸಮಿತಿಯ ಅಧ್ಯಕ್ಷನಾಗಿರುವ ವ್ಯಕ್ತಿಗೂ ನಾಗೇಶ್ ಅವರ ಐ.ಐ.ಟಿ. ಪ್ರೊಫೆಸರ್‌ಗೂ ಬಲಪಂಥೀಯ ನಂಬಿಕೆಗಳಲ್ಲಿ ವ್ಯತ್ಯಾಸವಿಲ್ಲ. ಈ ಪೇಪರ್‌ಗಳಲ್ಲಿ ಈಗಾಗಲೇ ವಿವಾದಕ್ಕೆ ಗುರಿಯಾದ ಅಂಶಗಳಲ್ಲದೆ ಏನೂ ಹೊಸದಿಲ್ಲ. ಅದೇ ಸಾವರ್ಕರ್, ಗೋಳ್‌ವಲ್‌ಕರ್ ಪ್ರೇರಿತ ವಿಚಾರಗಳೇ ಇವೆ. ಪಶ್ಚಿಮದ ವಿಜ್ಞಾನವು ಫೇಕ್ ನ್ಯೂಸ್‌ಗಳಿಂದ ಕೂಡಿದೆ. ಈ ವಿಜ್ಞಾನದ ಅನೇಕ ಆವಿಷ್ಕಾರಗಳು ಸಿದ್ಧಾಂತಗಳು ಸಾವಿರಾರು ವರ್ಷ ಮೊದಲೇ ಭಾರತದಲ್ಲಿದ್ದವು. ಇದನ್ನು ನಮ್ಮ ಶಿಕ್ಷಣದಲ್ಲಿ ಹೇಳಿಕೊಡಬೇಕು. ಅದೇ ಹಳೆಯ ಪುಷ್ಪಕ ವಿಮಾನ, ಗಣಪತಿಯ ಪ್ಲಾಸ್ಟಿಕ್ ಸರ್ಜರಿ ಮಾದರಿಯ ವಾದಗಳಿವು.

ಭಾರತೀಯ ಜ್ಞಾನ ಪರಂಪರೆಗಳನ್ನು ನಾವು ಮುನ್ನೆಲೆಗೆ ತರಬೇಕು ಎನ್ನುವುದು ಇನ್ನೊಂದು ವಾದ. ಆದರೆ ಭಾರತೀಯವೆಂದರೆ ವೈದಿಕ–ಬ್ರಾಹ್ಮಣ ಕೇಂದ್ರಿತ ಪರಂಪರೆಯೆಂದು ಇಲ್ಲಿಯ ನಿಲುವು. ಹಲವು ದಶಕಗಳಿಂದ ಈ ನಿಲುವನ್ನು ಬಲಪಂಥೀಯ ವಿದ್ವಾಂಸರು ಪ್ರಬಲವಾಗಿ ಮಂಡಿಸುತ್ತಿದ್ದಾರೆ. ಇದಕ್ಕಾಗಿ ಅವರು ಬಳಸಿಕೊಳ್ಳುತ್ತಿರುವುದು ವಸಾಹತೋತ್ತರ ಚಿಂತನೆಯ ಕೆಲವು ಅಂಶಗಳನ್ನು. ವಸಾಹತುಶಾಹಿಯು ಕೇವಲ ವಸಾಹತುಗಳ ಆರ್ಥಿಕ, ರಾಜಕೀಯ ವ್ಯವಸ್ಥೆಗಳನ್ನು ವಶಪಡಿಸಿಕೊಳ್ಳಲಿಲ್ಲ. ಇಲ್ಲಿಯ ಜ್ಞಾನ ಪರಂಪರೆಗಳನ್ನು ಅಂಚಿಗೆ ತಳ್ಳಿತು. ಅವುಗಳ ಸ್ಥಾನಪಲ್ಲಟಗೊಳಿಸಿ ಪಶ್ಚಿಮದ ಜ್ಞಾನವನ್ನು ಅಧಿಕಾರದ ನೆಲೆಯಲ್ಲಿ ತಂದಿರಿಸಿತು. ತನ್ನದೇ ಆದ ಇತಿಹಾಸ ರಚನೆಯ ಮಾದರಿಯನ್ನು ಅಧಿಕೃತವೆಂದು ವಾದಿಸಿತು. ಅಲ್ಲದೆ ಈ ನಿಲುವು ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅನುಷ್ಠಾನಗೊಂಡು ನಮ್ಮ ಶಿಕ್ಷಣ ಹಾಗೂ ಜ್ಞಾನ ಪರಂಪರೆಗಳು ವಸಾಹತೀಕರಣಗೊಂಡವು. ಸ್ವಾತಂತ್ರ್ಯದ ನಂತರವೂ ಈ ಪರಿಸ್ಥಿತಿಯು ಬದಲಾಗಿಲ್ಲ. ಹೀಗಾಗಿ ನಾವು ಈ ನೆಲದ ಪರಂಪರೆಗಳನ್ನು ಮರು ಶೋಧಿಸಬೇಕು. ವಸಾಹತೋತ್ತರ ಚಿಂತನೆಯ ಈ ವಾದಗಳು ಸರಿಯಾಗಿಯೇ ಇವೆ.

ಆದರೆ ಬಲಪಂಥವು ಇದನ್ನು ತನ್ನ ಸಾಂಸ್ಕೃತಿಕ ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿರುವ ಬಗೆಯನ್ನು ಗಮನಿಸಬೇಕು. ಅದು ಪಶ್ಚಿಮ ಕೇಂದ್ರಿತ ಚಿಂತನೆಗಳನ್ನು ಧಿಕ್ಕರಿಸಿ ಅನುಷ್ಠಾನಗೊಳಿಸಲು ಬಯಸುವ ಭಾರತೀಯ ಜ್ಞಾನವೆಂದರೆ ವೈದಿಕ ಪರಂಪರೆ, ಅಷ್ಟು ಮಾತ್ರವಲ್ಲ ವಿಜ್ಞಾನ ಹಾಗೂ ತರ್ಕ ವಿರೋಧಿಯಾದ ವೈದಿಕ ಚಿಂತನೆ... ಉದಾಹರಣೆಗೆ ಇನ್ನೊಂದು Position Paperನಲ್ಲಿ ಮಾಂಸಾಹಾರವು ದೇಹದ ಸಮತೋಲನವನ್ನು ಕೆಡಿಸುತ್ತದೆ. ಮೊಟ್ಟೆ ತಿನ್ನುವುದು ಅಪಾಯಕಾರಿ, ಇತ್ಯಾದಿ ಸಲಹೆಗಳನ್ನು ನೀಡಿದೆ. ಈ ಸಲಹೆ ನೀಡಿದ ಸಮಿತಿಯ ಅಧ್ಯಕ್ಷರು ಪ್ರತಿಷ್ಠಿತ NIMHANS ಸಂಸ್ಥೆಯ ಪ್ರಾಧ್ಯಾಪಕರು. ಹೀಗಾಗಿ ಈಗ ‘Save NIMHANS’ ಎನ್ನುವ ಪ್ರತಿರೋಧ ಆರಂಭವಾಗಿದೆ. NIMHANS ಸಂಸ್ಥೆಯು ಮಾನಸಿಕ ರೋಗಿಗಳಿಗೆ ಚಿಕಿತ್ಸೆ ಕೊಡುವ ಸಂಸ್ಥೆಯೆಂದು ಭಾರತದಲ್ಲಿ ಖ್ಯಾತಿ ಪಡೆದಿದೆ. ಅದು ಅವರಿಗೆ ಶಿಕ್ಷಕ ಹುದ್ದೆ (ಕಾಯಿಲೆ ವಾಸಿಯಾಗುವ ಮೊದಲು) ಕೊಡುತ್ತದೆ ಎನ್ನುವುದು ಆಘಾತಕಾರಿ ಸಂಗತಿಯಾಗಿದೆ. ಇನ್ನೂ ಒಂದು ವಿಶಿಷ್ಟವಾದ ಸಲಹೆಯೆಂದರೆ ಒಂದು ಪೇಪರ್ ಪ್ರಕಾರ ನಾವು ಇತಿಹಾಸದಲ್ಲಾದ ಅನ್ಯಾಯಗಳನ್ನು ಎದುರಿಸಬೇಕು, ಅರ್ಥಮಾಡಿಕೊಳ್ಳಬೇಕು. ಆ ಸತ್ಯಗಳಿಂದ ಓಡಿ ಹೋಗಬಾರದು. ಸೂಕ್ತವಾದ ಸಲಹೆ. ಆದರೆ ಸಮಿತಿಯು ನೀಡುವ ಉದಾಹರಣೆಯೆಂದರೆ ಹಿಂದೂಗಳ ಹತ್ಯಾಕಾಂಡಗಳನ್ನು ಪಠ್ಯಗಳಲ್ಲಿ ಸೇರಿಸಬೇಕು. ಗುಜರಾತಿನಲ್ಲಿ ನಡೆದ ಮುಸ್ಲಿಮ್ ಹತ್ಯಾಕಾಂಡವನ್ನಲ್ಲ. ಪ್ರತಿನಿತ್ಯ ನಡೆಯುವ ದಲಿತರ ಹತ್ಯೆಯನ್ನಲ್ಲ. ನೇರವಾಗಿ ಹೇಳುವುದಾದರೆ ಪಠ್ಯಗಳಲ್ಲಿ ಇತಿಹಾಸವನ್ನು ಸೈದ್ಧಾಂತಿಕ ಆಯುಧವನ್ನಾಗಿ ಬಳಸಿಕೊಂಡು ದ್ವೇಷದ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವುದು.

ಪ್ರಶ್ನೆ ಏನೆಂದರೆ ಈ ಸಲಹೆಗಳು ಕರ್ನಾಟಕದಿಂದ ಏಕೆ NCERT ಗೆ ಹೋಗಬೇಕು? ಕನ್ನಡದ ಚಿಂತನ ಪರಂಪರೆ ಎನ್ನುವುದು ಇದೆಯಲ್ಲವೆ? ಇದು ಮಾನವ ಪರವಾಗಿರುವುದು, ಸಮಾನತೆಯ ಪರವಾಗಿರುವುದು. ಪಂಪನಿಂದ ಕುವೆಂಪುವರೆಗೆ ಈ ಪರಂಪರೆಯು ಕನ್ನಡ ಮನಸ್ಸನ್ನು ತಿದ್ದಿದೆ. ಈಗ ಸಿದ್ಧವಾಗಿರುವ Position Paper ಗಳು ಉತ್ತರ ಪ್ರದೇಶದಿಂದ ಬಂದಿದ್ದರೆ ಆಶ್ಚರ್ಯವಾಗುತ್ತಿರಲಿಲ್ಲ. ಪರಿಸ್ಥಿತಿಗೆ ಕಾರಣವಾಗಿರುವುದು ಇಷ್ಟೆ. ರಾಜಕೀಯವಾಗಿ ಅತ್ಯಂತ ದುರ್ಬಲರಾಗಿರುವ ಮುಖ್ಯಮಂತ್ರಿ ಬೊಮ್ಮಾಯಿ ಕರ್ನಾಟಕದ ಶಿಕ್ಷಣ ಹಾಗೂ ಸಂಸ್ಕೃತಿಗಳನ್ನು ಆರ್.ಎಸ್.ಎಸ್. ಗೆ ಬಿಟ್ಟು ಕೊಟ್ಟಿದ್ದಾರೆ. ಸ್ವಂತ ಯೋಚನೆ ಹಾಗೂ ನಿಷ್ಕರ್ಷೆಗೆ ಅಸಮರ್ಥರಾಗಿರುವ ಅವರು ಬಸವ ಪರಂಪರೆಗೆ ದ್ರೋಹ ಮಾಡಿ ಶ್ರೇಷ್ಠವಾದ ವಚನ ಪರಂಪರೆಯ ಮೌಲ್ಯಗಳನ್ನು ಕಡೆಗಣಿಸಿ ದೇಶದಲ್ಲಿ ರಾಜ್ಯವು ತಲೆತಗ್ಗುವಂತೆ ಮಾಡಿದ್ದಾರೆ. ಕರ್ನಾಟಕದ ಬಗ್ಗೆ ಏನೂ ಗೊತ್ತಿರದ ಯಾರಾದರೂ ಈ Position Paper ಗಳನ್ನು ಓದಿದರೆ ಕರ್ನಾಟಕವು ಯಾವ ಶ್ರೀಮಂತ ಸಂಸ್ಕೃತಿಯೂ ಇಲ್ಲದ ವೈಚಾರಿಕತೆಯೂ ಇಲ್ಲದ ಬಲಪಂಥೀಯ ಆಶ್ರಯ ತಾಣವೆಂದುಕೊಳ್ಳಬಹುದು. ಹಾಗೆಂದು ಕೊಳ್ಳುವುದು ವಾಸ್ತವವೇ ಆಗುವ ದಿನಗಳು ದೂರವಿಲ್ಲ.



ಯೋಚನೆಗಳ ಶಕ್ತಿಯಿಂದ ನಡೆಯುವ ‘ಪುಷ್ಪಕ ವಿಮಾನ’ (ಫೇಸ್ ಬುಕ್ ಪೋಸ್ಟರ್!)

ಸುಪ್ರೀಂ ಕೋರ್ಟ್‌ನ ವಿರೋಧಾಭಾಸ ಪ್ರವೃತ್ತಿಗಳು



ಉನ್ನತ ನ್ಯಾಯಾಂಗವು ದಿಗ್ಬಂಧನಕ್ಕೆ ಒಳಗಾಗಿದೆ. ನ್ಯಾಯಾಂಗವನ್ನು ಬುಡಮೇಲು ಮಾಡಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ನ್ಯಾಯಮೂರ್ತಿಗಳ ನೇಮಕದಲ್ಲಿ ಕಾರ್ಯಾಂಗದ ಹಸ್ತಕ್ಷೇಪದಿಂದ ಈ ಪ್ರಕ್ರಿಯೆ ಮೊದಲ್ಗೊಳ್ಳುತ್ತಿದೆ. ಬಿಜೆಪಿಯ ಮಾಜಿ ವಕ್ತಾರೆ ನೂಪರ್ ಶರ್ಮಾ ವಿರುದ್ಧ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಮಾಡಿದ್ದ ಮೌಖಿಕ ಟಿಪ್ಪಣಿಗಳನ್ನು ನಿಂದಿಸಿದ ರೀತಿ ಹಾಗೂ ಆ ಇಬ್ಬರು ಜಡ್ಜ್‌ಗಳ ವಿರುದ್ಧ ಸಾಮಾಜಿಕ ಮಾಧ್ಯಮ ಹಾಗೂ ಸಂಘಿ ಮಾಧ್ಯಮಗಳಲ್ಲಿ ಮಾಡಲಾದ ದ್ವೇಷಪೂರಿತ ಸುಳ್ಳುಗಳು ಕಳವಳ ಹುಟ್ಟಿಸುವಂಥದ್ದಾಗಿದೆ.

ಪ್ರಕಾಶ್ ಕಾರಟ್

ಒಂದು ವಾರದ ಅವಧಿಯಲ್ಲಿ ಸುಪ್ರೀಂ ಕೋರ್ಟ್ ನೀಡಿದ ಎರಡು ತೀರ್ಪುಗಳು ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಪರಸ್ಪರ ವಿರೋಧಾಭಾಸ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ.

ಆಲ್ಟ್ ನ್ಯೂಸ್ ಪತ್ರಕರ್ತ ಮಹಮದ್ ಜುಬೇರ್ ವಿರುದ್ಧದ ಹಲವು ಎಫ್‌ಐಆರ್ ಪ್ರಕರಣದಲ್ಲಿ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಸೂರ್ಯ ಕಾಂತ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ತ್ರಿಸದಸ್ಯ ಪೀಠ, ಬಂಧಿಸುವ ಅಧಿಕಾರವನ್ನು ಬೇಕಾಬಿಟ್ಟಿಯಾಗಿ ಬಳಸಬಾರದು ಎಂದು ಹೇಳಿದೆ. ಅರ್ನೇಶ್ ಕುಮಾರ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದೂ ಸೂಚಿಸಿದೆ. 'ಬಂಧನವನ್ನು ಶಿಕ್ಷಿಸುವ ಸಾಧನವಾಗಿ ಬಳಸಬಾರದು. ಯಾಕೆಂದರೆ ಅದು ಕ್ರಿಮಿನಲ್ ಕಾನೂನುಗಳಿಂದ ಹೊರಬೀಳುವ ಗಂಭೀರ ಪರಿಣಾಮಗಳಿಗೆ ಕಾರಣವಾಗುತ್ತದೆ. ಅಂದರೆ ವ್ಯಕ್ತಿ ಸ್ವಾತಂತ್ರ್ಯದ ಹರಣವಾಗುತ್ತದೆ' ಎಂದು ಪೀಠದಲ್ಲಿದ್ದ ಜಡ್ಜ್‌ಗಳು ಹೇಳಿದ್ದಾರೆ. ಈ ತೀರ್ಪಿನೊಂದಿಗೆ ಸುಪ್ರೀಂ ಕೋರ್ಟ್, ಬೇಕಾಬಿಟ್ಟಿಯಾಗಿ ಏಕಪಕ್ಷೀಯವಾಗಿ ಬಂಧಿಸುವ ಪೊಲೀಸರ ಅಧಿಕಾರಕ್ಕೆ ದೊಡ್ಡ ಹೊಡೆತ ನೀಡಿದೆ. ಹಾಗೂ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸಿದೆ. ಸಂವಿಧಾನಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕಾದ ಸುಪ್ರೀಂ ಕೋರ್ಟ್‌ನಿಂದ ದೇಶ ನಿರೀಕ್ಷಿಸುವುದು ಇದನ್ನೇ.

ಆದರೆ, ಅದಾದ ಕೇವಲ ಎರಡೇ ದಿನದಲ್ಲಿ ಇನ್ನೊಂದು ತ್ರಿಸದಸ್ಯ ಪೀಠ 2002ರ ಹಣಕಾಸು ದುರ್ಬಳಕೆ ತಡೆ ಕಾನೂನಿನ (ಪಿಎಂಎಲ್‌ಎ) ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ಮೇಲೆ ತೀರ್ಪು ನೀಡಿದೆ. ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಹೇಶ್ವರಿ ಮತ್ತು ಸಿ.ಟಿ. ರವಿ ಕುಮಾರ್ ಇದ್ದ ಈ ಪೀಠ, ಪ್ರಶ್ನಿತ ಕಾನೂನಿನ ಎಲ್ಲ ನಿಯಮಗಳನ್ನು ಎತ್ತಿ ಹಿಡಿದಿದೆ. ಆ ಕಾನೂನು ಅನುಷ್ಠಾನ ನಿರ್ದೇಶನಾಲಯಕ್ಕೆ (ಇ.ಡಿ.) ಸಂಪೂರ್ಣ ಅಧಿಕಾರ ನೀಡಿದೆ. ಅದು ಶೋಧನೆ, ವಶಪಡಿಸಿಕೊಳ್ಳುವಿಕೆ, ಬಂಧನ ಮತ್ತು ಆಸ್ತಿ ಮುಟ್ಟುಗೋಲು ವಿಚಾರಗಳಲ್ಲಿ ಅಪರಾಧ ದಂಡ ಸಂಹಿತೆಯ (ಸಿಆರ್‌ಪಿಸಿ) ನಿಯಮಗಳನ್ನು ಸಾಸಿವೆ ಕಾಳಿನಷ್ಟೂ ಪಾಲಿಸುವುದಿಲ್ಲ. ಇ.ಡಿ. 'ಪೊಲೀಸ್' ಅಲ್ಲ ಎಂಬ ವ್ಯಾಖ್ಯಾನವನ್ನು ಕೋರ್ಟ್ ಅನುಮೋದಿಸಿದೆ. ಆದ್ದರಿಂದ ಸಿಆರ್‌ಪಿಸಿಯ ನಿಯಮಗಳನ್ನು ಪಾಲಿಸುವುದು ಅಗತ್ಯವಿಲ್ಲ ಎಂದು ಕೋರ್ಟ್ ಹೇಳಿದೆ. ಇ.ಡಿ. ಅಧಿಕಾರಿಗಳ ಮುಂದೆ ಆರೋಪಿಯೊಬ್ಬರು ನೀಡುವ ಹೇಳಿಕೆ ಪೊಲೀಸ್ ಅಧಿಕಾರಿಯೊಬ್ಬರ ಮುಂದೆ ನೀಡುವ ಹೇಳಿಕೆಯಂತಲ್ಲದೆ ಕೋರ್ಟ್‌ನಲ್ಲಿ ಸ್ವೀಕಾರಾರ್ಹವಲ್ಲ ಎಂದು ಇದರ ಅರ್ಥವಾಗಿದ್ದು ಇದು ಒಪ್ಪತಕ್ಕದ್ದಲ್ಲ. ಆರೋಪಿಗೆ ಜಾಮೀನು ನೀಡಲು ಕೋರ್ಟ್ ಎರಡು ಷರತ್ತುಗಳನ್ನು ವಿಧಿಸಿದೆ. ಆರೋಪಿ ಪುರುಷ ಅಥವಾ ಮಹಿಳೆ ಮೇಲ್ನೋಟಕ್ಕೆ ತಾನು ತಪ್ಪಿತಸ್ಥರಲ್ಲ ಎಂದು ಸಾಬೀತು ಪಡಿಸಬೇಕು ಮತ್ತು ಇನ್ನು ಮುಂದೆ ಯಾವುದೇ ಅಪರಾಧ ಎಸಗುವುದಿಲ್ಲ ಎಂದು ಕೋರ್ಟ್‌ಗೆ ಸಮಾಧಾನವಾಗುವಂತೆ ನಿರೂಪಿಸಬೇಕು ಎನ್ನುವುದೇ ಆ ಎರಡು ಷರತ್ತುಗಳು. ಅಂದರೆ, ತಾನು ತಪ್ಪಿತಸ್ಥ ಅಲ್ಲ ಎಂದು ಸಾಬೀತು ಪಡಿಸುವುದು ಆರೋಪಿಯ ಹೊಣೆ ಎಂದಾಗುತ್ತದೆ. ಆರೋಪಿಗೆ ಎನ್‌ಫೋರ್ಸ್‌ಮೆಂಟ್ ಇನ್‌ಫರ್ಮೇಶನ್ ರಿಪೋರ್ಟ್ (ಇಸಿಐಆರ್) ಪ್ರತಿಯನ್ನು ಒದಗಿಸುವುದು ಕಡ್ಡಾಯವಲ್ಲ ಎಂದೂ ಕೋರ್ಟ್ ಹೇಳಿದೆ. ಇಸಿಐಆರ್ ಆಂತರಿಕ ದಾಖಲೆಪತ್ರ ಎನ್ನುವುದು ಅದರ ಅಂಬೋಣವಾಗಿದೆ. ಆದರೆ ಪೊಲೀಸರು ಸಲ್ಲಿಸುವ ಎಫ್‌ಐಆರ್ ಪ್ರತಿಗಳನ್ನು ಪಡೆಯುವ ಹಕ್ಕು ಆರೋಪಿಗೆ ಇರುತ್ತದೆ ಎನ್ನುವುದನ್ನು ಗಮನಿಸಬೇಕು. ಈ ರೀತಿಯಾಗಿ, ಇ.ಡಿ. ಮನಸೋಇಚ್ಛೆ ವರ್ತಿಸುವ ಕಾನೂನಿನ ಕರಾಳ ನಿಯಮಗಳನ್ನು ಸರ್ವೋನ್ನತ ನ್ಯಾಯಾಲಯ ಎತ್ತಿ ಹಿಡಿದಂತಾಗಿದೆ.

ಈ ತೀರ್ಪಿನಿಂದ ಕೋರ್ಟ್ ಪ್ರಜೆಗಳ ನಾಗರಿಕ ಹಕ್ಕುಗಳ ಮೇಳಿನ ದಾಳಿಯನ್ನು ಕಾನೂನುಬದ್ಧಗೊಳಿಸಿದೆ. ನಾಗರಿಕರನ್ನು ಏಕಪಕ್ಷೀಯವಾಗಿ ಬಂಧಿಸಬಹುದು, ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಜಾಮೀನು ನಿರಾಕರಿಸಬಹುದಾಗಿದೆ. ಸರ್ವೋನ್ನತ ನ್ಯಾಯಾಲಯವು ಯಾವ ರೀತಿಯಲ್ಲಿ ಕಾರ್ಯ ನಿರ್ವಾಹಕ ಕೋರ್ಟ್ ಆಗಿ ಬದಲಾಗುತ್ತಿದೆ ಎನ್ನುವುದನ್ನು ಈ ಪ್ರತಿಗಾಮಿ ತೀರ್ಪು ತೋರಿಸಿಕೊಟ್ಟಿದೆ.

ದಮನಕಾರಿ ಕಾರ್ಯಾಂಗದಿಂದ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು ಕೋರ್ಟ್ ಹಲವು ಕ್ರಮಗಳನ್ನು ಕೈಗೊಳ್ಳುತ್ತಿರುವ ಉದಾಹರಣೆಗಳು ಇವೆಯಾದರೂ ಪ್ರತಿಗಾಮಿ ಪ್ರವೃತ್ತಿ ಹೆಚ್ಚಾಗುತ್ತಿರುವುದು ಕಳವಳದ ವಿಷಯವಾಗಿದೆ. ಜಸ್ಟಿಸ್ ಖಾನ್ವಿಲ್ಕರ್ ನೇತೃತ್ವದ ಅದೇ ತ್ರಿಸದಸ್ಯ ಪೀಠ ಇತ್ತೀಚಿನ ದಿನಗಳಲ್ಲೇ ಅತಿ ಕೆಟ್ಟದಾದ ಒಂದು ತೀರ್ಪು ನೀಡಿದ್ದನ್ನು ಉದಾಹರಿಸಬಹುದು. ಗುಲ್ಬರ್ಗ್ ಸೊಸೈಟಿ ಕೇಸ್‌ನಲ್ಲಿ ಝಕಿಯಾ ಜಾಫ್ರಿ ಮತ್ತು ಸಹ ಅರ್ಜಿದಾರರಾದ ತೀಸ್ತಾ ಸೆಟಲ್‌ವಾಡ್ ಮಾಡಿದ ಮನವಿಯ ಸಂಬಂಧ ನೀಡಿದ ತೀರ್ಪು ಅದಾಗಿದೆ. ಮನವಿಯನ್ನು ತಿರಸ್ಕರಿಸಿದ ಪೀಠ, ಕೆಲವು ವ್ಯಕ್ತಿಗಳ ಉದ್ದೇಶದ ಬಗ್ಗೆ ಅನವಶ್ಯಕ ಟಿಪ್ಪಣಿ ಮಾಡಿದ್ದನ್ನು ನೋಡಬಹುದು. 'ಆಕೆ (ಅಂದರೆ ಝಕಿಯಾ ಜಾಫ್ರಿ) ಯಾರದ್ದೋ ಚಿತಾವಣೆಯಿಂದ ಹೀಗೆ ಮಾಡುತ್ತಿದ್ದಾರೆ' ಎಂದು ಪೀಠ ಹೇಳಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಲೋಕೂರ್ ಹೇಳುವ ಪ್ರಕಾರ, ಅದು ಹತನಾದ ತನ್ನ ಗಂಡ ಎಹಸಾನ್ ಜಾಫ್ರಿಯ ಸಾವಿಗೆ ನ್ಯಾಯ ಬಯಸುವ ಝಕಿಯಾರ ಹೋರಾಟದಾದ್ಯಂತ ಆಕೆಯ ಬೆನ್ನಿಗೆ ನಿಂತ ತೀಸ್ತಾ ವಿರುದ್ಧದ ಕೊಂಕು ಆರೋಪವಾಗಿದೆ. 'ಕೆಲವರು ಕೆಟ್ಟ ಉದ್ದೇಶದಿಂದ ಪರಿಸ್ಥಿತಿಯನ್ನು ಕೆಡಿಸಲು ಬಯಸುತ್ತಾರೆ. ನ್ಯಾಯ ಪ್ರಕ್ರಿಯೆಯನ್ನು ದುರುಪಯೋಗ ಪಡಿಸಿಕೊಳ್ಳುವ ಅಂಥವರನ್ನು ಕಟಕಟೆಯಲ್ಲಿ ನಿಲ್ಲಿಸಿ ಕಾನೂನು ಪ್ರಕಾರ ಶಿಕ್ಷೆ ನೀಡಬೇಕು' ಎಂದೂ ಖಾನ್ವಿಲ್ಕರ್ ನೇತೃತ್ವದ ಪೀಠ ಹೇಳಿದೆ. ಅದು, ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿರುವ ಸಹ–ಅರ್ಜಿದಾರರಾದ ತೀಸ್ತಾ ಸೆಟಲ್‌ವಾಡ್‌ರನ್ನು ಯಾವುದೇ ವಿವರಣೆಗೆ ಅವಕಾಶವನ್ನೂ ನೀಡದೆ ಬಂಧಿಸಲು ಗುಜರಾತ್ ಪೊಲೀಸರಿಗೆ ಮುಕ್ತ ಲೈಸೆನ್ಸ್ ಕೊಟ್ಟಂತಾಗಿದೆ.

ಉನ್ನತ ನ್ಯಾಯಾಂಗವು ದಿಗ್ಬಂಧನಕ್ಕೆ ಒಳಗಾಗಿದೆ. ನ್ಯಾಯಾಂಗವನ್ನು ಬುಡಮೇಲು ಮಾಡಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ನ್ಯಾಯಮೂರ್ತಿಗಳ ನೇಮಕದಲ್ಲಿ ಕಾರ್ಯಾಂಗದ ಹಸ್ತಕ್ಷೇಪದಿಂದ ಈ ಪ್ರಕ್ರಿಯೆ ಮೊದಲ್ಗೊಳ್ಳುತ್ತಿದೆ. ಬಿಜೆಪಿಯ ಮಾಜಿ ವಕ್ತಾರೆ ನೂಪರ್ ಶರ್ಮಾ ವಿರುದ್ಧ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಮಾಡಿದ್ದ ಮೌಖಿಕ ಟಿಪ್ಪಣಿಗಳನ್ನು ನಿಂದಿಸಿದ ರೀತಿ ಹಾಗೂ ಆ ಇಬ್ಬರು ಜಡ್ಜ್‌ಗಳ ವಿರುದ್ಧ ಸಾಮಾಜಿಕ ಮಾಧ್ಯಮ ಹಾಗೂ ಸಂಘಿ ಮಾಧ್ಯಮಗಳಲ್ಲಿ ಮಾಡಲಾದ ದ್ವೇಷಪೂರಿತ ಸುಳ್ಳುಗಳು ಕಳವಳ ಹುಟ್ಟಿಸುವಂಥದ್ದಾಗಿದೆ.

ಅಂದರೆ, ಎಚ್ಚರಿಕೆ ತುಂಬಾ ಸ್ಪಷ್ಟವಾಗಿದೆ. ಸರ್ವಾಧಿಕಾರಿ–ಕೋಮುವಾದಿ ಆಡಳಿತದ ದಾರಿಗೆ ಬನ್ನಿ ಎನ್ನುವುದೇ ಆ ಸಂದೇಶವಾಗಿದೆ. ದೇಶದ ಸರ್ವೋನ್ನತ ನ್ಯಾಯಾಂಗವು ಇಂಥ ಬೆದರಿಕೆಗಳನ್ನು ಧೈರ್ಯ ಮತ್ತು ಸ್ಥೈರ್ಯದಿಂದ ದೃಢವಾಗಿ ಎದುರಿಸಿ ನಿಲ್ಲುತ್ತದೆ ಎನ್ನುವುದು ಭಾರತದ ನಾಗರಿಕರ ಆಶಯವಾಗಿದೆ.

ಅನು: ವಿಶ್ವ

ಮತೀಯ ರಾಜಕಾರಣದ ಬಲಿ ಪೀಠದಲ್ಲಿ..........

ಪುಟ 3 ರಿಂದ

ಪ್ರಯತ್ನವಾಗಿಯೂ ಕಾಣುತ್ತದೆ. ಹಿಂದುತ್ವ ಮತ್ತು ಮುಸ್ಲಿಂ ಮೂಲಭೂತವಾದಿಗಳ ಸಂಯೋಜಿತ ಆಟವನ್ನು ತಳ್ಳಿ ಹಾಕುವಂತಿಲ್ಲ.

ರಾಜ್ಯದ ಎಲ್ಲಾ ಪ್ರಜೆಗಳನ್ನು ಜಾತಿ ಮತಧರ್ಮದ ಯಾವುದೇ ಭೇದಭಾವ ಇಲ್ಲದೆ ಸಮಾನವಾಗಿ ಕಾಣುವ ಪ್ರಮಾಣ ವಚನವನ್ನ ತೆಗೆದುಕೊಂಡ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರು ನಡೆದುಕೊಂಡ ರೀತಿ ಅತ್ಯಂತ ಖಂಡನಾರ್ಹವಾದುದು. ಹತ್ಯೆಗೀಡಾದ ಪ್ರವೀಣ್ ನೆಟ್ಟಾರು ಕುಟುಂಬಕ್ಕೆ ಮಾತ್ರವೇ ಸಾಂತ್ವನ ಹೇಳಿ 25 ಲಕ್ಷ ರೂ.ಗಳ ಹಣದ ಪರಿಹಾರವನ್ನು ಘೋಷಿಸಿ ಬಂದ ಅವರು ಅದೇ ಪ್ರದೇಶದಲ್ಲಿ ಅದಕ್ಕೂ ಮೊದಲು ಹತ್ಯೆಗೀಡಾದ ಶಫಿಕ್ ಎನ್ನುವ ತರುಣನ ಕುಟುಂಬಕ್ಕೆ ಸಾಂತ್ವನವನ್ನೂ ಹೇಳದೆ ಬಂದಿರುವುದು ಅತ್ಯಂತ ತಾರತಮ್ಯದ ನಡೆ. ಮೇಲಾಗಿ ಅದು ಬಿಜೆಪಿ ಪಕ್ಷದ ಹಣವಲ್ಲ, ಅದು ಸಾರ್ವಜನಿಕರ ಹಣ. ಮುಖ್ಯಮಂತ್ರಿಗಳು ಒಂದು ಪಕ್ಷದ, ಒಂದು ಧರ್ಮದ ಮುಖ್ಯಮಂತ್ರಿಗಳಲ್ಲ. ಆದರೆ ಅವರು ಫ್ಯಾಶಿಸ್ಟ್ ಮನೋಭಾವದ ಹಿಂದುತ್ವದ ಸಮರ್ಥಕರಾಗಿ ವರ್ತಿಸಿರುವುದು ಒಂದು ರಾಜ್ಯದ ಮುಖ್ಯಮಂತ್ರಿಗೆ ಶೋಭೆ ತರುವ ವಿಚಾರವಲ್ಲ. ಸಂಘ ಪರಿವಾರವನ್ನು ಮೆಚ್ಚಿಸಿ ಹೇಗಾದರೂ ಅಧಿಕಾರಕ್ಕೆ ಅಂಟಿಕೊಂಡೇ ಇರಲು ಯತ್ನಿಸಿದ ಬೊಮ್ಮಾಯಿಯವರು ಸ್ಥಾನದ ಘನತೆಯನ್ನು ಕುಗ್ಗಿಸಿದ್ದಾರೆ. ಒಂದು ತಲೆಗೆ 10 ತಲೆ ಕಡಿಯುವುದಾಗಿ ಬಹಿರಂಗವಾಗಿ ಘೋಷಿಸಿದವರ ಮೇಲೆ ಸರ್ಕಾರ ತಾನಾಗಿಯೇ ಕಾನೂನು ಕ್ರಮಗಳನ್ನು ಜರುಗಿಸದಿರುವುದು ನಿಷ್ಕ್ರಿಯತೆ ಮಾತ್ರವಲ್ಲ ಪರೋಕ್ಷ ಪ್ರೋತ್ಸಾಹವೂ ಆಗಿದೆ. ಕಾನೂನು–ಸುವ್ಯವಸ್ಥೆ, ಸಂವಿಧಾನವನ್ನು ಪಾಲಿಸದೇ ಉಲ್ಲಂಘಿಸುವ ಇಂಥವರು ಅಧಿಕಾರದಲ್ಲಿ ಮುಂದುವರಿಯುವ ಯಾವ ನೈತಿಕತೆಯನ್ನು ಹೊಂದಿಲ್ಲ. ಹಿಂಸೆಯನ್ನು ಪ್ರಚೋದಿಸುವ ಯಾರೇ ಆಗಿರಲಿ ಅಂತಹವರ ಮೇಲೆ ಈಗಲಾದರೂ ಅತ್ಯಂತ ಕಠಿಣ ಕಾನೂನಾತ್ಮಕ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

ಬಸವರಾಜ್ ಬೊಮ್ಮಾಯಿ ಅವರನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ಸೌಹಾರ್ದತೆ, ಶಾಂತಿ ಸಹ ಬಾಳ್ವೆಯ ವಾತಾವರಣವನ್ನು ಸಂಪೂರ್ಣ ನಾಶ ಮಾಡಿ ಕೋಮುವಾದಿ ಉನ್ಮತ್ತತೆಯ ಹಿಂದುತ್ವದ ನಿಜಮುಖದ ಆಡಳಿತವನ್ನು ಜಾರಿಗೊಳಿಸಲು ಸಂಘ ಪರಿವಾರವು ತೀವ್ರ ಪ್ರಯತ್ನ ನಡೆಸುತ್ತಿದೆ. ಮುಂಬರುವ ಚುನಾವಣೆಯ ಲಾಭಕ್ಕಾಗಿಯೇ ಕರಾವಳಿ ಒಳಗೊಂಡು ಇಡೀ ರಾಜ್ಯದಲ್ಲಿ ಮತೀಯ ದ್ವೇಷ ಹೆಚ್ಚಿಸುವ, ವಿವಿಧ ಧಾರ್ಮಿಕ ಸಮುದಾಯಗಳ ನಡುವೆ ವಿಭಜನೆ ತರುವ ಆಟವನ್ನು ಆಡುತ್ತಿದೆ. ಅಪಾರ ಸಂಕಷ್ಟಗಳನ್ನು ಹೇರಿದ ಬಿಜೆಪಿ ಅವುಗಳನ್ನು ಮರೆಮಾಚಲು ಇಂತಹ ಅಪಾಯಕಾರಿ ಆಟಗಳನ್ನು ಆಡುತ್ತಿರುವ ಬಗ್ಗೆ ಜನತೆ ಜಾಗೃತರಾಗಬೇಕು. ಈಗಲಾದರೂ ಇಂತಹ ವಿನಾಶಕಾರೀ ಮತದ್ವೇಷದ ರಾಜಕಾರಣ ತಮ್ಮೆಲ್ಲರ ಬದುಕಿಗೆ ಬಲಿಕೊಡುವ ಪೀಠವಾಗುತ್ತಿರುವುದನ್ನು ಕರಾವಳಿಯ ಪ್ರಬುದ್ಧ ಜನತೆ ಗಮನಿಸಿ ಆ ಶಕ್ತಿಗಳನ್ನು ತಿರಸ್ಕರಿಸಬೇಕು. ಶಾಂತಿ, ಸೌಹಾರ್ದತೆ ನೆಲೆಗೊಳಿಸಿ ಪ್ರಗತಿಗೆ ಅಭಿಮುಖವಾಗಿ ಒಂದಾಗಿ ಮುನ್ನಡೆಯಬೇಕಿದೆ. ಅರಾಜಕತೆ, ಹಿಂಸೆ, ದ್ವೇಷ ದಳ್ಳುರಿಗಳಲ್ಲಿ ಕುದಿಯುವ ಯಾವ ಸಮಾಜವೂ ಅಭಿವೃದ್ಧಿ, ಪ್ರಗತಿಯನ್ನು ಕಾಣಲು ಸಾಧ್ಯವಿಲ್ಲ. ಅದು ಸ್ವನಾಶದ ಕ್ರಿಯೆ ಎನ್ನುವುದನ್ನು ಮನಗಾಣಬೇಕಿದೆ. ●

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00

ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :

ಕ್ರಿಯಾ ಪ್ರಕಾಶನ, ಸೂರಿ ಭವನ

ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560027

ಕಛೇರಿ ದೂರವಾಣಿ : 080–22234369

ಫೋನ್ : 9448578021, 9483966467





ಮಹಿಳಾ ಸಮಾನತೆ, ದೇಶದ ಐಕ್ಯತೆಯತ್ತ, ಸ್ಪಷ್ಟ ನೋಟ–ದಿಟ್ಟ ಹೆಜ್ಜೆ

ಮಹಿಳಾ ಸಮಾನತೆ– ದೇಶದ ಐಕ್ಯತೆಯತ್ತ ಸ್ಪಷ್ಟ ನೋಟ–ದಿಟ್ಟ ಹೆಜ್ಜೆ ಘೋಷಣೆಯೊಂದಿಗೆ 11 ನೇ ಕರ್ನಾಟಕ ರಾಜ್ಯ ಸಮ್ಮೇಳನ ಕಲ್ಬುರ್ಗಿ ನಗರದಲ್ಲಿ ಇದೇ ಆಗಸ್ಟ್ 1,2,3–2022 ರಂದು ನಡೆಯುತ್ತಿದೆ. ಸಮಸ್ತ ಮಹಿಳಾ ಸಮೂಹದ ಸರ್ವಾಂಗೀಣ ಅಭಿವೃದ್ಧಿಗೆ, ನೈಜ ಪ್ರಗತಿಗೆ ಅಗತ್ಯವಾದ ವಾತಾವರಣ ಮತ್ತು ಆಡಳಿತ ವ್ಯವಸ್ಥೆಗಾಗಿ ಒತ್ತಾಯಿಸುವ ಮತ್ತು ನಿರಂತರ ಹೋರಾಟ ಕಟ್ಟುವ ಕಾಯಕದಲ್ಲಿ ಜನವಾದಿ ತನ್ನನ್ನು ತೊಡಗಿಸಿಕೊಂಡು ಕೆಲಸ ಮಾಡುತ್ತಿದೆ. ದೇಶದ ಪ್ರಗತಿಯತ್ತ ನಿಜವಾದ ಬದ್ಧತೆಯಿರುವ ಶಕ್ತಿಗಳು ಮತ್ತು ಸಂಘಟನೆಗಳ ಜೊತೆ ನಿರಂತರವಾಗಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ನಮ್ಮ ಮುಂದೆ ಸವಾಲುಗಳ ಸರಮಾಲೆಯೇ ಇದೆ. ಹಾಗೆಯೇ ಸಾಧನೆಗಳ ಸಂಭ್ರಮವೂ ಇದೆ. ಸಂಘರ್ಷಕ್ಕೆ ಹೆದರದೆ ಹೋರಾಟದ ಸ್ಫೂರ್ತಿಯೂ ಇದೆ.

ನಾಲ್ಕು ದಶಕಗಳು ದಾಟಿದ ಜನವಾದಿ:

ಸ್ವಾತಂತ್ರ್ಯ ಹೋರಾಟದಲ್ಲಿಯೇ ತನ್ನ ಬೇರುಗಳನ್ನು ಹೊಂದಿರುವ ಜನವಾದಿ ಎಂಬ ಹೆಸರಿನೊಂದಿಗೆ ಮಹಿಳೆಯರ ಘನತೆಯ ಬದುಕು ಮತ್ತು ಸಮ ಸಮಾಜದ ನಿರ್ಮಾಣಕ್ಕಾಗಿ ಪಣ ತೊಟ್ಟು ಕಾರ್ಯಾರಂಭ ಮಾಡಿ ನಾಲ್ಕು ದಶಕಗಳು ಸಂದಿವೆ. ಮಹಿಳೆಯರ ಘನತೆಯ ಬದುಕಿಗೆ ಅಡ್ಡಗಾಲಾಗುವ ವರದಕ್ಷಿಣೆ, ಬಾಲ್ಯ ವಿವಾಹದಂತಹ ಪಿಡುಗುಗಳ ವಿರುದ್ಧದ ಸಶಕ್ತ ಧ್ವನಿಯಾಗಿ ಮತ್ತು ಮಹಿಳಾ ಶಿಕ್ಷಣ, ಉದ್ಯೋಗ, ಸ್ವಾಭಿಮಾನಿ, ಸ್ವಾವಲಂಬನೆಯ ಬದುಕಿಗೆ ಅಗತ್ಯವಾದ, ಸೌಲಭ್ಯಗಳಿಗೆ ಒತ್ತಾಯಿಸುವ ಮೂಲಕವೇ ದೇಶದಲ್ಲಿ ತನ್ನ ಚಟುವಟಿಕೆಗಳನ್ನು ಸಂಘಟಿಸುತ್ತ ದೇಶದಾದ್ಯಂತ ಜನವಾದಿ ಈಗ ಬೆಳೆದು ನಿಂತಿದೆ.

40 ವರ್ಷಗಳನ್ನು ಪೂರೈಸಿ ನಿಂತಿರುವ ಈ ಹೊತ್ತಿನಲ್ಲಿ ನಮ್ಮ ಸಾಧನೆಗಳನ್ನು ನಾವು ಗುರುತಿಸಿಕೊಳ್ಳುತ್ತಲೇ, ಹೋರಾಟದಿಂದ ಪಡೆದ ಹಕ್ಕುಗಳು ಕೆಲವು ಅರಿವಿಲ್ಲದೆಯೇ, ಇನ್ನು ಕೆಲವು ನೇರವಾಗಿಯೇ ಕೈ ತಪ್ಪಿ ಹೋಗುತ್ತಿರುವ ಸನ್ನಿವೇಶಗಳಿಗೆದುರಾಗಿ ನಿಂತಿದ್ದೇವೆ. ಇದು ನಮ್ಮ ಮುಂದಿರುವ ದೊಡ್ಡ ಸವಾಲು.

ಸರ್ವರಿಗೂ ಸಮಬಾಳು ನೀಡುವ ಭರವಸೆಯೊಂದಿಗೆ ನಮಗೆ ನಾವೇ ಅರ್ಪಿಸಿಕೊಂಡ ಸಂವಿಧಾನದ ಆಶಯಗಳನ್ನೇ ಬುಡಮೇಲು ಮಾಡುವವರ ಕೈಯಲ್ಲಿ ಇಂದು ಕೇಂದ್ರ ಹಾಗೂ ರಾಜ್ಯದ ಆಡಳಿತಗಳಿವೆ.

ಆರ್ಥಿಕ ಸಮೀಕ್ಷೆಯ ಪ್ರಕಾರ ಮಹಿಳೆ ಮತ್ತು ಮಕ್ಕಳ ಸ್ಥಿತಿ ಗತಿ:

ಕರ್ನಾಟಕ ಆರ್ಥಿಕ ಸಮೀಕ್ಷಾ ವರದಿ 2021 ರ ಪ್ರಕಾರ 6 ರಿಂದ 59 ತಿಂಗಳ ಮಕ್ಕಳ ಶೇಕಡಾವಾರು ರಕ್ತ ಹೀನತೆ 65.5% ಇದೆ. ಶಿಶು ಮರಣ ದರ 1000 ಕ್ಕೆ 25.4 ಇದೆ. ಐದು ವರ್ಷದೊಳಗಿನ ಮಕ್ಕಳ ಮರಣ ದರ 1000 । ಕ್ಕೆ 29.5 ಇದೆ. ಐದು ವರ್ಷದೊಳಗಿನ ಬೆಳವಣಿಗೆ ಕುಂಠಿತಗೊಂಡ ಮಕ್ಕಳು 35.6% ಇದ್ದಾರೆ. 18 ವರ್ಷದೊಳಗೆ ಮದುವೆಯಾದ 20–24 ವಯಸ್ಸಿನ ಮಹಿಳೆಯರ ಪ್ರಮಾಣ 21.3% ಇದೆ. ಆರೋಗ್ಯ ವಿಮೆಗೆ ಒಳಪಟ್ಟ ಒಬ್ಬ ಸದಸ್ಯರಾದರೂ ಇರುವ ಕುಟುಂಬಗಳ ಸಂಖ್ಯೆ ಕೇವಲ 28.1% ಮಾತ್ರ ಇದೆ. ರಾಜ್ಯದಲ್ಲಿ ಮಹಿಳಾ ಸಾಕ್ಷರತೆ 73.4% ಇದೆ. ಒಮ್ಮೆಯೂ ಇಂಟರ್ನೆಟ್ ಬಳಸದ ಮಹಿಳೆಯರು 35% ಗೂ ಹೆಚ್ಚಿದ್ದಾರೆ. 2019–20 ರಲ್ಲಿ 1,2,ಮತ್ತು 3 ನೇ ತರಗತಿಗಳಿಗೆ ದಾಖಲಾದ ಮಕ್ಕಳ ಸಂಖ್ಯೆ 2,46,66,691. ಹೀಗೆ ದಾಖಲಾದವರು, 9,10 ನೇ ತರಗತಿಗೆ ಬರುವಾಗ 1,1932,217 ಮಕ್ಕಳು ಮಾತ್ರ ಉಳಿಯುತ್ತಿದ್ದಾರೆ. ಈ ಕಾಲಾವಧಿಯಲ್ಲಿ ಶಿಕ್ಷಣದ ಹಣದುಬ್ಬರ 9.1%, ಆರೋಗ್ಯದ ಹಣದುಬ್ಬರ 9.75% ಏರಿದೆ. 2019 ರಲ್ಲಿ ಕುಟುಂಬದ ಸರಾಸರಿ ಅನುಭೋಗ 40% ಇಳಿದಿದೆ. ಮಹಿಳೆಯರು ಮತ್ತು ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಹೆಚ್ಚಲು ಇದು ಕಾರಣವಾಗಿದೆ. ಈ ಏಳು ವರ್ಷದ ಅವಧಿಯಲ್ಲಿ ಕಾರ್ಮಿಕರ ಸಂಖ್ಯೆ 40% ಕಡಿಮೆಯಾಗಿದೆ. ಶೇಕಡಾ 82% ಕುಟುಂಬಗಳು ಸಾಲದಲ್ಲಿಯೇ ಕುಟುಂಬ ನಿರ್ವಹಿಸುತ್ತಿವೆ. ಈ ಕಾಲಾವಧಿಯಲ್ಲಿ ಅಡುಗೆ ಅನಿಲದ 144 ಪಟ್ಟು ಬೆಲೆ ಏರಿದೆ.

ಒಟ್ಟು ಜನಸಂಖ್ಯೆಯಲ್ಲಿ 49% ಮಹಿಳೆಯರಿದ್ದು ಆರ್ಥಿಕ ಉತ್ಪಾದನೆಗೆ ಕೇವಲ 18% ಮಹಿಳೆಯರು ಕೊಡುಗೆ ನೀಡುತ್ತಿರುವುದು ಮಹಿಳೆಯರಿಗಿರುವ ದುಡಿಮೆಯ ಅವಕಾಶಗಳ ಚಿತ್ರಣವನ್ನು ಹೇಳುತ್ತದೆ. 2017 ರಿಂದ 2022 ರ ನಡುವೆ ಈ ದೇಶದಲ್ಲಿ 2 ಕೋಟಿ ಮಹಿಳೆಯರ ಉದ್ಯೋಗಗಳು ಕಾಣೆಯಾಗಿವೆ. 2021ರ ಜಾಗತಿಕ ಲಿಂಗ ಅಂತರ ಸೂಚ್ಯಾಂಕದ ಪ್ರಕಾರ 156 ದೇಶಗಳಲ್ಲಿ ಭಾರತ 140 ನೇ ಸ್ಥಾನದಲ್ಲಿದ್ದು 3% ಲಿಂಗ ಅಂತರ ಹೆಚ್ಚಾಗಿದೆ.

ಮುಚ್ಚಿದ ಸಾಂತ್ವನ ಕೇಂದ್ರಗಳು ನಿಂತ ಮಾತೃಶ್ರೀ, ಶುಚಿ ಯೋಜನೆಗಳು:

– ಆರ್ಥಿಕ ಮತ್ತು ಸಾಮಾಜಿಕ ದೌರ್ಜನ್ಯಗಳಿಂದ ಬಳಲಿದ್ದ ಮಹಿಳೆಯರಿಗೆ ಆಸರೆಯಾಗಬೇಕಿದ್ದ ರಾಜ್ಯ ಸರ್ಕಾರ ಈ ಅವಧಿಯಲ್ಲಿ ಹಲವು ಸಾಂತ್ವನ ಕೇಂದ್ರಗಳನ್ನು ಮುಚ್ಚಿತು. ಬಸಿರು ಬಾಣಂತನದ ವೆಚ್ಚಗಳಿಗಾಗಿ ನೀಡುತ್ತಿದ್ದ ಮಾತೃಶ್ರೀ ಸಹಾಯ ಧನವನ್ನು ನಿಲ್ಲಿಸಿತು. ರಾಜ್ಯದಾದ್ಯಂತ ಹಾಸ್ಟಲ್ ಗಳಲ್ಲಿ ವಿದ್ಯಾರ್ಥಿನಿಯರಿಗೆ ನೀಡುತ್ತಿದ್ದ ಸ್ಯಾನಿಟರಿ ನ್ಯಾಪಕಿನ್ ಗಳನ್ನು ಹಣದ ಕೊರತೆ ಎಂದು ನಿಲ್ಲಿಸಲಾಯಿತು. ಸಾವಿರಾರು ಕೋಟಿ ಬಜೆಟ್ ಮಂಡಿಸುವ ರಾಜ್ಯ ಸರಕಾರದ ಬೊಕ್ಕಸಕ್ಕೆ 40–50 ಕೋಟಿ ವೆಚ್ಚ ಮಾಡಿ ಬಡ ಹೆಣ್ಣುಮಕ್ಕಳಿಗೆ ಮುಟ್ಟಿನ ಅವಧಿಯ ಅತ್ಯಗತ್ಯ ಸೌಕರ್ಯವಾದ ನ್ಯಾಪಕಿನ್ಗೆ ಬಳಸಲು ಹಣವಿಲ್ಲ ಎಂಬ ನಗೆಪಾಟಲಿನ ಸಂಗತಿಗೆ ಕರ್ನಾಟಕ ಸಾಕ್ಷಿಯಾಯಿತು.

ಬದುಕು ಕಿತ್ತುಕೊಂಡ ಕೋವಿಡ್, ಕ್ಯಾರೆ ಅನ್ನದ ಸರಕಾರ:

ಹೊಸ ಆರ್ಥಿಕ ನೀತಿಗಳಿಂದ ಜರ್ಝರಿತವಾಗಿದ್ದ ಭಾರತದ ಆರ್ಥಿಕತೆಯು ಕೋವಿಡ್ ಸಾಂಕ್ರಾಮಿಕತೆ ಮತ್ತು ಲಾಕ್ ಡೌನ್ನಿಂದ ಇನ್ನಷ್ಟು ಬಾಧೆಗೆ ಒಳಗಾಯಿತು. ಈ ಅವಧಿಯಲ್ಲಿ ಕೂಲಿ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು ಮತ್ತು ಮಹಿಳೆಯರು ತೀವ್ರ ಸಂಕಷ್ಟಕ್ಕೆ ದೂಡಲ್ಪಟ್ಟರು.

ದುಡಿಮೆಯ ಅವಕಾಶಗಳಿಲ್ಲದೆ, ನಿಯಮಿತ ಆದಾಯವಿಲ್ಲದೆ ಜೀವ ಮತ್ತು ಜೀವನದ ಉಳಿವಿಗಾಗಿ ಪರದಾಡುವಂತಾಯಿತು. ಸಾಂಕ್ರಾಮಿಕದ ಪ್ರಕೋಪ ಕಡಿಮೆಯಾದಂತೆ ಭಾಸವಾಗುತ್ತಿದ್ದರೂ ಅದರಿಂದಾದ ದುಷ್ಪರಿಣಾಮಗಳಿಂದ ಇನ್ನೂ ಪೂರ್ಣವಾಗಿ ಹೊರ ಬರಲಾಗಿಲ್ಲ.

ಶಿಕ್ಷಣದಿಂದ ವಂಚಿತರು, ಉದ್ಯೋಗಾವಕಾಶಗಳ ವಂಚಿತರು, ಕೃಷಿ ಕುಸಿತದಿಂದ ನಿರುಪಾಯರಾಗಿ ವಲಸೆ ಬಂದವರು ಬಹುತೇಕ ಮನೆಗೆಲಸದ ವಿಭಾಗದಲ್ಲಿ ದುಡಿದು ಬದುಕು ಕಟ್ಟಿಕೊಳ್ಳುತ್ತಾರೆ. ಕೋವಿಡ್ ಸಂದರ್ಭದಲ್ಲಿ ಕೆಲಸ ಕಳೆದುಕೊಂಡವರಲ್ಲಿ ಸುಮಾರು ಅರ್ಧದಷ್ಟು ಮನೆಕೆಲಸ ಮಾಡುವ ಮಹಿಳೆಯರು ಈ ಹಿಂದಿನ ಆದಾಯದ ಸ್ಥಿತಿಯನ್ನು ಮುಟ್ಟಿಲ್ಲ. ಹಾಗೆಯೇ ಅಸಂಘಟಿತ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಬಹುಪಾಲು ಮಹಿಳೆಯರು ಕೋವಿಡ್ ಸಂಕಷ್ಟದ ಸಮಯದಲ್ಲಿ ಯಾವುದೇ ಸೌಲಭ್ಯಗಳೂ ಇಲ್ಲದೆಯೇ, ಆದಾಯವೂ ಇಲ್ಲದೆಯೇ ಪರದಾಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಜನರ ರಕ್ಷಣೆಗೆ ಜನವಾದಿ ಮಹಿಳಾ ಸಂಘಟನೆ ಪ್ರಾಣದ ಭಯ ತೊರೆದು ಪರಿಹಾರ ಕಾರ್ಯದಲ್ಲಿ ಧುಮುಕಿದೆ.

ಜಲ ಜೀವನ ಯೋಜನೆ–ನಿರ್ಜಲ ಕುಟುಂಬಗಳು:

ಕರ್ನಾಟಕದಲ್ಲಿ ಅರ್ಧದಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವಿಲ್ಲವೆಂದು ಜಲಜೀವನ್ ಮಿಷನ್ ಯೋಜನೆಯ ಅಂಕಿ ಸಂಕಿಗಳು ಹೇಳುತ್ತವೆ. 49.24 ರಷ್ಟು ಮನೆಗಳಿಗೆ ನಲ್ಲಿ ನೀರು ಸಂಪರ್ಕ ಸಿಗಬೇಕಿದೆ ಎಂಬುದು ಜೀವದಾಯಿನಿ ನೀರೂ ಅಲಭ್ಯವಾದ ರಾಜ್ಯ ನಮ್ಮದು ಎಂಬುದನ್ನು ತೋರಿಸುತ್ತದೆ. ರಾಯಚೂರು, ಬಿಜಾಪುರ ಜಿಲ್ಲೆಗಳಲ್ಲಿ ಕಲುಷಿತ ನೀರು ಸೇವನೆಯಿಂದ ಸಾವುಗಳು ಸಂಭವಿಸಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಜೀವನ ವೆಚ್ಚ ಏರುತ್ತಿದ್ದು ಆದಾಯಗಳು ಕುಸಿಯುತ್ತಿರುವಾಗ ಕನಿಷ್ಠ ಅಗತ್ಯವಾದ ಕುಡಿಯುವ ನೀರಿಗೂ ಮೀಟರ್ ಅಳವಡಿಸುವ ಮೂಲಕ ನೀರನ್ನು ಮಾರಾಟಕ್ಕಿಟ್ಟು ಬಡವರ ಬದುಕನ್ನು ಮತ್ತಷ್ಟು ದುಸ್ತರಗೊಳಿಸಿದೆ.

ಬೆಲೆ ಏರಿಕೆ ಮತ್ತು ಮಹಿಳೆಯರು

ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕಂಡು ಕೇಳರಿಯದ ಹಣದುಬ್ಬರವನ್ನು ದೇಶ ಎದುರಿಸುತ್ತಿದೆ. ಈ ಹಣದುಬ್ಬರ ಕುಟುಂಬಗಳ ಅಸ್ತಿತ್ವವನ್ನೇ ಬುಡಮೇಲು ಮಾಡುತ್ತಿದೆ. ರಾಷ್ಟ್ರೀಯ ಲೆಕ್ಕಪತ್ರ ವ್ಯವಸ್ಥೆಯ ಪ್ರಕಾರ ಕುಟುಂಬಗಳ ಸರಾಸರಿ ಅನುಭೋಗದ ವೆಚ್ಚ 40% ಕಡಿಮೆಯಾಗಿದ್ದು ಗ್ರಾಮಾಂತರದಲ್ಲಿ 27% ನಗರ ಪ್ರದೇಶಗಳಲ್ಲಿ 35% ಕಡಿಮೆಯಾಗಿದೆ. ಕುಟುಂಬದ ನಿರ್ವಹಣೆಗಾಗಿ 82% ಕುಟುಂಬಗಳು ಸಾಲ ವ್ಯವಸ್ಥೆಯ ಮೊರೆ ಹೋಗಿರುವುದು ದೇಶದ ಜನರ ದುಃಸ್ಥಿತಿಯನ್ನು ತೆರೆದಿಟ್ಟಿದೆ. 73% ಕುಟುಂಬಗಳು ಆದಾಯದ ಕುಸಿತದಿಂದಾಗಿ ಆಹಾರದ ಮಿತಬಳಕೆಯಲ್ಲಿದ್ದಾರೆ. ಇದು ಜನತೆಯ ಆರೋಗ್ಯದ ಮೇಲೆ, ಅದರಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ.

ಮಹಿಳೆಯರಲ್ಲಿ ರಕ್ತ ಹೀನತೆ, ಬಿ.12 ಕೊರತೆ, ದಿನವಿಡೀ ಕೆಲಸ ಮಾಡಲಾಗದ ಬಳಲಿಕೆ ರಾಜ್ಯದುದ್ದಗಲಕ್ಕೂ ಸಾರ್ವತ್ರಿಕ ಆರೋಗ್ಯ ಸಮಸ್ಯೆಗಳಾಗಿ ಕಾಡುತ್ತಿವೆ. ಇದು ಮಾತೃ ಮರಣ ಮತ್ತು ಶಿಶುಮರಣಗಳನ್ನು ಹೆಚ್ಚಿಸಿದೆ. ಇದೇ ಸಂದರ್ಭದಲ್ಲಿ ತೈಲ ಬೆಲೆಗಳು ಅನಿಯಂತ್ರಿತವಾಗಿ ಏರುತ್ತಲೇ ಇವೆ. ಅಡುಗೆ ಅನಿಲದ ಬೆಲೆ 144 ಪಟ್ಟು ಹೆಚ್ಚಾಗಿದ್ದು ಇದು ಕುಟುಂಬದ ಬಹುದೊಡ್ಡ ಹೊರೆಯಾಗಿದೆ. ವಿಶ್ವಬ್ಯಾಂಕಿನ ಒತ್ತಡಗಳಿಗೆ ಮಣಿದಿರುವ ಕೇಂದ್ರ ಬಿ.ಜೆ.ಪಿ ಸರ್ಕಾರ ವಿವಿಧ ವಲಯಗಳಲ್ಲಿ ನೀಡುತ್ತಿದ್ದ ಸಬ್ಸಿಡಿಗಳನ್ನು ಬಹುತೇಕ ಸ್ಥಗಿತಗೊಳಿಸುತ್ತಿದ್ದಾರೆ.

ಕೋವಿಡ್ ಸಾಂಕ್ರಾಮಿಕತೆಯಿಂದುಂಟಾದ ಅನಾಹುತಗಳಿಂದ ಚೇತರಿಸಿಕೊಳ್ಳಲಾಗದ ಜನತೆ ಎಲ್ಲ ವಲಯಗಳ ಬೆಲೆಗಳ ಏರಿಕೆಯಿಂದ ತತ್ತರಿಸಿದ್ದಾರೆ. ಕೋವಿಡ್ ಅವಧಿಯಲ್ಲಿ ಜನವಾದಿಯ ಮಧ್ಯಪ್ರವೇಶದಿಂದಾಗಿ ಎ.ಪಿ.ಎಲ್. ಕಾರ್ಡುದಾರರಿಗೂ ಎರಡು ತಿಂಗಳು ಅಕ್ಕಿ ಮತ್ತು ಕಡ್ಲೆ ಕಾಳನ್ನು ನೀಡಿದರು ತದ ನಂತರ ನಮ್ಮ ಬೇಡಿಕೆಯಿಂದಾಗಿ ರೇಷನ್ ಕಾರ್ಡ್ ಬೇರೆ ಜಿಲ್ಲೆಯಲ್ಲಿದ್ದರೂ ರಾಜ್ಯದ ಯಾವ ಮೂಲೆಯಲ್ಲಾದರು ರೇಷನ್ ಪಡೆದುಕೊಳ್ಳಲು ಸರ್ಕಾರ ಆದೇಶ ಹೊರಡಿಸಿ ಈಗಲೂ ಈ ಸೌಲಭ್ಯ ಮುಂದುವರೆದಿದೆ. ಕೆಲವು ಕಡೆಗಳಲ್ಲಿ ದೂರುಗಳು ಕೇಳಿಬರುತ್ತಿವೆ. ಈ ವಿಷಯದಲ್ಲಿ ನಮ್ಮ ಮಧ್ಯಪ್ರವೇಶಗಳು ಹೆಚ್ಚಾಗಬೇಕಿದೆ. ಅವೈಜ್ಞಾನಿಕ ಬಿ.ಪಿ.ಎಲ್ ಎ.ಪಿ.ಎಲ್ ಮಾನದಂಡಗಳನ್ನು ಕೈ ಬಿಟ್ಟು ಎಲ್ಲರಿಗೂ ಆಹಾರ ಖಾತ್ರಿ ನೀಡಬೇಕು.



ಆರೋಗ್ಯ ಮತ್ತು ಮಹಿಳೆ:

ಕೋವಿಡ್ ಸಾಂಕ್ರಾಮಿಕತೆ ಸಾರ್ವಜನಿಕ ಆರೋಗ್ಯ ವಲಯದ ದೌರ್ಬಲ್ಯಗಳನ್ನ ಮತ್ತು ಆಳುವ ಕೇಂದ್ರ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯವನ್ನ

ಪುಟ 10 ಕ್ಕೆ

ಕರಾವಳಿಯಲ್ಲಿ ಮತ್ತೇ ಗರಿಗೆದರಿದ ಕೋಮು ರಾಜಕಾರಣದ ಆಟ

ಮುನೀರ್ ಕಾಟಿಪಳ್ಳ





ನಾಗರಿಕರ ಆತಂಕ ನಿಜವಾಗಿದೆ. ಚುನಾವಣೆಯ ವರ್ಷದಲ್ಲಿ ಹತ್ತು ದಿನಗಳ ಅಂತರದಲ್ಲಿ ಮೂರು ಯುವಕರು ಕೋಮು ದ್ವೇಷದ ರಾಜಕಾರಣಕ್ಕೆ ಬಲಿಯಾಗಿ ಪ್ರಾಣ ತೆತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಈ ರೀತಿ ಧರ್ಮಾಧಾರಿತ ಕೊಲೆಗಳು ಹೊಸದಲ್ಲ. ಕಳೆದ ಮೂರು ದಶಕದಲ್ಲಿ ಅದು ತುಳುನಾಡಿನ ಸಹಜವಾದ ಪ್ರಕ್ರಿಯೆ ಎಂಬಂತೆ ಸರಾಗವಾಗಿ ನಡೆಯತೊಡಗಿವೆ. ಹಾಗೆ ನೋಡಿದರೆ ತುಳುನಾಡು ಎಂದು ಕರೆಯಲ್ಪಡುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಪೂರ್ಣ ಪ್ರಮಾಣದ ಕೋಮುಗಲಭೆಗೆ ತುತ್ತಾದದ್ದು 1992 ರಲ್ಲಿ ಬಾಬರಿ ಮಸೀದಿ ಧ್ವಂಸದ ಸಂದರ್ಭ. ಆಗ ಸರಿ ಸುಮಾರು 10 ಜನ ಕೋಮುಗಲಭೆಯಲ್ಲಿ ಹತರಾಗಿದ್ದರು. ಆ ನಂತರ 1998 ರ ಸುರತ್ಕಲ್ ಕೋಮುಗಲಭೆಯವರೆಗೆ ಯಾವುದೇ ಕೋಮು ಕೊಲೆಗಳು ನಡೆದಿರಲಿಲ್ಲ. 1998 ರಲ್ಲಿ 12 ಜನ ಕೋಮು ಗಲಭೆಗೆ ಬಲಿಯಾದರು. ಆ ನಂತರ ದೊಡ್ಡ ಮಟ್ಟದ ಕೋಮುಗಲಭೆಗಳು ಕಡಿಮೆಯಾದವು ಆದರೆ ಕೋಮುಗಲಭೆಯ ತೀವ್ರತೆಯನ್ನು ಸಾಮಾಜಿಕವಾಗಿ ಕಾಪಿಡುವಂತೆ ಸರಣಿ ಕೊಲೆಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಅದಕ್ಕೆ ಈಗ ಹೊಸ ಸೇರ್ಪಡೆ ಮೊಹಮ್ಮದ್ ಮಸೂದ್, ಪ್ರವೀಣ್ ನೆಟ್ಟಾರು, ಮೊಹಮ್ಮದ್ ಫಾಝಿಲ್.

ಒಂದು ಲೆಕ್ಕಾಚಾರದಂತೆ 92, 98, 2007 ಹೀಗೆ ಮೂರು ಕೋಮುಗಲಭೆಗಳಲ್ಲಿ ಸತ್ತವರ ದುಪ್ಪಟ್ಟು ಸಂಖ್ಯೆಯ ಸಾವುಗಳು 'ಶಾಂತಿ ಕಾಲ' ದಲ್ಲಿ ಪ್ರತೀಕಾರದ ಕೊಲೆಗಳ ಹೆಸರಿನಲ್ಲಿ ನಡೆದಿವೆ. ಹಿಂದುತ್ವವಾದಿ ಕಾರ್ಯಕರ್ತರ ಆಂತರಿಕ ಗ್ಯಾಂಗ್ ವಾರ್ ನಲ್ಲಿ ನಡೆದ ಕೊಲೆಗಳು, ತಮ್ಮನ್ನು ಒಪ್ಪದ ಹಿಂದುಗಳನ್ನು ಗುರಿಯಾಗಿಸಿ ನಡೆಸಿದ ಕೊಲೆಗಳು ಸಾವಿನ ಪಟ್ಟಿಯನ್ನು ಮತ್ತಷ್ಟು ಹಿಗ್ಗಿಸಿವೆ. ಈ ರೀತಿ ಕೊಲೆಗೈಯ್ಯಲ್ಪಟ್ಟವರು, ಕೊಲೆ ಮಾಡಿದವರಲ್ಲಿ ಬಹುತೇಕರು ಬ್ಯಾರಿ ಮುಸಲ್ಮಾನರು ಹಾಗೂ ಬಿಲ್ಲವ ಹಿಂದುಗಳು ಎಂಬುದು ಈ ಪಟ್ಟಿಯಲ್ಲಿ ಎದ್ದು ಕಾಣುವ ಒಂದು ಪ್ರಧಾನ ಅಂಶ.

ಹಿಂದುತ್ವವಾದಿ ಕಾರ್ಯಕರ್ತರಿಂದ ಮೊಹಮ್ಮದ್ ಮಸೂದ್ ಕೊಲೆ ನಡೆದು ಒಂದು ವಾರದ ಅಂತರಲ್ಲಿ ಬಿಜೆಪಿ ಯುವಮೋರ್ಚಾ ಮುಖಂಡ, ಬಿಲ್ಲವ ಯುವಕ ಪ್ರವೀಣ್ ನೆಟ್ಟಾರು ಕೊಲೆಯಾಯಿತು. ಈ ಸಂದರ್ಭ ಇದು ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿಯ ಕೋಮು ಧ್ರುವೀಕರಣದ ರಾಜಕಾರಣಕ್ಕೆ ಬಹುದೊಡ್ಡ ಅಸ್ತ್ರವಾಗಿ ಬಳಕೆಯಾಗಲಿದೆ ಎಂದು ರಾಜಕೀಯ ವಲಯದಲ್ಲಿ ಆತಂಕ ವ್ಯಕ್ತವಾಗಿತ್ತು. ಆದರೆ ನಡೆದದ್ದೇ ಬೇರೆ. ಬೆಳ್ಳಾರೆ ಒಳಗೊಂಡ ಸುಳ್ಯ, ಪುತ್ತೂರು ತಾಲೂಕುಗಳು ಕರಾವಳಿಯಲ್ಲಿ ಸಂಘ ಪರಿವಾರದ ಅತ್ಯಂತ ಶಕ್ತಿಯುತ ನೆಲೆಗಳು ಎಂದು ಗುರುತಿಸಲ್ಪಟ್ಟಿದ್ದರೂ ಮತೀಯ ಹಿನ್ನಲೆಯಲ್ಲಿ ಇಲ್ಲಿ ಈ ಹಿಂದೆ ಯಾವತ್ತೂ ಕೊಲೆಗಳು ನಡೆದಿರಲಿಲ್ಲ. ಇತ್ತೀಚಿನ ದಶಕದಲ್ಲಿ ಪಿ.ಎಫ್.ಐ. ಚಟುವಟಿಕೆಗಳು ಈ ಭಾಗದಲ್ಲಿ ಹೆಚ್ಚಳಗೊಂಡದ್ದು ಸಂಘ ಪರಿವಾರದ ಚಟುವಟಿಕೆಗಳು ಬಿರುಸು ಪಡೆಯುವಂತೆ ಮಾಡಿದ್ದವು. ಅನಿರೀಕ್ಷಿತವಾಗಿ ನಡೆದ ಪ್ರವೀಣ್ ನಂತಹ ತಳಮಟ್ಟದ ಜನಪ್ರಿಯ ಕಾರ್ಯಕರ್ತನ ಕೊಲೆಯ ಆಕ್ರೋಶ ಯಾರೂ ಊಹಿಸದ ರೀತಿಯಲ್ಲಿ ಬಿಜೆಪಿ ನಾಯಕತ್ವದ ವಿರುದ್ದವೇ ತಿರುಗಿತು. ಪ್ರವೀಣ್ ಅಂತಿಮ ಯಾತ್ರೆಗೆ ಸಮಯ ಆಗಿದ್ದರೂ ಇನ್ನೂ ಶಾಸಕರು ಸಹಿತ ಪ್ರಧಾನ ನಾಯಕರು ಪ್ರವೀಣ್ ಶವ ಇದ್ದ ಆಸ್ಪತ್ರೆಗೆ ತಲುಪಿಲ್ಲ ಎಂದು ಬೆಳಿಗ್ಗೆ ಶುರುವಾದ ಆಕ್ರೋಶದ ಸಣ್ಣ ಕಿಡಿ ಮಧ್ಯಾಹ್ನ ಶವಯಾತ್ರೆ ಹುಟ್ಟೂರು ತಲುಪುವಾಗ ಜ್ವಾಲಾಮುಖಿಯಾಯ್ತು. ಕೊನೆ ಗಳಿಗೆಯಲ್ಲಿ ಓಡೋಡಿ ಬಂದ ನಳಿನ್ ಕುಮಾರ್ ಕಟೀಲ್, ಉಸ್ತುವಾರಿ ಸಚಿವ ಸುನಿಲ್ ಕುಮಾರ್ ಆಕ್ರೋಶದ ಕಿಚ್ಚಿಗೆ ನೇರ ಗುರಿಯಾದರು. ಹೀನಾಯ ನಿಂದನೆ, ದಾಳಿಯ ಯತ್ನಗಳು ನಾಯಕರು ಕದ್ದು ಮುಚ್ಚಿ ಓಡಿ ಹೋಗುವಂತೆ ಮಾಡಿದವು. ಕಲ್ಲಡ್ಕ ಪ್ರಭಾಕರ ಭಟ್ ಅಂತವರೂ ತಣ್ಣಗೆ ಜಾಗ ಖಾಲಿ ಮಾಡುವ ಸ್ಥಿತಿ ನಿರ್ಮಾಣವಾದದ್ದು ಆಕ್ರೋಶದ ಹಂತವನ್ನು ಸೂಚಿಸುತ್ತದೆ. ಈ ರೀತಿ ಯಾರೂ ನಿರೀಕ್ಷಿಸದ ರೀತಿಯಲ್ಲಿ ನಡೆದ ಬೆಳವಣಿಗೆಗಳು ಬಿಜೆಪಿಯ ಕೋಮುವಾದದ ರಾಜಕಾರಣಕ್ಕೆ ಬಿದ್ದ ಪ್ರಬಲ ಪೆಟ್ಟು ಎಂಬುದು ಹೆಚ್ಚಿನವರ ವಾದ.

ಆದರೆ ಈ ಆಟಕ್ಕೆ ಬೇರೆಯದ್ದೇ ಆದ ಒಳ ಸುಳಿಗಳೂ ಇವೆ. ಬಿಜೆಪಿ ವರ್ಸಸ್ ಆರೆಸ್ಸೆಸ್, ನಳಿನ್ ಕುಮಾರ್ ಕಟೀಲ್ ವರ್ಸಸ್ ವಿರೋಧಿ ಬಣಗಳ ಆಟವೂ ಈ 'ಆಕ್ರೋಶ'ದ ಹಿಂದೆ ಇದೆ ಎಂಬುದು ಇನ್ನೊಂದು ವಾದ. ಅದಕ್ಕೆ ಪೂರಕವಾಗಿ ನಳಿನ್ ಕುಮಾರ್ ಕಟೀಲ್ ಹಾಗೂ ಅವರ ಬೆಂಬಲಿಗ ಶಾಸಕರು ಒಟ್ಟು ದಾಳಿಯ ಕೇಂದ್ರ ಆಗಿದ್ದದ್ದು, ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾರನ್ನು ಅದೇ ಸಂದರ್ಭ ಹಿಂದುತ್ವವಾದಿ ಕಾರ್ಯಕರ್ತರ ನಂಬಿಕಸ್ಥ ನಾಯಕ ಎಂದು ವಿಜೃಂಭಿಸುವ ಯತ್ನ ನಡೆದದ್ದು ಒಂದು ಮುಖ. ಮುಂದಿನ ಲೋಕಸಭೆ ಅಭ್ಯರ್ಥಿಯಾಗಲು ಪೂಂಜಾ, ಭರತ್ ಶೆಟ್ಟಿ ಆಟ ಶುರುಮಾಡಿರುವುದು ಬಿಜೆಪಿ ಒಳಗಡೆಯಿಂದಲೆ ಹರಿದು ಬರುತ್ತಿರುವ ಮಾಹಿತಿ. ಇದಕ್ಕೆ ಪೂರಕವಾಗಿ ಸಾಮಾಜಿಕ ಜಾಲತಾಣದಲ್ಲಿ ತುಳಿದು ಮುಗಿಸುವ, ಹೊಗಳಿ ಅಟ್ಟಕ್ಕೇರಿಸುವ ಕೆಲಸಗಳು ವ್ಯವಸ್ಥಿತವಾಗಿ ನಡೆದಿವೆ. ಇನ್ನೊಂದು ಆರೆಸ್ಸೆಸ್ ವರ್ಸಸ್ ಬಿಜೆಪಿ. ಹೇಳಿ ಕೇಳಿ ಸುಳ್ಯ ಪುತ್ತೂರು ಆರೆಸ್ಸೆಸ್ ಭದ್ರಕೋಟೆ ಇಲ್ಲಿ ಬಿಜೆಪಿ, ಭಜರಂಗದಳ, ಶಾಸಕ, ಸಂಸದರುಗಳು ಏನಿದ್ದರೂ ಡಮ್ಮಿ. ಇಂತಹ ಭದ್ರ ಕೋಟೆಯಲ್ಲಿ ಈ ಮಹಾ ಬಂಡಾಯ ನಡೆದಿರುವುದು ಅರ್ಥಮಾಡಿಕೊಳ್ಳಲು ಏಳು ಕೆರೆಯ ನೀರು ಕುಡಿದ ಸಾಮರ್ಥ್ಯ ಇರಬೇಕು. ಇತ್ತೀಚೆಗೆ ಬಿಜೆಪಿ ಮುಖಂಡರು, ಜನಪ್ರತಿನಿಧಿಗಳು ಅಧಿಕಾರದ "ಅಮಲಿನಲ್ಲಿ" ಸಂಘವನ್ನೂ ಮೀರಿ ನಡೆಯುತ್ತಿದ್ದಾರೆ ಎಂಬ ಅಸಹನೆ ಸಂಘ ವಲಯದಲ್ಲಿ ಇತ್ತು. ಅವಕಾಶಕ್ಕಾಗಿ ಕಾಯುತ್ತಿದ್ದ "ಸಂಘ" ಪ್ರವೀಣ್ ಸಾವಿನ ಸಂದರ್ಭ ಉಂಟಾದ ಅಸಮಾಧಾನವನ್ನು ಬಳಸಿಕೊಂಡು ಆಕ್ರೋಶವಾಗಿ ಪರಿವರ್ತಿಸಿತು, ರಾಜ್ಯ ಇಡೀ ಹರಡಿತು ಎಂಬುದು ಇನ್ನೊಂದು ಬಲವಾದ ವಾದ. ಸಂಘದ ಬೆಂಬಲ ಇಲ್ಲದಿದ್ದರೆ ರಾಜ್ಯಾದ್ಯಂತ ಯುವ ಮೋರ್ಚಾ ಪದಾಧಿಕಾರಿಗಳ ರಾಜಿನಾಮೆ ಪರ್ವ, ಸೂಲಿಬೆಲೆ, ವಿಕ್ರಂ ಹೆಗ್ಡೆಗಳ ದಾಳಿಗಳು, ಎಬಿವಿಪಿಯ ಮುತ್ತಿಗೆ ಪ್ರಹಸನ ನಡೆಯಲು ಸಾಧ್ಯವಿರಲಿಲ್ಲ. ಈ ಆಟದ ಮೂಲಕ ಆರೆಸ್ಸೆಸ್ ತನ್ನ ತಾಖತ್ತನ್ನು ಬಿಜೆಪಿಯ ಅಧಿಕಾರಸ್ಥರಿಗೆ ತೋರಿಸುವುದು, ಮೂಗುದಾರ ತೊಡಿಸುವಲ್ಲಿ ಯಶಸ್ವಿಯಾಯ್ತು. ಇನ್ನೊಂದು ಕಾರ್ಯಕರ್ತರು, ಬೆಂಬಲಿಗರು ಅದರಲ್ಲೂ ಬಿಲ್ಲವ ಸೇರಿದಂತೆ ಹಿಂದುಳಿದ ಜಾತಿಯ ಜನಗಳಲ್ಲಿ ಮಡುಗಟ್ಟಿದ್ದ ಕೊಲೆ ರಾಜಕಾರಣದಲ್ಲಿ ಬಲಿಪಶು ಮಾಡುವುದರ ವಿರುದ್ಧ ಎದ್ದಿದ್ದ ಅಸಮಾಧಾನ, ಹೊರ ನಡೆಯುವಿಕೆಯನ್ನು ಪ್ರವೀಣ್ ಕೊಲೆಯ ಸಂದರ್ಭ ಉಂಟಾದ ಅಸಮಾಧಾನವನ್ನು ಬಂಡಾಯವಾಗಿ ತಾನೇ ಸ್ವತಹ ಪರಿವರ್ತಿಸಿ ಆ ಬಂಡಾಯ, ಆಕ್ರೋಶ ಕೋಮುವಾದದ ನಿರರ್ಥಕತೆಯ ಕಡೆಗೆ ತಿರುಗದೆ ಮತ್ತಷ್ಟು ತೀವ್ರತರದ ಹಿಂದುತ್ವದ ಆಗ್ರಹವಾಗಿ ಪರಿವರ್ತಿಸುವಲ್ಲಿಯೂ ಅಲ್ಪ ಯಶಸ್ಸು ಸಾಧಿಸಿತು. ಅದರ ಭಾಗವಾಗಿಯೇ ಯುಪಿ ಮಾಡೆಲ್, ಯೋಗಿ ಮಾಡೆಲ್ ಬೇಡಿಕೆ ಬಲವಾಗಿ ಕೇಳಿ ಬರುವಂತೆ ನೋಡಿಕೊಂಡಿತು. ಅಂದರೆ ಮತ್ತಷ್ಟು ತೀವ್ರತರದ ಹಿಂದುತ್ವ, ಮತ್ತಷ್ಟು ಆಕ್ರಮಣಕಾರಿ ಮುಸ್ಲಿಂ ದ್ವೇಷ !. ಅದರಂತೆ ಸರಕಾರದ ಜನೋತ್ಸವ ರದ್ದುಗೊಂಡು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಕ್ಷಿಣ ಕನ್ನಡಕ್ಕೆ ಧಾವಿಸಿದ್ದು, ಮಸೂದ್ ಕುಟುಂಬವನ್ನು ಕಡೆಗಣಿಸಿ ಪ್ರವೀಣ್ ಮನೆಗೆ ಮಾತ್ರ ತೆರಳಿ ಸಾಂತ್ವನ ಹೇಳಿ 25 ಲಕ್ಷ ರೂಪಾಯಿ ಸರಕಾರದಿಂದ, ಇಪ್ಪತ್ತೈದು ಲಕ್ಷ ರೂಪಾಯಿ ಬಿಜೆಪಿ ಯಿಂದ ಪರಿಹಾರ ವಿತರಿಸಿದ್ದು, ಅಂದೇ ರಾತ್ರಿ ಸುರತ್ಕಲ್ ನ ಮಾರುಕಟ್ಟೆಯಲ್ಲಿ ಜನಜಂಗುಳಿಯ ಮಧ್ಯೆ ಫಾಝಿಲ್ ಕೊಲೆ ನಡೆದಿರುವುದು, ಮಾಧ್ಯಮ ಕೂಗು ಮಾರಿಗಳು ಒಂದೇ ಧ್ವನಿಯಲ್ಲಿ ಊಳಿಡುತ್ತಿರುವುದು. ಇದೆಲ್ಲಾ ಬೆಳವಣಿಗೆಗಳು ಮುಸ್ಲಿಮರ ವಿರುದ್ಧದ ಅಸಹನೆ, ದ್ವೇಷವನ್ನು ಸ್ಫೋಟಕ ಹಂತಕ್ಕೆ ಕೊಂಡೊಯ್ದು ದೊಡ್ಡ ಪ್ರಮಾಣದ ಸರಕಾರಿ ಪ್ರಾಯೋಜಿತ ಹಿಂಸೆಗೆ ಸಿದ್ದತೆಯಂತೆಯೂ ಕಾಣುತ್ತಿದೆ.

ಪಿ.ಎಫ್.ಐ. ಜುಗಲ್ ಬಂದಿ

ಬೆಳ್ಳಾರೆಯಲ್ಲಿ ನಡೆದ ಮಸೂದ್ ಕೊಲೆಯ ಮೂಲಕ ಮತೀಯ ಧ್ರುವೀಕರಣದ ಚುನಾವಣಾ ಪೂರ್ವ ಆಟ ಆರಂಭಗೊಂಡರೆ ಪ್ರವೀಣ್ ಕೊಲೆ ಆ ಆಟವನ್ನು ಪೂರ್ತಿಗೊಳಿಸುವ ಯತ್ನದಂತೆ ಕಾಣುತ್ತದೆ. ಪ್ರವೀಣ್ ನೆಟ್ಟಾರು ಕೊಲೆಯಲ್ಲಿ ಪೊಲೀಸ್ ಬಂಧಿಸಿರುವ, ವಶಕ್ಕೆ ಪಡೆದಿರುವ ಬಹುಪಾಲು ಶಂಕಿತರು ಪಿ.ಎಫ್.ಐ. ಸಂಘಟನೆಯ ಸಂಪರ್ಕದಲ್ಲಿ ಇದ್ದವರು. ಬಿಜೆಪಿ ಪರಿವಾರದ ಕೋಮುವಾದಿ ಸವಾಲಿಗೆ ಅದೇ ದಾಟಿಯ ಪ್ರತಿ ಸವಾಲುಗಳ ಮೂಲಕ ಕೋಮು ಕಾವು ಕಾಪಿಟ್ಟುಕೊಳ್ಳಲು ಪಿ.ಎಫ್.ಐ. ಮತ್ತು ಎಸ್.ಡಿ.ಪಿ.ಐ. ಸದಾ ಕೊಡುಗೆ ನೀಡುತ್ತಾ ಬಂದಿವೆ. ಹಿಜಾಬ್ ವಿವಾದವಾಗಲು, ಅದು ಬಿಜೆಪಿ ಅನುಕೂಲಕ್ಕೆ ಬಳಕೆಯಾಗುವಂತೆ ಮಾಡುವಲ್ಲಿ ಪಿ.ಎಫ್.ಐ. ಪಾತ್ರ, 2018 ರ ಚುನಾವಣಾ ಪೂರ್ವ ಕೊಲೆ, ಪ್ರತಿಕೊಲೆಗಳಲ್ಲಿ ಪಿ.ಎಫ್.ಐ. ನೆರಳು ಕೋಮುವಾದಿ ಆಟದ ಮತಾಂಧ ರಂಗನ್ನು ಗಾಢಗೊಳಿಸಿರುವುದು, ಕಡೆಗಣಿಸಿರುವುದು ಸುಳ್ಳಲ್ಲ. ಬಿಜೆಪಿ ಮಂತ್ರಿಗಳು ಸಹಿತ ಪರಿವಾರ ಸದಾ ಪಿ.ಎಫ್.ಐ. ನಿಷೇಧದ ಬೊಬ್ಬೆ ಹೊಡೆಯುವುದು ಅದೇ ಸಂದರ್ಭ ಪಿ.ಎಫ್.ಐ. ಚಟುವಟಿಕೆಗಳು ನಿರ್ವಿಘ್ನವಾಗಿ ನಡೆಯುತ್ತಿರುವುದು, ಬಿಜೆಪಿ, ಸಂಘಪರಿವಾರದ ಬದಲಿಗೆ ಕಾಂಗ್ರೆಸ್, ಕಮ್ಯೂನಿಸ್ಟ್ ಮುಂತಾದ ಜಾತ್ಯಾತೀತ ಪಕ್ಷಗಳನ್ನೇ ಪಿ.ಎಫ್.ಐ., ಎಸ್‌ಡಿಪಿಐ ತನ್ನ ಕಟು ಟೀಕೆಗೆ ಗುರಿಮಾಡುತ್ತಿರುವುದು, ಜಾತ್ಯಾತೀತ ಪಕ್ಷಗಳೆಲ್ಲವೂ ಒಳಸಂಘಿಗಳು ಎಂದು ವಾದ ಮಂಡಿಸುವುದು, ಜಾತ್ಯಾತೀತ ಶಕ್ತಿಗಳನ್ನು ಅಪ್ರಸ್ತುತಗೊಳಿಸಲು ಬಿಜೆಪಿ, ಎಸ್‌ಡಿಪಿಐ ಒಂದೇ ದಾಟಿಯಲ್ಲಿ ಮಾತಾಡುವುದು ಕೋಮುರಾಜಕಾರಣದ ಆಟವೇ ಆಗಿದೆ.



ಮೊಹಮ್ಮದ್ ಮಸೂದ್



ಪ್ರವೀಣ್ ನೆಟ್ಟಾರು



ಮೊಹಮ್ಮದ್ ಫಾಝಿಲ್

ಮಹಿಳಾ ಸಮಾನತೆ, ದೇಶದ ಐಕ್ಯತೆಯತ್ತ, ಸ್ಪಷ್ಟ ನೋಟ–ದಿಟ್ಟ ಹೆಜ್ಜೆ

ಪುಟ 8 ರಿಂದ

ತೆರೆದಿಟ್ಟಿದ್ದನ್ನು ಈ ಕಾಲಾವಧಿಯಲ್ಲಿ ಕಾಣಬಹುದು. ಪ್ರತಿವರ್ಷ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ತೆರೆದಿಡುವ ರಾಜ್ಯದ ಆರ್ಥಿಕ ಸಮೀಕ್ಷಾ ವರದಿ ಈ ಬಗ್ಗೆ ಬೆಳಕು ಚೆಲ್ಲುತ್ತದೆ. ಕರ್ನಾಟಕ ರಾಜ್ಯದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕೊರತೆಗಳನ್ನು ಎತ್ತಿ ತೋರಿಸಿದ್ದರೂ ಎಚ್ಚೆತ್ತುಕೊಳ್ಳದ ರಾಜ್ಯ ಸರ್ಕಾರ ಜನವಿರೋಧಿ ನಡೆಯಿಂದಾಗಿ ಕೋವಿಡ್ ಅವಧಿಯಲ್ಲಿ ಹಾಸಿಗೆ, ಐ.ಸಿ.ಯು ವಾರ್ಡ್, ವೆಂಟಿಲೇಟರ್‌ಗಳು, ಔಷದಿಗಳು ಸಿಗದೆ ಬೀದಿಗಳಲ್ಲಿ, ಆಂಬ್ಯುಲೆನ್ಸ್‌ಗಳಲ್ಲೇ ಹೆಣಗಳು ಉರುಳಿದ್ದವು. ಲಾಕ್ ಡೌನ್ ಅವಧಿಯಲ್ಲಿ ಸಾರಿಗೆ ವ್ಯವಸೆಗಳಿಲದೆ ಮನೆಗಳಲೇ ಹೆರಿಗೆಗಳು ಆಗಿದುಂಟು. ಈ ಸಮಯದಲ್ಲಿ ಹಿರಿಯ ನಾಗರೀಕರ ಪಾಡು ಹೇಳತೀರದಾಗಿತ್ತು. ಕೋವಿಡ್ ಕುರಿತ ಭಯ, ಕೆಲಸಗಳು ಇಲ್ಲದಿದ್ದದ್ದು, ಅನಿಯಮಿತ ಆದಾಯ ಮಾನಸಿಕ ಕೋಟೆಯನ್ನು ಹೆಚ್ಚಿಸಿತ್ತು. ಇವುಗಳನ್ನೆಲ್ಲ ಸಮರ್ಥವಾಗಿ ಮತ್ತು ಆರೋಗ್ಯಕರವಾಗಿ ನಿಭಾಯಿಸುವಲ್ಲಿ ಕೇಂದ್ರ ರಾಜ್ಯ ಸರ್ಕಾರಗಳ ವೈಫಲ್ಯ ಎದ್ದು ಕಾಣುತ್ತಿತ್ತು.

ಸಾಲದ ಸುಳಿಯಲ್ಲಿ ಮಹಿಳೆಯರು

ಕೊವಿಡ್ ಕಾಲಾವಧಿಯಲ್ಲಿ ಕೆಲಸಗಳಿಲ್ಲದೆ ಆದಾಯದ ಕುಸಿತದಿಂದಾಗಿ ಎಂ.ಎಫ್.ಐ.ಗಳಿಂದ ಸಾಲ ಪಡೆದ ಮಹಿಳೆಯರು ನಾನಾ ತರಹದ ಹಿಂಸೆಗಳಿಗೆ ಒಳಾಗಾದುದನ್ನು ರಾಜ್ಯವ್ಯಾಪಿಯಾಗಿ ಕಂಡಿದ್ದೇವೆ. ಸಾಲ ಮರುಪಾವತಿಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮೂರು ತಿಂಗಳ ಗಡುವನ್ನು ನೀಡಿತ್ತು. ಆದರೆ ಧರ್ಮಸ್ಥಳ ಗುಂಪುಗಳನ್ನು ಒಳಗೊಂಡು ಎಂ.ಎಫ್.ಐಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಆರ್.ಬಿ.ಐ ಆದೇಶವನ್ನು ಕಡೆಗಣಿಸಿ ರಾಜಾರೋಷವಾಗಿ ಸಾಲ ವಸೂಲಾತಿಯನ್ನು ಮುಂದುವರೆಸಿ ಆರ್.ಬಿ.ಐ, ಆದೇಶವನ್ನು ತಿರಸ್ಕರಿಸಿದವು. ಸಾಲ ಮರುಪಾವತಿ ಮಾಡದಿದ್ದರೆ ಕೋರ್ಟ್‌ನಲ್ಲಿ ದೂರು ದಾಖಲಿಸುವುದಾಗಿ ಬೆದರಿಸಿ ಬಲಾತ್ಕಾರದ ಸಾಲವಸೂಲಾತಿ ಮಾಡಿವೆ. ಸಂಜೆಯ ವೇಳೆ ಪೊಲೀಸ್ ಕಡೆಯಿಂದ ಒತ್ತಡ ಹಾಕುವುದು, ಮನೆಗಳ ಮುಂದೆ ಅಪಮಾನ ಮಾಡುವ ಹಲವು ಪ್ರಕರಣಗಳು ಮಂಡ್ಯಾ, ಬಳ್ಳಾರಿ ಜಿಲ್ಲೆಗಳಲ್ಲಿ ಘಟಿಸಿವೆ. ಸಾಲ ಮರುಪಾವತಿ ಮಾಡದಿದ್ದಲ್ಲಿ ದಿನಕ್ಕೆ ನೂರು ರೂಪಾಯಿಗೆ ಪ್ರತಿದಿನ ಒಂದು ರೂಪಾಯಿಯಂತೆ ಬಡ್ಡಿ ವಿಧಿಸಿ ಹೆದರಿಸಿದ್ದಾರೆ. ಅಂತಹ ಸಂದರ್ಭಗಳಲ್ಲಿ ಮಹಿಳಾ ಸಂಘಟನೆಗಳ ಪ್ರತಿರೋಧವಾಗಿ, ಹಲವು ಹಂತದ ಹೋರಾಟಗಳ ಮೂಲಕ ಎಚ್ಚರಿಕೆ ನೀಡಿದ ಪರಿಣಾಮ ಮಹಿಳೆಯರ ವಿರುದ್ಧ ಎಂಎಫ್.ಐಗಳು ಕ್ರಮಕೈಗೊಳ್ಳದಂತಾಯ್ತು. ಈ ಹಿಂದೆ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳಿಂದ ನೇರ ಸಾಲ ಸೌಲಭ್ಯಗಳು ಸರ್ಕಾರದಿಂದ ಸುತ್ತು ನಿಧಿ ಸಬ್ಸಿಡಿ, ತರಬೇತಿ ಸಿಗುತ್ತಿತ್ತು, ತದನಂತರದಲ್ಲಿ ಬ್ಯಾಂಕುಗಳು ಎನ್.ಜಿ.ಓ ಗಳೊಂದಿಗೆ ಒಡಂಬಡಿಕೆ ಮಾಡಿಕೊಂಡ ಪರಿಣಾಮ ಮಹಿಳೆಯರಿಗೆ ನೇರ ಸಾಲ ಸಿಗದಂತಾಯ್ತು. ಸಾಲ ತೆಗೆದುಕೊಂಡ ಕೆಲ ಸಂಘಗಳಿಗೆ ಎನ್.ಜಿ.ಓಗಳು ತೀವ್ರ ಒತ್ತಡಗಳನ್ನು ಹಾಕಿ ಮಾನಸಿಕ ಕಿರುಕುಳಗಳನ್ನು ನೀಡಿದ್ದಾರೆ. ಅಧಿಕ ಬಡ್ಡಿ ಮತ್ತು ಸಾಲ ವಸೂಲಾತಿಯ ಕಿರುಕುಳ ತಡೆಯಲಾರದೆ ಸ್ತ್ರೀಶಕ್ತಿ ಸ್ವಸಹಾಯಸಂಘಗಳು ಹಂತ ಹಂತವಾಗಿ ನಶಿಸುತ್ತಿವೆ. ಈ ಸಂದರ್ಭವನ್ನು ಬಳಸಿಕೊಂಡ ಧರ್ಮಸ್ಥಳ ಗುಂಪುಗಳು ಮತ್ತು ಎಂ.ಎಫ್. ಐಗಳು ನಾಡಿನ ಉದ್ದಗಲಕ್ಕೂ ಹಲವಾರು ರೀತಿಯ ಆಮಿಷಗಳ ಮೂಲಕ ಮಹಿಳೆಯರನ್ನು ಆಕರ್ಷಿಸಿ ಸಾಲದ ಸುಳಿಗೆ ದೂಕಿದ್ದಾರೆ. ಕೋವಿಡ್ ಅವಧಿಯ ಈ ಪರಿಣಾಮಗಳಿಂದ ಚೇತರಿಸಿಕೊಳ್ಳಲಾಗದ ಮಹಿಳೆಯರಿಗೆ ಆರ್.ಬಿ.ಐ ಏಪ್ರಿಲ್ 1, 2022 ರಿಂದ ಎಂ.ಎಫ್.ಐ. ಗಳು ವಿಧಿಸುತ್ತಿದ್ದ ಬಡ್ಡಿಯ ಮೇಲಿನ ಮಿತಿಯನ್ನು ತೆಗೆದು ಹಾಕಿದೆ. ಇದು ಎಂ.ಎಫ್.ಐ ಗಳಿಗೆ ಮಹಿಳೆಯರನ್ನು ಸುಲಿಗೆ ಮಾಡಲು ರಹದಾರಿಯನ್ನು ಒದಗಿಸಿದಂತಾಯಿತು. ಮುಂದಿನ ದಿನಗಳಲ್ಲಿ ಈ ನಿರ್ದೇಶನಗಳನ್ನು ಹಿಂಪಡೆಯುವಂತೆ ತೀವ್ರ ತೆರನಾದ ಹೋರಾಟಗಳನ್ನು ರೂಪಿಸಬೇಕಿದೆ. ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳನ್ನು ಬಲಪಡಿಸಲು ಅಗತ್ಯ ಬಜೆಟ್ ನೀಡಿ ಮಹಿಳೆಯರನ್ನು ಸಬಲೀಕರಿಸುವ ಕ್ರಮಗಳಿಗೆ ಮುಂದಾಗಬೇಕಿದೆ. ಬ್ಯಾಂಕುಗಳ ಶಾಖೆಗಳನ್ನು ಗ್ರಾಮ ಮಟ್ಟಕ್ಕೆ ವಿಸ್ತರಿಸಿ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ರಚನೆಗೆ ಮತ್ತು ವಿಸ್ತರಣೆಗೆ ಆದ್ಯ ಗಮನ ನೀಡಿ, ಮಹಿಳೆಯರಿಗೆ ಆದಾಯದಾಯಕ ಚಟುವಟಿಕೆಗಳ ತರಬೇತಿಗಳನ್ನು ನೀಡಿ ಅವರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯ ಖಾತ್ರಿಯನ್ನು ಒದಗಿಸಲು ಒತ್ತಾಯಿಸಬೇಕಿದೆ.

ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಮಹಿಳೆಯರು

ಕೋವಿಡ್ ಮೊದಲ ಅಲೆಯ ಲಾಕ್ಡೌನ್ ಸಮಯದಲ್ಲಿ ಗ್ರಾಮೀಣ ಉದ್ಯೋಗ ಯೋಜನೆಯಡಿ ಬರುವ ಕೂಲಿಕೆಲಸಗಳು ನಡೆಸದಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ ರಾಜ್ಯವ್ಯಾಪಿ ನಡೆದ ಹೋರಾಟಗಳಿಂದಾಗಿ ಸರ್ಕಾರ ತನ್ನ ಆದೇಶವನ್ನು ಹಿಂಪಡೆಯಿತು. ಅದರ ಪರಿಣಾಮ ಮನರೇಗಾದಡಿಯಲ್ಲಿ 2019–20 ರಲ್ಲಿ 145.35



ಕೋಟಿ ಮಾನವ ದಿನಗಳ ಕೆಲಸ ನಡೆದಿದ್ದು 2020–21 ರಲ್ಲಿ 207ಕೋಟಿ ಮಾನವ ದಿನಗಳ ಕೆಲಸ ನಡೆದಿದೆ. ಆದಾಗ್ಯು ಕೇಂದ್ರ ಸರ್ಕಾರ ವರ್ಷದಿಂದ ವರ್ಷಕ್ಕೆ ಮನರೇಗಾ ಜಾರಿಗಾಗಿ ನೀಡುತ್ತಿರುವ ಬಜೆಟ್ನು ಕಡಿಮೆ ಮಾಡುತ್ತಲೇ ಬಂದಿದೆ. ಕೋವಿಡ್ ಅಯೋಜಿತ ಲಾಕ್ಡೌನ್ನಿಂದಾಗಿ ಊರುಗಳತ ಮರಳಿದ ನಗರ ಕೂಲಿ ಕಾರ್ಮಿಕರು, ಗಾರ್ಮೆಂಟ್ ನೌಕರರಾದಿಯಾಗಿ, ಯುವ ಜನರು, ರೈತರು, ವಿದ್ಯಾರ್ಥಿಗಳು ಮನರೇಗಾ ಕೆಲಸಗಳಲ್ಲಿ ತೊಡಗಿಸಿಕೊಂಡರು. ಇದರ ಪರಿಣಾಮ ಮನರೇಗಾ ಕೂಲಿಕಾರರ ಸಂಖ್ಯೆಯು ಜಾಸ್ತಿಯಾಯ್ತು. ಇಂಥಹ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಕೃಷಿ ರಂಗದಲ್ಲಿ ತೊಡಗಿರುವವರಿಗೆ ದಿನಕ್ಕೆ 424 ರೂಗಳನ್ನು ಶಾಸನಬದ್ದ ಕೂಲಿಯಾಗಿ ನೀಡಬೇಕೆಂದು ಆದೇಶಿಸಿತಾದರೂ ಅದನ್ನು ಜಾರಿಗೊಳಿಸುವಲ್ಲಿ ಬದ್ಧತೆಯನ್ನು ತೋರುತ್ತಿಲ್ಲ. ಈ ಮಧ್ಯೆ ಮನರೇಗಾ ಕೆಲಸಗಳ ಸಲಕರಣೆಗಳಿಗೆ ನೀಡುತ್ತಿದ್ದ ಸಾಮಗ್ರಿ ವೆಚ್ಚ ದಿನಕ್ಕೆ 10 ರೂ ನೀಡುತ್ತಿದ್ದುದನ್ನು ಸಹ ಕೇಂದ್ರ ಸರ್ಕಾರ ನಿಲ್ಲಿಸಿ ದ್ರೋಹವೆಸಗಿದೆ. ಜೀವನ ವೆಚ್ಚಗಳು ಗಗನಕ್ಕೇರಿರುವ ಸಂದರ್ಭದಲ್ಲಿ ಈ ಆದೇಶ ಕೂಲಿಕಾರರ ಹೊಟ್ಟೆಯ ಮೇಲೆ ಹೊಡೆಯುವಂಥದ್ದಾಗಿದೆ. ಈ ಹಿನ್ನಲೆಯಲ್ಲಿ ಮನರೇಗಾವನ್ನು ಸಮರ್ಪಕವಾಗಿ ಜಾರಿಗೊಳಿಸಲು ಅಗತ್ಯ ಬಜೆಟ್ನು ನೀಡಬೇಕು. ಕನಿಷ್ಠ 200 ದಿನಗಳ ಕೆಲಸ ಮತ್ತು ದಿನಕ್ಕೆ 700 ಕನಿಷ್ಟ ಕೂಲಿ ನೀಡುವಂತೆ ಹೋರಾಟಗಳನ್ನು ಬಲಪಡಿಸಬೇಕಿದೆ. ಜನರ ಜೀವನ ಮಟ್ಟ ಕುಸಿಯುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಲು ಒತ್ತಾಯಿಸಬೇಕಿದೆ.

ಶಿಕ್ಷಣದಲ್ಲಿ ಏರುಪೇರು:

ಕೋವಿಡ್ ಸಂದರ್ಭದಲ್ಲಿ ಮಕ್ಕಳ ಶಿಕ್ಷಣದ ಮೇಲೆ ತೀವ್ರ ಪರಿಣಾಮ ಉಂಟಾಯಿತು. ಆನ್ ಲೈನ್ ತರಗತಿಗಳೆಂಬ ಕಣ್ಕಟ್ಟು ನಡೆಯಿತಾದರೂ ಅದರ ಪ್ರಯೋಜನ ಗ್ರಾಮೀಣ ಮತ್ತು ನಗರಗಳ ಬಡ ಮಕ್ಕಳಿಗೆ ಸಿಗದಂತಾಯಿತು. ಕೆಲವು ಪ್ರದೇಶಗಳಲ್ಲಿ ಮಕ್ಕಳ ಅನ್ ಲೈನ್ ತರಗತಿಗಳಿಗೆ ಅಗತ್ಯವಾದ ಮೊಬೈಲ್ ಮತ್ತು ಕರೆನ್ಸಿ ಹಾಕಿಸಲು ಮಾಂಗಲ್ಯಸರವನ್ನು ಮಾರಿದ ಪ್ರಕರಣಗಳು ನಡೆದಿವೆ. ಮಗ ಮತ್ತು ಮಗಳು ಇಬ್ಬರಿಗೆ ಸಾಧನಗಳನ್ನು ಒದಗಿಸಲು ಸಾಧ್ಯವಾಗದಾಗ ಮಗಳಿಗೆ ಶಿಕ್ಷಣ ದೂರವಾದ ಸನ್ನಿವೇಶಗಳೂ ವರದಿಯಾದವು.

ಈ ಮೇಲಿನ ಚಿತ್ರಣ ನಾಡಿನ ಮಹಿಳೆ ಮತ್ತು ಮಕ್ಕಳ ಆರ್ಥಿಕ ದುಃಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಹೆಣ್ಣು ಮೃಕಳ ಶಿಕ್ಷಣ, ಆರೋಗ್ಯದ ಸುರಕ್ಷತೆ, ದುಡಿಮೆಯ ಅವಕಾಶಗಳು ಪ್ರಭುತ್ವದ ರಾಜಕೀಯ ಬದ್ಧತೆಯನ್ನವಲಂಬಿಸಿರುತ್ತವೆ. ಆದರೆ ಕರ್ನಾಟಕ ಸರಕಾರ ತಾನೇ ಘೋಷಿಸಿಕೊಂಡ ಸುಸ್ಥಿರ ಅಭಿವೃದ್ಧಿಯ ಯೋಜನೆಗಳನ್ನು ಮೂಲೆಗೆ ತಳ್ಳಿ, ಅದರ ವಿರುದ್ಧ ಜನ ಸಿಡಿದೇಳದಂತೆ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮು ಧೃವೀಕರಣದ ಕೆಲಸಗಳಲ್ಲಿ ಮಗ್ನವಾಗಿದೆ.

ಆರ್ಥಿಕ ದೌರ್ಜನ್ಯಗಳಿಗೊಳಗಾದ ಜನತೆಯನ್ನು ಕೋಮುವಾದದ ಮೂಲಕ ದಿಕ್ಕು ತಪ್ಪಿಸುವ ಹುನ್ನಾರ:

ಆರ್.ಎಸ್.ಎಸ್. ಈ ಅವಧಿಯಲ್ಲಿ ಕರ್ನಾಟಕವನ್ನು ಪ್ರಯೋಗ ಶಾಲೆಯಾಗಿಸಿಕೊಂಡು ದಕ್ಷಿಣ ಭಾರತದಲ್ಲಿ ಹಿಂದುತ್ರ ಕೋಮುವಾದವನ್ನು ವಿಸ್ತರಿಸುವ ಪ್ರಯತ್ನಗಳನ್ನು ಈ ಅವಧಿಯಲ್ಲಿ ತೀವ್ರಗೊಳಿಸಿದೆ. ಪ್ರತಿಯಾಗಿ ಅಲ್ಪಸಂಖ್ಯಾತ ಮೂಲಭೂತವಾದವು ತನ್ನ ಶಕ್ತಿ ಹೆಚ್ಚು ಮಾಡಿಕೊಳ್ಳಲು ವ್ಯವಸ್ಥಿತವಾಗಿ ಪ್ರಯತ್ನಿಸಿದೆ ಮತ್ತು ಅಲ್ಲಲ್ಲಿ ಯಶಸ್ವಿಯೂ ಆಗುತ್ತಿದೆ.

ಸಂಸತ್ತು ಅಥವಾ ವಿಧಾನಸಭಾ ಅಧಿವೇಶನಗಳು ನಡೆಯುತ್ತಿಲ್ಲದಿರುವಾಗ ಮತ್ತು ಸಮಾಜದಲ್ಲಿ ಉದ್ಭವಿಸಿದ ಸಮಸ್ಯೆಗಳಿಗೆ ಪರಿಹಾರ ನೀಡುವ ಕಾನೂನುಗಳಿಲ್ಲದಿದ್ದಾಗ ರಾಜ್ಯಪಾಲರು/ರಾಷ್ಟ್ರಾಧ್ಯಕ್ಷರು ಸುಗ್ರೀವಾಜ್ಞೆಯನ್ನು ಹೊರಡಿಸಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಯಾವ ನಿಯಮಗಳನ್ನೂ ಪಾಲಿಸದೇ ತನಗೆ ಅನುಕೂಲ ಮಾಡಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಿಕ್ಕ ಸಿಕ್ಕ ಹಾಗೆ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಿರುವುದು ವಾಡಿಕೆಯಾಗಿ ಬಿಟ್ಟಿದೆ. ಡಿಸೆಂಬರ್ 2021ರಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕುಗಳ ಸಂರಕ್ಷಣಾ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಅಲ್ಲಿ ಅಂಗೀಕಾರ ಪಡೆದು ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಪಡೆಯುವ ಬಹುಮತ ಸರಕಾರಕ್ಕೆ ಇರಲಿಲ್ಲ. ಈ ಜನಾದೇಶವನ್ನು ಒಪ್ಪದ ರಾಜ್ಯ ಬಿ.ಜೆ.ಪಿ ಸರಕಾರ ಮತಾಂತರ ನಿಷೇಧ ಕಾಯ್ದೆಯನ್ನು ಅಸಂವಿಧಾನಿಕವಾಗಿ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಿದೆ. ತನಗಿಷ್ಟವಾದ ಮತ ಧರ್ಮವನ್ನು ಮತ್ತು ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ದೇಶದ ಸಂವಿಧಾನವೇ ನೀಡಿದೆ. ಹಾಗೆಯೇ ಯಾರೇ ಬಲವಂತದಿಂದ ಮತಾಂತರ ಮಾಡದಂತೆ ನಿರ್ಬಂಧಗಳನ್ನೂ ಹೇರಿದೆ. ಶಿಕ್ಷೆಯನ್ನೂ ಹೇಳಿದೆ. ಹಾಗಿದ್ದೂ ಕೇವಲ ತನ್ನ ಕುಟಿಲ ಕೋಮು ರಾಜಕಾರಣದ ಅಜೆಂಡಾವನ್ನು ವ್ಯವಸ್ಥಿತವಾಗಿ ಜಾರಿ ಮಾಡಲು ರಾಜ್ಯ ಬಿ.ಜೆ.ಪಿ ಸರಕಾರ ಈ ರೀತಿಯ ಕ್ರಮಗಳನ್ನು ಅನುಸರಿಸುತ್ತಿದೆ. ಮೇಲ್ನೋಟಕ್ಕೆ ಇದು ಮತಾಂತರವನ್ನು ನಿರ್ಬಂಧಿಸುವ ಕಾಯ್ದೆಯಂತೆ ಕಂಡು ಬಂದರೂ ಇದು ಯುವ ಜನರ ಆಯ್ಕೆ ಹಕ್ಕುಗಳ ವಿರುದ್ಧದ ದಾಳಿ ಆಗಿದೆ ಮತ್ತು ಅಲ್ಪ ಸಂಖ್ಯಾತ ಸಮುದಾಯವನ್ನು ಗುರಿಯಾಗಿರಿಸಿಕೊಂಡು ಬಹು ಸಂಖ್ಯಾತರ ಮಧ್ಯೆ ಅಪನಂಬಿಕೆಯನ್ನು ಮೂಡಿಸುವ ದೊಡ್ಡ ಸಂವಿಧಾನ ವಿರೋಧಿ ಸಂಚಾಗಿದೆ.

ತಲೆಯ ಮೇಲಿನ ವಸ್ತ್ರಕ್ಕೂ ತಕರಾರು:


ಈ ಅವಧಿಯಲ್ಲಿ ಕರ್ನಾಟಕ ಹಲವು ಮುಜುಗರದ ಸನ್ನಿವೇಶಗಳಿಗೆ ಒಳಗಾಗುವಂತೆ ಸರಕಾರೀ ಪ್ರಾಯೋಜಿತ, ಆರ್.ಎಸ್.ಎಸ್ ಪ್ರಚೋದಿತ ಕೃತ್ಯಗಳು ನಡೆದು ಹೋದವು. ಇತ್ತೀಚೆಗೆ ನಡೆದ ಕೆಲವನ್ನು ಉದಾಹರಿಸುವುದಾದರೆ ಮುಸ್ಲಿಂ ಹೆಣ್ಣುಮಕ್ಕಳು ಧರಿಸುವ ಶಿರವಸ್ತ್ರವನ್ನು ಅಸ್ತ್ರವನ್ನಾಗಿ ಬಳಸಿ ಅವರ ಶೈಕ್ಷಣಿಕ ಹಕ್ಕಿನ ಮೇಲೆ ಧಾಳಿ ಮಾಡಲಾಗಿದೆ. ಅನಗತ್ಯವಾಗಿ ಉಡುಪು ಸಂಹಿತೆಯನ್ನು ಮುಂದೆ ಮಾಡಿ ಮಕ್ಕಳ ಮನಸ್ಸಿನಲ್ಲಿ ಕೋಮು ವಿಷವನ್ನು ಬಿತ್ತಲಾಗಿದೆ.

ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಪಾತ್ರವನ್ನೂ ಇಲ್ಲಿ ಗುರುತಿಸಲೇಬೇಕು. ಇದ್ದಕ್ಕಿದ್ದಂತೆಯೇ ವಸ್ತ ಸಂಹಿತೆಯ ವಿಷಯವನ್ನು ಮುನ್ನೆಲೆಗೆ ತರುವಲ್ಲಿ ಹಿಂದುತ್ವ ಕೋಮುವಾದ ಮತ್ತು ಮುಸ್ಲಿಂ ಮೂಲಭೂತವಾದಗಳ ಕೈವಾಡವನ್ನಿಲ್ಲಿ ಗುರುತಿಸಬೇಕು. ತಲೆವಸ್ತ್ರ ಧರಿಸಿಯೇ ತರಗತಿಯಲ್ಲಿ ಕುಳಿತುಕೊಳ್ಳುವ ಹಠಕ್ಕೆ ಕೆಲವು ವಿದ್ಯಾರ್ಥಿನಿಯರನ್ನು ಪ್ರಚೋದಿಸಿದರೆಂದು ವರದಿಯಾದ ಘಟನೆ, ನಂತರದಲ್ಲಿ ನೂರಾರು ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಧಕ್ಕೆ ತಂದೊಡ್ಡಿತು. ಹಿಂದೆಂದೂ ಚಾಲ್ತಿಯಲ್ಲಿ ಇಲ್ಲದ ಕೇಸರಿ ಶಾಲು ಹಿಂದೂಗಳ ಸಮವಸ್ತ್ರವೆಂಬಂತೆ ಬಿಂಬಿಸಲ್ಪಟ್ಟು, ಗೆಳೆಯ ಗೆಳತಿಯರಾಗಿ ಒಟ್ಟಿಗೇ ಕಲಿಯುತ್ತ ನಲಿಯುತ್ತ ಇದ್ದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕೋಮು ನಂಜನ್ನು ಬಿತ್ತಲು ಈ ಘಟನೆ ನಾಂದಿಯಾಯಿತು. ಇದು ಮುಂದಿನ ದಿನಗಳಲ್ಲಿ ರಾಜ್ಯದ ಹಲವೆಡೆ ಅನಗತ್ಯ ವಿವಾದ ಸೃಷ್ಟಿಸಿತು. ನ್ಯಾಯಾಲಯದ ಕಟಕಟೆಯನ್ನೂ ಏರಿತು. ಅದನ್ನು ಕೆಲವರು ಧಾರ್ಮಿಕ ಆಚರಣೆಯ ಭಾಗವನ್ನಾಗಿ ಪ್ರತಿಪಾದಿಸಿದರು. ಇನ್ನು ಕೆಲವರು ಸಮವಸ್ತ್ರ ಕಡ್ಡಾಯ ವಿಷಯವನ್ನು ಕೇಂದ್ರೀಕರಿಸಿ ವಾದ ಮಂಡಿಸಿದರು. ಈ ಪ್ರಕರಣದಲ್ಲಿ ಜನವಾದಿಯು ಇದನ್ನು ಮಹಿಳೆಯರ ಶಿಕ್ಷಣ ಮತ್ತು ಆಯ್ಕೆ ಸ್ವಾತಂತ್ರ್ಯದ ಭಾಗವಾಗಿ ನೋಡಬೇಕೆಂದು ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಹಾಕಿತು. ಪ್ರಕರಣದ ತೀರ್ಪು ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕಿನ ಪರವಾಗಿ ಬಾರದಿರುವ ಹಿನ್ನೆಲೆಯಲ್ಲಿ ದೂರುದಾರರು ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ಹಲವಾರು ಮುಸ್ಲಿಂ ಹೆಣ್ಣುಮಕ್ಕಳಿಗೆ ಹಿಜಾಬ್ /ತಲೆವಸ್ತ್ರ ಧರಿಸಿಬಂದರೆಂಬ ಕಾರಣಕ್ಕೆ ಪರೀಕ್ಷಾ ಪ್ರವೇಶ ಪತ್ರವನ್ನು ಕೊಡದ ಘಟನೆಗಳು ನಡೆದವಲ್ಲದೇ ನೂರಾರು ವಿದ್ಯಾರ್ಥಿನಿಯರು ಪರೀಕ್ಷೆ ಬರೆಯಲಾಗದ ಸ್ಥಿತಿ ನಿರ್ಮಾಣವಾಯಿತು. ಧಾರ್ಮಿಕ ಮೂಲಭೂತವಾದದ ಹಿಡಿತದಿಂದ ಹೊರಬರಲು ಇರುವ ಒಂದು ಅವಕಾಶವಾಗಿ ಶಿಕ್ಷಣವನ್ನು ಪಡೆಯಬಹುದಾಗಿದ್ದ ಮುಸ್ಲಿಂ ಹೆಣ್ಣು ಮಕ್ಕಳು ಬಾಣಲೆಯಿಂದ ಬೆಂಕಿಗೆ ಬಿದ್ದಂತ ಸ್ಥಿತಿಗೆ ತಲುಪಿದರು. ಶಿರವಸ್ತ್ರ ಧರಿಸದಿದ್ದರೆ ಮನೆಯಿಂದ ಹೊರ ಬರುವಂತಿಲ್ಲ, ಧರಿಸಿ ಬಂದರೆ ತರಗತಿಗೆ ಪ್ರವೇಶವಿಲ್ಲ. ಹೀಗೆ ಯಾವುದನ್ನು ಅನುಸರಿಸಿದರೂ ಶಿಕ್ಷಣದಿಂದ ವಂಚಿತಳಾಗುವುದು ಎಂಬ ಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಇದು ಹಿಂದುತ್ವ ವಾದಿಗಳಿಗಾದ ಮೇಲುಗೈ ಎಂದು ಮೇಲ್ನೋಟಕ್ಕೆ ಕಂಡು ಬಂದರೂ ಮುಸ್ಲಿಂ ಸಮುದಾಯದ ಮಹಿಳೆಯರು ಧಾರ್ಮಿಕ ಮೂಲಭೂತವಾದದ ಹಿಡಿತಕ್ಕೆ ಒಳಗಾಗುವಂಥಹ ಸನ್ನಿವೇಶವನ್ನು ಈ ಪ್ರಕರಣಗಳು ಸೃಷ್ಟಿಸಿದವು.

ಶೈಕ್ಷಣಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಹೆಣ್ಣುಮಕ್ಕಳನ್ನು ಗುರಿಯಾಗಿಸಿ ನಡೆದ ವಿದ್ಯಮಾನಗಳು ಮಹಿಳಾ ವಿರೋಧಿ ಮತ್ತು ಮಾನವ ಹಕ್ಕುಗಳ ವಿರೋಧಿ ನಡೆಗಳಾಗಿವೆ.

ತಿನ್ನುವ ಆಹಾರಕ್ಕೂ ಧರ್ಮದ ಲೇಪ ಹಚ್ಚಿದ ಕ್ರೌರ್ಯ:

ಯುಗಾದಿ ಹಬ್ಬದ ಸಂದರ್ಭದಲ್ಲಿ ಹಲಾಲ್ ಕಟ್ ಮತ್ತು ಜಟಕಾಕಟ್ ಮಾಂಸ ಮಾರಾಟ ಮಾಡುವ ಅಲ್ಪಸಂಖ್ಯಾತ ಸಮುದಾಯದ ಅಂಗಡಿಗಳಿಗೆ ಬಹಿರಂಗ ಜೀವಬೆದರಿಕೆ





ಸಂಸತ್ತಿನ ಎದುರು 4 ದಿನಗಳ "ಅಂಗನವಾಡಿ ಅಧಿಕಾರ ಮಹಾ ಪಡಾವ್"
"ನಮ್ಮ ಹಕ್ಕು ಪಡೆದೇ ಏಳುತ್ತೇವೆ"-ಅಂಗನವಾಡಿ ನೌಕರರ ದೃಢ ನಿರ್ಧಾರ

ದೇಶದ ರಾಜಧಾನಿಯಲ್ಲಿ ಸಂಸತ್ತಿನಿಂದ ಸ್ವಲ್ಪವೇ ದೂರದಲ್ಲಿ ಇರುವ ಜಂತರ್ ಮಂತರ್ ನಲ್ಲಿ ಜೂನ್ 26 ರಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಮ್ಮ ದೀರ್ಘ ಕಾಲದಿಂದ ಈಡೇರಿಸದಿರುವ ಆಗ್ರಹಗಳ ಮೇಲೆ ನಾಲ್ಕು ದಿನಗಳ "ಅಂಗನವಾಡಿ ಅಧಿಕಾರ್ ಮಹಾ ಪಡಾವ್" ಆರಂಭಿಸಿದ್ದಾರೆ. ಮೊದಲ ದಿನದಂದು 7000ಕ್ಕಿಂತಲೂ ಹೆಚ್ಚು ಮಂದಿ ಭಾಗವಹಿಸಿದರು. ಜುಲೈ 29ರ ವರೆಗೆ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ(ಎಐಎಫ್‌ಎಡಬ್ಲ್ಯುಹೆಚ್) ದ ನೇತೃತ್ವದಲ್ಲಿ ನಡೆಯುವ ಈ ಮಹಾಪಡಾವ್‌ನಲ್ಲಿ ದೇಶದ 18 ರಾಜ್ಯಗಳಿಂದ ಇನ್ನೂ ಹಲವಾರು ಅಂಗನವಾಡಿ ನೌಕರರು ಭಾಗವಹಿಸಲಿದ್ದಾರೆ ಎಂದು ಎಐಎಫ್‌ಎಡಬ್ಲ್ಯುಹೆಚ್ ಹೇಳಿದೆ. 'ನಮ್ಮ ಹಕ್ಕನ್ನು ಪಡೆದೇ ಏಳುತ್ತೇವೆ" ಎಂಬ ಘೋಷಣೆಯೊಂದಿಗೆ ಅವರು ಈ ನಾಲ್ಕು ದಿನಗಳ ಮಹಾ ಪಡಾವ್‌ನಲ್ಲಿ ಕುಳಿತುಕೊಂಡರು.

ದೇಶದ ಅತ್ಯುಚ್ಚ ತ್ರಿಪಕ್ಷೀಯ ಕಾರ್ಮಿಕ ಸಂಸ್ಥೆ ಐಎಲ್‌ಸಿ ಯ 45ನೇ ಮತ್ತು 46ನೇ ಅಧಿವೇಶನಗಳು ಶಿಫಾರಸು ಮಾಡಿರುವಂತೆ ಮತ್ತು ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಅಂಗನವಾಡಿ ನೌಕರರಿಗೆ ಕನಿಷ್ಟ ಕೂಲಿ, ಪೆನ್ಶನ್ ಮತ್ತು ಗ್ರಾಚ್ಯುಟಿಯನ್ನು ಜಾರಿಗೆತರಬೇಕೆಂಬುದು ಈ ಮಹಾಪಡಾವ್‌ನ ಮುಖ್ಯ ಬೇಡಿಕೆ. ಹರ್ಯಾಣ ಮತ್ತು ದಿಲ್ಲಿಯಲ್ಲಿ ಕೆಲಸದಿಂದ ತೆಗೆದು ಹಾಕಿರುವ ಸುಮಾರು 2000 ನೌಕರರನ್ನು ತಕ್ಷಣವೇ ವಾಪಾಸು ಸೇರಿಸಿಕೊಳ್ಳಬೇಕು, ನೌಕರರಿಗೆ ಕಿರುಕುಳ ನಿಲ್ಲಬೇಕು, ಮತ್ತು ಪೋಷಣ್ ಟ್ರಾಕರ್ ಆಪ್‌ನ ಹೆಸರಲ್ಲಿ ಫಲಾನುಭವಿಗಳ ಆಧಾರ್ ಜೋಡಣೆ ಕಡ್ಡಾಯವಾಗಿ ಆಗಬೇಕು ಎಂಬ ಆದೇಶ ಬೇಡ, ದೇಶಾದ್ಯಂತ ಒಂದೇ ರೀತಿಯ ಕೆಲಸದ ಷರತ್ತುಗಳಿರಬೇಕು ಹಾಗೂ ಅಂಗನವಾಡಿ ಕೇಂದ್ರಗಳ 'ದತ್ತಿ'ನ ಹೆಸರಲ್ಲಿ ಅವುಗಳ ಖಾಸಗೀಕರಣ ಅಥವ ಎನ್‌ಜಿಒಕರಣ ಮಾಡಬಾರದು ಎಂಬುದು ಈ ಮಹಾಪಡಾವ್‌ನ ಇತರ ಬೇಡಿಕೆಗಳು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಮಹಾಪಡಾವನ್ನು ಉದ್ಘಾಟಿಸಿದರು ಮತ್ತು ಸಿಐಟಿಯು ಅಧ್ಯಕ್ಷೆ ಹೇಮಲತಾ ರ‍್ಯಾಲಿಯನ್ನು ಉದ್ದೇಶಿಸಿ ಮಾತಾಡಿದರು. ಸಂಸತ್ತಿನ ಮುಂಗಾರು ಅಧಿವೇಶನದ ಸಂದರ್ಭದಲ್ಲಿ ಈ ಮಹಾಪಡಾವನ್ನು ಸಂಘಟಿಸಿದ್ದು ತಮ್ಮ ಬೇಡಿಕೆಗಳನ್ನು ಬೆಂಬಲಿಸುವಂತೆ ರಾಜ್ಯಗಳ ಅಂಗನವಾಡಿ ನೌಕರರ ಸಂಘಗಳು ತಂತಮ್ಮ ರಾಜ್ಯಗಳ ಸಂಸದರನ್ನು ಆಗ್ರಹಿಸಿವೆ. ಸಿಪಿಐ(ಎಂ) ಸಂಸತ್ ಸದಸ್ಯರಾದ ಇ.ಕರೀಂ ಮತ್ತು ವಿ.ಶಿವದಾಸನ್ ಮಹಾಪಡಾವ್ ಬಳಿ ಬಂದು ಸಂಸತ್ತಿನಲ್ಲಿ ಈ ಪ್ರಶ್ನೆಯನ್ನು ಎತ್ತುವುದಾಗಿ ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿ ಸ್ಮೃತಿ ಇರಾನಿಯವರನ್ನು ಭೇಟಿಯಾಗಲು ಸಂಘಟನೆಯ ಮುಖಂಡರು ಅವಕಾಶ ಕೇಳಿದ್ದಾರೆ..

ಈ ಏಪ್ರೀಲಿನಲ್ಲಿ ನೀಡಿದ 72 ಪುಟಗಳ ತೀರ್ಪಿನಲ್ಲಿ ಸುಪ್ರಿಂಕೋರ್ಟ್ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗ್ರಾಚ್ಯುಟಿ ಪಾವತಿ ಕಾಯ್ದೆ, 1972ರ ಅಡಿಯಲ್ಲಿ ಗ್ರಾಚ್ಯುಟಿಗೆ ಅರ್ಹರಾಗಿದ್ದಾರೆ ಎಂದು ಹೇಳಿತ್ತು. ಅಲ್ಲದೆ, ಇವರು ಬುಡಮಟ್ಟದಲ್ಲಿ ಹಲವಾರು ಮಹತ್ವದ ಸೇವೆಗಳನ್ನು ಒದಗಿಸುತ್ತಿದ್ದರೂ ಅತ್ಯಲ್ಪ ಪ್ರತಿಫಲ ಪಡೆಯುತ್ತಿದ್ದಾರೆ, ಎಲ್ಲರೂ ಮಹಿಳೆಯರೇ ಆಗಿರುವ ಈ ವಿಭಾಗದ ಶೋಚನೀಯ ಸ್ಥಿತಿಯನ್ನು ಗಂಭಿರವಾಗಿ ಗಮನಕ್ಕೆ ತಗೊಳ್ಳಬೇಕು ಎಂದೂ ಆ ತೀರ್ಪಿನಲ್ಲಿ ಹೇಳಲಾಗಿದೆ. ಮಹಾಪಡಾವ್‌ನಲ್ಲಿ ಭಾಗವಹಿಸಿದ ಅಖಿಲ ಭಾರತ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಹಿರಿಯ ಸುಪ್ರಿಂಕೋರ್ಟ್ ಅಡ್ವೊಕೇಟ್ ಪಿ.ವಿ.ಸುರೇಂದ್ರನಾಥ್ ಈ ತೀರ್ಪನ್ನು ವಿವರಿಸಿದರು.

ರೈತ ಮುಖಂಡರು ಮತ್ತು ಕಾರ್ಮಿಕ ಮುಖಂಡರು ಮಹಾಪಡಾವ್ ನ ಸ್ಥಳಕ್ಕೆ ಬಂದುತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. "ಅಂಗನವಾಡಿ ಕೇಂದ್ರಗಳು ಎಂದರೆ ಕಾರ್ಮಿಕರು ಮತ್ತುರೈತರ ಮಕ್ಕಳು ಸರಿಯಾದ ಪೋಷಣೆ ಮತ್ತು ಆರಂಭಿಕ ಬಾಲ್ಯದ ಆರೈಕೆಯನ್ನು ಪಡೆಯುವ ಜಾಗ. ಇದನ್ನು ಒದಗಿಸುವ ಐಸಿಡಿಎಸ್ ಯೋಜನೆಯನ್ನು ಮೋದಿ ಸರಕಾರ ತನ್ನ ಜನ-ವಿರೋಧಿ ಧೋರಣೆಗಳ ಭಾಗವಾಗಿ ದುರ್ಬಲಗೊಳಿಸುತ್ತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ" ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಹೇಳಿದ್ದಾರೆ.

ದೇಶದಲ್ಲಿ ಆರು ವರ್ಷಗಳಿಗಿಂತ ಕೆಳಗಿನ 8 ಕೋಟಿ ಮಕ್ಕಳಿಗೆ ಮತ್ತು 2 ಕೋಟಿ ಗರ್ಭಿಣಿಯರಿಗೆ ಪೋಷಣೆ, ಆರೋಗ್ಯ ಮತ್ತು ಬಾಲ್ಯ ಕಾಲದ ಆರೈಕೆಯ ಮೂಲ ಸೇವೆಗಳನ್ನು ಒದಗಿಸುತ್ತಿರುವ 27 ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರಿಗೆ ತಮ್ಮನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಟ ಕೂಲಿ, ಪೆನ್ಶನ್ ಮತ್ತು ಸಾಮಾಜಿಕ ಭದ್ರತೆಯನ್ನು ಪಡೆಯುವ ಹಕ್ಕು ಇದೆ ಎಂದು ಸಾರಿ ಹೇಳುತ್ತಿದ್ದಾರೆ. ದೇಶ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವನ್ನು, ಅಮೃತ ಮಹೋತ್ಸವ ಆಚರಿಸುತ್ತಿರುವಾಗ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನೆತ್ತಲು ನಾಲ್ಕು ದಿನಗಳ ಮಹಾಪಡಾವ್‌ನಲ್ಲಿ ಕೂತಿದ್ದಾರೆ ಎಂದು ಎಐಎಫ್‌ಎಡಬ್ಲ್ಯುಹೆಚ್ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು ಹೇಳಿದರು.

ಒಡ್ಡಿದ್ದು ಕಾನೂನು ಬಾಹಿರ ನಡೆಯಾಗಿತ್ತು. ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕಾದ ರಾಜ್ಯ ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದೇ ಏಕಪಕ್ಷೀಯವಾಗಿ ನಿಂತಿತು. ಇಂಥಹ ಗೊಡ್ಡು ಬೆದರಿಕೆಗೆ ಹೆದರದ ಜನತೆ ಎಂದಿನಂತೆ ಮಾಂಸ ಖರೀದಿಸಿ ಸೌಹಾರ್ದತೆಯನ್ನು ಮೆರೆದುದು ಕೋಮುವಾದಿಗಳಿಗೆ ಹಿನ್ನಡೆಯೇ ಆಯ್ತು.

ಇಂಥಹ ಕೃತ್ಯಗಳನ್ನು ಅಥವಾ ಯುವಜನರ ಆಯ್ಕೆ ಹಕ್ಕುಗಳ ಮೇಲೆ, ಅಲ್ಪಸಂಖ್ಯಾತರನ್ನು ಗುರಿ ಮಾಡಿ ಮಾಡುತ್ತಿರುವ ದಾಳಿಗಳನ್ನು ಖಂಡಿಸುವ ಬದಲು ರಾಜ್ಯದ ಮುಖ್ಯಮಂತ್ರಿಗಳೇ ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ ಎಂದು ಸಮರ್ಥನೆ ಮಾಡಿದ ಖಂಡನೀಯ ಘಟನೆಯೂ ಈ ರಾಜ್ಯದಲ್ಲಿ ನಡೆದಿದೆ.

ಮಹಿಳಾ ವಿರೋಧಿ ಪಠ್ಯಗಳು:

ಮಹಿಳಾ ಸಮಾನತೆಯನ್ನು ಸಾಧಿಸುವ ನೆಲೆಯಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿ ಪ್ರಾಥಮಿಕ ಹಂತದಿಂದಲೇ ಪಠ್ಯದಲ್ಲಿ ಲಿಂಗ ಸಮಾನತೆಯನ್ನು ಬೋಧಿಸಬೇಕೆನ್ನುವುದು ನಮ್ಮೆಲ್ಲರ ಹಲವು ವರ್ಷಗಳ ಬೇಡಿಕೆಯಾಗಿದೆ. ಅಂತಹ ಒಂದು ದೃಢ ಹೆಜ್ಜೆಯನ್ನಿಡುವ ಬದಲಿಗೆ ಕರ್ನಾಟಕ ಸರಕಾರವು ಶಿಕ್ಷಣ ದಲ್ಲಿ ಮಹಿಳೆಯರನ್ನು ಕೀಳಾಗಿ ಬಿಂಬಿಸುವ ಪಠ್ಯಗಳನ್ನು ಅಳವಡಿಸಿದೆ.

10 ನೇ ತರಗತಿಯ ಪಠ್ಯಪುಸ್ತಕವನ್ನು ಪರಿಷ್ಕರಿಸುವ ನೆಪದಲ್ಲಿ ಮಹಿಳಾ ವಿರೋಧಿ ಅಂಶಗಳನ್ನು ಸೇರಿಸಿರುವುದು ಪಾಳೇಗಾರಿ ಮನಸ್ಥಿತಿಯನ್ನು ಸಾಕ್ಷೀಕರಿಸಿದೆ. ಬನ್ನಂಜೆ ಗೋವಿಂದಾಚಾರ್ಯರು ಬರೆದ ಲೇಖನದಲ್ಲಿ 'ಹೆಣ್ಣನ್ನು ಸಂಪತ್ತಿಗೆ ಸಮೀಕರಿಸಿ ಸಿರಿ ಎಂಬ ಹೆಣ್ಣನ್ನ ಕಂಡು ಮರುಳಾಗದವರನ್ನ ನಾನು ಕಂಡಿಲ್ಲ. ಎಲ್ಲರೂ ಆಕೆಯತ್ತ ಆಕರ್ಷಿತರಾದವರೇ. ಎಲ್ಲರೂ ಆಕೆಯಿಂದ ಮೋಸ ಹೋಗುವವರೇ, ಯಾವುದೇ ಒಬ್ಬರನ್ನು ನಿರ್ವಂಚನೆಯಿಂದ ಪ್ರೇಮಿಸುವುದು ಆಕೆಯ ಜಾಯಮಾನಕ್ಕೆ ಸಲ್ಲ' ಎಂದು ಬರೆಯುವ ಮೂಲಕ ಮಕ್ಕಳ ಬಾಲ್ಯದಲ್ಲೇ ಹೆಣ್ಣನ್ನು ಕೀಳಾಗಿ ಬಿಂಬಿಸುವ ಮನುವಾದವನ್ನು ಪುಷ್ಟಿಕರಿಸಲಾಗಿದೆ. ಈ ಪಠ್ಯ ಕೈಬಿಡಬೇಕೆಂದು ಹಲವು ಪ್ರಗತಿಪರರು ಧ್ವನಿ ಎತ್ತಿದರಾದರೂ ಸರಕಾರ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಮಹಿಳಾ ಚಳುವಳಿಯಿಂದ ಬರಬೇಕಾದ ಗಟ್ಟಿ ಧ್ವನಿ ಬರಲಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಲೇ ಬೇಕು.

ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತು ಸರಕಾರದ ನಿರ್ಲಕ್ಷ್ಯ:

ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷಾ ವರದಿಯ ಪ್ರಕಾರ ಕರ್ನಾಟಕವು ಮಹಿಳೆಯರ ಪಾಲಿಗೆ ಅಸುರಕ್ಷತೆಯ ರಾಜ್ಯವಾಗಿದೆ. 44% ವಿವಾಹಿತ ಮಹಿಳೆಯರು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. 2015 ರಲ್ಲಿ 20.6% ಇದ್ದದ್ದು 2019-2020 ರಲ್ಲಿ 24% ಗೆ ಹೆಚ್ಚಾಗಿದೆ.

ಬಾಲ್ಯವಿವಾಹಗಳಲ್ಲೂ ನಮ್ಮ ರಾಜ್ಯ ಮೊದಲ ಸ್ಥಾನದಲ್ಲಿದೆ. ಕೋವಿಡ್ ಸಾಂಕ್ರಾಮಿಕತೆಯ ಸಂದರ್ಭದಲ್ಲಿ, ಶಾಲೆಗಳು ಇಲ್ಲದ ಸಂದರ್ಭದಲ್ಲಿ ಈ ಪ್ರಕರಣಗಳು ಹೆಚ್ಚಾಗಿವೆ 2020-21 ರಲ್ಲಿ ರಾಜ್ಯದಲ್ಲಿ 296 ಬಾಲ್ಯವಿವಾಹಗಳು ವರದಿಯಾಗಿವೆ. 2019-20 ರಲ್ಲಿ ಈ ಸಂಖ್ಯೆ 140 ಇತ್ತು. 2018-19 ರಲ್ಲಿ ರಾಜ್ಯದಲ್ಲಿ 119 ಬಾಲ್ಯವಿವಾಹ ಕೇಸುಗಳು ದಾಖಲಾಗಿದ್ದವು. ಬಾಲ್ಯವಿವಾಹ ತಡೆಗೆ ಅಗತ್ಯ ಸಮಗ್ರ ಕ್ರಮಗಳನ್ನು ಇಲ್ಲಿಯವರೆಗೂ ಘೋಷಿಸದಿರುವುದು ಸರ್ಕಾರದ ನಿರ್ಲಕ್ಷ್ಯವಾಗಿದೆ.

ಈ ಅವಧಿಯಲ್ಲಿ ಮರ್ಯಾದಾ ಹೆಸರಿನಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಮತ್ತು ಅವಳ ಆಯ್ಕೆಯ ಹಕ್ಕುಗಳ ಕೊಲೆಗಳಾಗಿವೆ. ಮಾಗಡಿ ತಾಲ್ಲೂಕಿನ ಕುದೂರು ಪ್ರಕರಣ, ಹುಣಸೂರು ಪ್ರಕರಣ, ಬೀದರ್ ಪ್ರಕರಣ, ಬೆಳಗಾಂ ಪ್ರಕರಣಗಳು ಆಯ್ಕೆಯ ಹಕ್ಕುಗಳ ಮೇಲಿನ ದಾಳಿಗಳಾಗಿವೆ.

ಅತ್ಯಾಚಾರದ ಆರೋಪಿ ರಾಘವೇಶ್ವರ ಭಾರತಿ ಪ್ರಕರಣದಲ್ಲೂ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಅತ್ಯಂತ ಖಂಡನಾರ್ಹ. ತಾಂತ್ರಿಕ ಕಾರಣವನ್ನು ನೀಡಿ ರಾಜ್ಯ ಉಚ್ಚ ನ್ಯಾಯಾಲಯವು ಆರೋಪಿಯನ್ನು ಆರೋಪ ಮುಕ್ತ ಮಾಡಿದೆ. ಅತ್ಯಾಚಾರದ ಸಂತ್ರಸ್ತೆ ಸ್ವತಃ ದೂರು ಕೊಟ್ಟ ಪ್ರಕರಣದಲ್ಲಿ ನ್ಯಾಯಾಲಯದ ನಡೆಯು ದಿಗ್ಭ್ರಮೆ ಮೂಡಿಸಿದ ಹೊತ್ತಿನಲ್ಲಿಯೇ, ಸರಕಾರ ತನ್ನದೇ ಇಲಾಖೆಯ ವೈಫಲ್ಯವನ್ನು ತರಾಟೆಗೆ ತೆಗೆದುಕೊಳ್ಳದೇ, ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನೂ ಸಲ್ಲಿಸದೇ ತಾನು ಸತ್ಯ ಹೊರಗೆಳೆಯುವಲ್ಲಿ ಇಲ್ಲ ಎಂಬುದನ್ನು ಸಾಬೀತು ಪಡಿಸಿದೆ.

ಅನಿಯಂತ್ರಿತ ಅತ್ಯಾಚಾರಗಳು

ಪ್ರತೀ ತಿಂಗಳು ಸರಾಸರಿ 40 ರಿಂದ 45 ಅತ್ಯಾಚಾರ ಮತ್ತು ಸಾಮೂಹಿಕ ಅತ್ಯಾಚಾರ ಪ್ರಕರಣಗಳು ಕರ್ನಾಟಕದಲ್ಲಿ ಘಟಿಸುತ್ತಿರುವುದು ಮಹಿಳೆಯರ ಅಸುರಕ್ಷತೆಯ ಸ್ಥಿತಿಯನ್ನು ಹೇಳುತ್ತವೆ. ಎನ್.ಸಿ.ಆರ್.ಬಿ. ಪ್ರಕಾರ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ದೇಶದ 53 ನಗರಗಳ ಪೈಕಿ ಬೆಂಗಳೂರು 3ನೇ ಸ್ಥಾನದಲ್ಲಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ತೆಗೆದುಕೊಂಡರೆ ಕರ್ನಾಟಕ 5 ನೇ ಸ್ಥಾನದಲ್ಲಿದೆ.

ಹೆಚ್ಚಿದ ಕೌಟುಂಬಿಕ ದೌರ್ಜನ್ಯಗಳು:

ಕೋವಿಡ್ ಸಾಂಕ್ರಾಮಿಕತೆಯ ಅಯೋಜಿತ ಲಾಕ್ ಡೌನ್ ಅವಧಿಯಲ್ಲಿ ಮಹಿಳೆಯರು ಅತೀವ ಮಾನಸಿಕ ಮತ್ತು ದೈಹಿಕ ದೌರ್ಜನ್ಯಗಳಿಗೆ ಒಳಗಾಗಿದ್ದಾರೆ. ಹೊರಗೆ ಹೋಗಿ ರಕ್ಷಣೆ ಪಡೆಯಲು ಸಾರಿಗೆ ವ್ಯವಸ್ಥೆ ಇಲ್ಲ, ಕೈಯ್ಯಲ್ಲಿ ಕಾಸಿಲ್ಲ, ರಕ್ಷಣೆಗೆ ಯಾವುದೇ ಪೋಲೀಸ್ ಕಚೇರಿಗೆ ಹೋದರೂ ಸೀಲ್ ಡೌನ್, ಸಿಬ್ಬಂದಿಯ ಕೊರತೆ, ಕೋವಿಡ್ ಭಯದಲ್ಲಿ ಆರೋಪಿಗಳನ್ನು ಬಂಧಿಸದೇ ಇದ್ದದು ಸೇರಿ, ಮಹಿಳೆಯರಿಗೆ ಪರ್ಯಾಯ ಪರಿಹಾರಗಳಿಲ್ಲದೆ ಬಸವಳಿದಿದ್ದಾರೆ. ಕೋವಿಡ್ ಒಂದು ಸಾಂಕ್ರಾಮಿಕ ರೋಗವಾಗಿದ್ದರೆ ಕೌಟುಂಬಿಕ ದೌರ್ಜನ್ಯ ಸಾಂಕ್ರಾಮಿಕದ ನೆರಳಾಗಿ ಮಹಿಳೆಯರನ್ನು ಕಾಡಿದೆ ಎಂದು ವಿಶ್ವಸಂಸ್ಥೆ ಗುರುತಿಸಿದೆ. ಅಂಥಹ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲು ಮುಂದಾಗದ ಸರಕಾರ ದೌರ್ಜನ್ಯಗಳಿಗೆ ಕಣ್ಣು ಮುಚ್ಚಿ ಕುಳಿತಿತ್ತು. ಇದು ರಾಜ್ಯ ಮಹಿಳಾ ಆಯೋಗ ಮತ್ತು ರಾಜ್ಯ ಬಿ.ಜೆ.ಪಿ ಸರ್ಕಾರದ ವೈಫಲ್ಯವಾಗಿದೆ.

ಹೊಣೆಗಾರಿಕೆ:

ಒಂದು ಸಮಾಜ ಆರೋಗ್ಯ ಪೂರ್ಣವಾಗಿರಲು ಅಗತ್ಯವಾದ ವಾತಾವರಣ ನಿರ್ಮಾಣ ಮಾಡುವುದು ಸರಕಾರಗಳ ಆದ್ಯ ಕರ್ತವ್ಯ. ಆದರೆ ಅಂಥಹ ಪರಿಸ್ಥಿತಿ ಇಲ್ಲವೆಂದಾಗ ಅದಕ್ಕಾಗಿ ಒತ್ತಾಯ ಮಾಡುವುದು ಮತ್ತು ಅದರತ್ತ ಜನರ ಗಮನ ಸೆಳೆಯುವುದು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಕೆಲಸ ಮಾಡುವ ಸಂಘಟನೆಗಳು,ಚಳುವಳಿಗಳ ಜವಾಬ್ದಾರಿಯಾಗುತ್ತದೆ. ಜನವಾದಿ ಕಳೆದ ನಲವತ್ತು ವರ್ಷಗಳಲ್ಲಿ ಪಡೆದ ಅನುಭವ ಮತ್ತು ಸ್ಪಷ್ಟತೆಯ ಆಧಾರದಲ್ಲಿ ಮುಂದಿನ ದಿನಗಳಲ್ಲಿ ನಮ್ಮ ಘೋಷಣೆಯಾದ ಪ್ರಜಾಪ್ರಭುತ್ವ, ಸಮಾನತೆ ಮಹಿಳಾ ವಿಮೋಚನೆಯ ಗುರಿ ಮುಟ್ಟಲು ಮುನ್ನಡೆಯಬೇಕಾಗಿದೆ.

ಕೃಪೆ: ಜನವಾದಿ

ಬಿಎಸ್‌ಎನ್‌ಎಲ್ ಗೆ ಬೃಹತ್ 'ಪುನರುಜ್ಜೀವನ' ಪ್ಯಾಕೇಜ್ ! –ನಿಜವೇ? ಅಥವ ಇನ್ನೊಂದು ಸತ್ಯೋತ್ತರ 'ಜುಮ್ಲಾ'ವೇ?

ಅಮೃತ ಕಾಲವಿದು!

ಬಿಎಸ್‌ಎನ್‌ಎಲ್ ಗೆ 1.64 ಲಕ್ಷ ಕೋಟಿ ರೂ.ಗಳ ಒಂದು ಬೃಹತ್ 'ಪುನರುಜ್ಜೀವನ' ಪ್ಯಾಕೇಜನ್ನು ಕೇಂದ್ರ ಸಂಪುಟ ಮಂಜೂರು ಮಾಡಿರುವುದಾಗಿ ದೂರಸಂಪರ್ಕ ಮಂತ್ರಿಗಳು ಹೇಳಿದ್ದಾರೆ. 2019ರಲ್ಲಿ ಕೂಡ ಕೇಂದ್ರ ಸಂಪುಟ ರೂ.70,000 ಕೋಟಿ ಪ್ಯಾಕೇಜನ್ನು ಮಂಜೂರು ಮಾಡಿತ್ತು. ಅದರಿಂದಾಗಿ ಅದು ಚೇತರಿಸಿಕೊಂಡು ಒಂದು ಸ್ಥಿರತೆ ಹೊಂದಿರುವ ಕಂಪನಿಯಾಗಿದೆ ಎಂಬ ವಿಶ್ವಾಸ ಮೂಡಿದೆ. ಈ ಎರಡನೇ ಪ್ಯಾಕೇಜಿನಿಂದ ಅದು ಸಮರ್ಥ ಕಂಪನಿಯಾಗುತ್ತದೆ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಇದು ನಿಜವೇ? ಅಥವ ಸತ್ಯೋತ್ತರ ಕಾಲದ ಇನ್ನೊಂದು ಜುಮ್ಲಾವೇ? ಕೇಂದ್ರ ಸರಕಾರ ನಿಜವಾಗಿಯೂ ಬಿಎಸ್‌ಎನ್‌ಎಲ್ ಒಂದು ಸಮರ್ಥ ಕಂಪನಿಯಾಗ ಬಯಸುತ್ತಿದೆಯೇ? ಈ ಸಂದೇಹ ಮೂಡಲು ಒಂದು ಪ್ರಮುಖ ಕಾರಣ ಏರ್‌ಟೆಲ್, ರಿಲಯನ್ಸ್ ಜಿಯೊ, ವೊಡಾಫೋನ್ ಇಂಡಿಯ ಮುಂತಾದ ಖಾಸಗಿ ಕಂಪನಿಗಳು 5ಜಿ ಬಗ್ಗೆ ಮಾತಾಡುತ್ತಿರುವವಾಗ ಈ 'ಎರಡನೇ ಪುನರುಜ್ಜೀವನ' ಪ್ಯಾಕೇಜ್ ಕೂಡ 2019ರ ಮೊದಲ ಪ್ಯಾಕೇಜಿನಲ್ಲಿಯೂ ಹೇಳಿದ್ದ 4ಜಿಯ ಬಗ್ಗೆಯೇ ಮಾತಾಡುತ್ತಿದೆ. 5ಜಿಯ ಪ್ರಸ್ತಾಪವೂ ಇಲ್ಲ.

ವಾಸ್ತವವಾಗಿ ಸರಕಾರ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನಿಸುತ್ತಿದೆ, ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘ (ಬಿಎಸ್‌ಎನ್‌ಎಲ್‌ಯು) ಜುಲೈ 28ರಂದು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ. ಸರಕಾರ ಇಂತಹ ತಪ್ಪು ಸಂದೇಶವನ್ನು ಏಕೆ ಕೊಡುತ್ತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ ಎಂದೂ ಅದು ಹೇಳಿದೆ.

4ಜಿ ಒದಗಿಸಲು 1.13ಲಕ್ಷ ಕೋಟಿ ರೂ.?

23 ಅಕ್ಟೋಬರ್‌ನ ಮೊದಲ ಪ್ಯಾಕೇಜಿನಲ್ಲಿ ಬಿಎಸ್‌ಎನ್‌ಎಲ್‌ಗೆ 4ಜಿ ತರಂಗಾಂತರ ಕೊಡಲು ಸರಕಾರ ರೂ. 23,814 ಕೋಟಿ ಖರ್ಚು ಮಾಡಲಿದೆ ಎಂದು ಹೇಳಲಾಗಿತ್ತು.

ನಂತರ ಫೆಬ್ರುವರಿ 2022ರ ಬಜೆಟ್ ಭಾಷಣದಲ್ಲಿ ಬಿಎಸ್‌ಎನ್‌ಎಲ್‌ನ ತಂತ್ರಜಾನವನ್ನು ಮೇಲ್ದರ್ಜೆಗೇರಿಸಲು ರೂ.44,000 ಕೋಟಿ ವ್ಯಯ ಮಾಡಲಾಗುವುದು ಎಂದು ಹೇಳಲಾಯಿತು.

ಈಗ ಎರಡನೇ ಪ್ಯಾಕೇಜಿನಲ್ಲಿ 4ಜಿ ಒದಗಿಸಲು ರೂ. 4,4,993 ಕೋಟಿ ಕೊಡಲಾಗುವುದು ಎನ್ನಲಾಗಿದೆ.

ಅಂದರೆ ಒಟ್ಟಾಗಿ ರೂ.1,12,807 ಕೋಟಿ ರೂ.ಗಳಷ್ಟು ಬೃಹತ್ ಮೊತ್ತವನ್ನು ಬಿಎಸ್‌ಎನ್‌ಎಲ್‌ಗೆ 4ಜಿ ಕೊಡಿಸಲು ಖರ್ಚು ಮಾಡಲಾಗುತ್ತಿದೆ ಎಂಬ ಸಂದೇಶ ಕೊಡಲಾಗಿದೆ. ಸಹಜವಾಗಿಯೇ ಬಿಎಸ್‌ಎನ್‌ಎಲ್‌ನ ಪುನರುಜ್ಜೀವನಕ್ಕಾಗಿ ಸರಕಾರೀ ಖಜಾನೆಯಿಂದ ತೆರಿಗೆದಾರರ ಅಪಾರ ಹಣದ ದುಂದುವೆಚ್ಚ ಏಕೆ ಎಂದು ಜನರಲ್ಲಿ ಪ್ರಶ್ನೆ ಏಳುವಂತಾಗಿದೆ. **ಇದು ತಪ್ಪು ಸಂದೇಶ ಎನ್ನುತ್ತದೆ ಬಿಎಸ್‌ಎನ್‌ಎಲ್ ನೌಕರರ ಸಂಘ.**

ವಾಸ್ತವವಾಗಿ ಸರಕಾರ ತೆರಿಗೆದಾರರ ಹಣದಲ್ಲಿ ಒಂದು ಪೈಸೆಯನ್ನೂ ಬಿಎಸ್‌ಎನ್‌ಎಲ್‌ಗೆ 4ಜಿ ಗಾಗಿ ಖರ್ಚು ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ ಎಂದು ಅದು ಹೇಳಿದೆ.

ಮೊದಲನೆ 'ಪುನರುಜ್ಜೀವನ' ಪ್ಯಾಕೇಜ್ ಇನ್ನೂ ಕೇವಲ ಕಾಗದದಲ್ಲೇ ಉಳಿದಿದೆ. ಈ ಪ್ಯಾಕೇಜಿನಲ್ಲಿದ್ದ ಒಂದೇ ಒಂದು ಅಂಶವನ್ನು ಸರಕಾರ ಜಾರಿಗೆ ತಂದಿದೆ. ಅದೆಂದರೆ, 80,000 ನೌಕರರನ್ನು ವಿಆರ್‌ಎಸ್(ಸ್ವಯಂ ನಿವೃತ್ತಿ) ಮೂಲಕ ಹೊರ ಕಳಿಸಿದ್ದು! 4ಜಿ ಒದಗಿಸುವ ಮಾತು ಕಾಗದದಲ್ಲೇ ಉಳಿದಿದೆ. ಏಕೆಂದರೆ ಸರಕಾರವೇ ಬಿಎಸ್‌ಎನ್‌ಎಲ್ 4ಜಿ ತರಂಗಾಂತರವನ್ನು ಬಳಸಲಿಕ್ಕೇ ಬಿಟ್ಟಿಲ್ಲ!

ಬಿಎಸ್‌ಎನ್‌ಎಲ್ 4ಜಿ ಯನ್ನು ಆರಂಭಿಸದಂತೆ ಸರಕಾರವೇ ಎರಡು ಅಡ್ಡಗೋಡೆಗಳನ್ನು ನಿರ್ಮಿಸಿತು ಎನ್ನುತ್ತದೆ ನೌಕರರ ಸಂಘ.

ಮೊದಲನೆಯ ತಡೆ ಎಂದರೆ ಬಿಎಸ್‌ಎನ್‌ಎಲ್ ಬಳಿ ಇದ್ದ ಸಾಧನ–ಉಪಕರಣಗಳನ್ನು ಮೇಲ್ದರ್ಜೆಗೇರಿಸಲು ಅನುಮತಿಯನ್ನು ನಿರಾಕರಿಸಿದ್ದು. ಬಿಎಸ್‌ಎನ್‌ಎಲ್ ಬಳಿ ಸುಮಾರು 50,000 3ಜಿ ಸಾಧನಗಳು ಇದ್ದವು, ಅವನ್ನು ತಂತ್ರಾಂಶವನ್ನು ಮೇಲ್ದರ್ಜೆಗೇರಿಸುವ ಮೂಲಕ 4ಜಿ ಸಾಧನಗಳಾಗಿ ಪರಿವರ್ತಿಸಲು ಸಾಧ್ಯವಿತ್ತು. ಅದಕ್ಕೆ ಅನುಮತಿ ಕೊಡಲಿಲ್ಲ. ಈ ಅನುಮತಿಯನ್ನು ಕೊಟ್ಟಿದ್ದರೆ, ಎರಡು ವರ್ಷಗಳ ಹಿಂದೆಯೇ ಬಿಎಸ್‌ಎನ್‌ಎಲ್ 4ಜಿ ಸೇವೆಗಳನ್ನು ದೇಶಾದ್ಯಂತ ಒದಗಿಸಲು ಸಾಧ್ಯವಿತ್ತಂತೆ.

ಎರಡನೇ ತಡೆ ಎಂದರೆ, 4ಜಿ ಸಾಧನಗಳನ್ನು ಜಾಗತಿಕ ಟೆಂಡರ್ ಮೂಲಕ ಪಡೆಯಲು ಅನುಮತಿ ನಿರಾಕರಿಸಿದ್ದು. ಏರ್‌ಟೆಲ್, ವೊಡಾಫೋನ್, ಜಿಯೋ ಮೊದಲಾದವುಗಳು ತಮಗೆ ಬೇಕಾದ ಸಾಧನಗಳನ್ನು ಜಾಗತಿಕ ಮಾರುಕಟ್ಟೆಯಿಂದ ಪಡೆಯಲು ಅವಕಾಶ ಕೊಡಲಾಗಿತ್ತು. ಆದರೆ ಬಿಎಸ್‌ಎನ್‌ಎಲ್ ಮಾರ್ಚ್ 2020ರಲ್ಲಿ 50,000 ಸಾಧನಗಳನ್ನು ಪಡೆಯಲು ಜಾಗತಿಕ ಟೆಂಡರ್ ಪ್ರಕಟಿಸಿದಾಗ, ಅದನ್ನು ರದ್ದು ಮಾಡಲು ಹೇಳಿ, ಕೇವಲ ಭಾರತೀಯ ಉಪಕರಣ ತಯಾರಿಕರಿಂದ ಮಾತ್ರ ಖರೀದಿಸಬೇಕು ಎಂದು ಸರಕಾರ ನಿರ್ದೇಶನ ಕೊಟ್ಟಿತು. ಇದಕ್ಕೆ ಟಿಸಿಎಸ್ ನ್ನು 4ಜಿ ಉಪಕರಣಗಳ ಪೂರೈಕೆದಾರ ಎಂದು ಗುರುತಿಸಲಾಯಿತು. ಆದರೆ ಟಿಸಿಎಸ್ ಇದುವರೆಗೂ ತನಗೆ ಈ ಉಪಕರಣಗಳನ್ನು ಒದಗಿಸುವ ಸಾಮರ್ಥ್ಯ ಇದೆ ಎಂದು ಸಾಬೀತು ಪಡಿಸಲಾಗಿಲ್ಲ.

ಈಗಲೂ ಖಾಸಗಿ ಟೆಲಿಕಾಂ ಕಂಪನಿಗಳಿಗೆ 5ಜಿ ಉಪಕರಣಗಳನ್ನು ನೋಕಿಯ, ಎರಿಕ್ಸನ್ ಮುಂತಾದವರಿಂದ ಖರೀದಿಸಲು ಅವಕಾಶ ಇದೆ, ಆದರೆ ಬಿಎಸ್‌ಎನ್‌ಎಲ್‌ಗೆ ಮಾತ್ರಅದನ್ನು ನಿರಾಕರಿಸಲಾಗಿದೆ. ಇದನ್ನು **ಬಿಎಸ್‌ಎನ್‌ಎಲ್ 4ಜಿ ಸೇವೆಗಳನ್ನು ಆರಂಭಿಸದಂತೆ ತಡೆಯುವುದಕ್ಕಾಗಿಯೇ ಉದ್ದೇಶಪೂರ್ವಕವಾಗಿಯೇ ಮಾಡಲಾಗಿದೆ ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘ ಹೇಳಿದೆ.**

ದೂರಸಂಪರ್ಕ ಕ್ಷೇತ್ರದಲ್ಲಿ ತಂತ್ರಜ್ಞಾನ ಶೀಘ್ರ ಗತಿಯಲ್ಲಿ ಮೇಲ್ದರ್ಜೆಗೇರುತ್ತದೆ. ಎಲ್ಲ ಖಾಸಗಿ ಕಂಪನಿಗಳು 5ಜಿ ಗೆ ಸಿದ್ಧವಾಗುತ್ತಿವೆ. ಆದರೆ ಈ ಎರಡನೇ ಪ್ಯಾಕೇಜಿನಲ್ಲಿ 5ಜಿ ಯ ಪ್ರಸ್ತಾಪವೂ ಇಲ್ಲ ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘ ಖೇದ ವ್ಯಕ್ತಪಡಿಸಿದೆ.

ಬಂಡವಾಳ ವೆಚ್ಚದ ವಿಷಯ.

ಈ 'ಪುನರುಜ್ಜೀವನ' ಪ್ಯಾಕೇಜಿನಲ್ಲಿ ಮುಂದಿನ ನಾಲ್ಕು ವರ್ಷ, ಬಿಎಸ್‌ಎನ್‌ಎಲ್‌ಗೆ ಸರಕಾರ ರೂ.22,471 ಕೋಟಿ ರೂ. ಕೊಡುತ್ತದೆ ಎನ್ನಲಾಗಿದೆ. ಆದರೆ ನಿಜಸಂಗತಿಯೆಂದರೆ, ಇದು ಸರಕಾರದ ಖಜಾನೆಯಿಂದ, ತೆರಿಗೆದಾರರ ಹಣದಿಂದ ಬರಬೇಕಾಗಿಲ್ಲ. ಏಕೆಂದರೆ ಸರಕಾರವೇ ಬಿಎಸ್‌ಎನ್‌ಎಲ್‌ಗೆ ವಿವಿಧ ಬಾಬ್ತುಗಳಲ್ಲಿ ಒಟ್ಟು ರೂ.38,540 ಕೋಟಿ ರೂ. ಕೊಡಬೇಕಾಗಿದೆ. ಇಷ್ಟೇ ಅಲ್ಲ, ಸರಕಾರ 'ಪೆನ್ಶನ್ ವಂತಿಗೆ'ಯೆಂದು ಹಣ ಸುಲಿಯುತ್ತಿದೆ, ಇದೂ ಬಿಎಸ್‌ಎನ್‌ಎಲ್‌ನ ಹಣಕಾಸು ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘ ಹೇಳಿದೆ.

'ಸಮರ್ಥತೆಯ ಅಂತರ ತುಂಬಲು ನಿಧಿ'

ಬಿಎಸ್‌ಎನ್‌ಎಲ್‌ನ್ನು ಸಮರ್ಥಗೊಳಿಸಲು ಬೇಕಾಗುವ ನಿಧಿಯಲ್ಲಿನ ಕೊರತೆಯನ್ನು ತುಂಬಲು ಬಿಎಸ್‌ಎನ್‌ಎಲ್‌ಗೆ ರೂ. 13,789 ಕೋಟಿ ರೂ.ಗಳನ್ನು "Viability Gap Funding" ಎಂದು ಈ ಪ್ಯಾಕೇಜಿನಲ್ಲಿ ಕೊಡಲಾಗುವುದು ಎನ್ನಲಾಗಿದೆ. ಏನಿದು Viability Gap Funding? ಬಿಎಸ್‌ಎನ್‌ಎಲ್ ಭಾರತ ಸರಕಾರದ ಪರವಾಗಿ ದೇಶದ ಹಿಂದುಳಿದ ಮತ್ತು ದೂರ–ದೂರದ ಸ್ಥಳಗಳಲ್ಲಿ ದೂರಸಂಪರ್ಕ ಸೇವೆಗಳನ್ನು ಒದಗಿಸುತ್ತದೆ. ಇವು ವಾಣಿಜ್ಯ ದೃಷ್ಟಿಯಿಂದ ನಷ್ಟದ ಬಾಬತ್ತು. ಆದ್ದರಿಂದ ಖಾಸಗಿ ಕಂಪನಿಗಳು ಅದರತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ಬಿಎಸ್‌ಎನ್‌ಎಲ್‌ಗೆ ಈ ಮೂಲಕ ಆಗುವ ನಷ್ಟವನ್ನು ತುಂಬಿ ಕೊಡುವುದಾಗಿ ಸರಕಾರ ಈ ಮೊದಲೇ ಹೇಳಿದೆ. 2015ರಿಂದ 2019ರ ವರೆಗಿನ ಅವಧಿಯಲ್ಲಿ ಈ ಬಾಬ್ತಿನಲ್ಲಿ ಬಿಎಸ್‌ಎನ್‌ಎಲ್‌ಗೆ ರೂ.13,789 ಕೊಡಬೇಕಾಗಿತ್ತು. ಅದನ್ನು ಇನ್ನೂ ಕೊಟ್ಟಿಲ್ಲ. ಈಗ ಅದನ್ನೇ ಪುನರುಜ್ಜೀವನ ಪ್ಯಾಕೇಜಿನ ಭಾಗ ಎಂದು ಪ್ರಕಟಿಸಲಾಗಿದೆ! ಇದು ಸರಿಯಲ್ಲ ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘ ಹೇಳಿದೆ.

ಸಾಲ ಎತ್ತಲು ಸರಕಾರದ ಗ್ಯಾರಂಟಿ

ಈ ಪುನರುಜ್ಜೀವನ ಪ್ಯಾಕೇಜಿನ ಒಂದು ಸ್ವಾಗತಾರ್ಹ ಅಂಶ ಎಂದರೆ, ಬಿಎಸ್‌ಎನ್‌ಎಲ್ ಮಾರುಕಟ್ಟೆಯಿಂದ ಬಾಂಡುಗಳ ಮೂಲಕ ರೂ. 40,399 ಕೋಟಿ ಸಾಲ ಎತ್ತಲು 'ಸಾರ್ವಭೌಮ ಖಾತ್ರಿ' ಅಂದರೆ ಸರಕಾರ ಗ್ಯಾರಂಟಿ ಕೊಡುತ್ತದೆ. ಇಲ್ಲಿಯೂ ಗಮನಿಸಬೇಕಾದ ಸಂಗತಿಯೆಂದರೆ ಇದೂ ಕೂಡ ಸರಕಾರೀ ಖಜಾನೆಯಿಂದ, ತೆರಿಗೆದಾರರ ಹಣದಿಂದ ಬರುತ್ತಿಲ್ಲ, ಬಿಎಸ್‌ಎನ್‌ಎಲ್ ತನ್ನ ಆದಾಯದ ಮೂಲಕವೇ ಇದನ್ನು ತೀರಿಸಬೇಕು ಎಂಬ ಸಂಗತಿಯತ್ತ ನೌಕರರ ಸಂಘ ಗಮನ ಸೆಳೆದಿದೆ.

ಒಟ್ಟಿನಲ್ಲಿ, ಬಿಎಸ್‌ಎನ್‌ಎಲ್ ನೌಕರರ ಸಂಘ ಕೊಟ್ಟಿರುವ ವಿವರಗಳಿಂದ ತಿಳಿದುಬರುವ ಸಂಗತಿಯೆಂದರೆ ಈ 1.64 ಲಕ್ಷ ಕೋಟಿ ರೂ.ಗಳಲ್ಲಿ 4ಜಿಗೆ ಈ ಸರಕಾರ ಒಂದು ಪೈಸೆಯನ್ನೂ ಖರ್ಚು ಮಾಡುವುದಿಲ್ಲ, ಉಳಿದ ಮೊತ್ತದಲ್ಲಿಯೂ ಒಂದು ಪೈಸೆಯೂ ಸರಕಾರೀ ಖಜಾನೆಯಿಂದ ಬರುವುದಿಲ್ಲ!



ವ್ಯಂಗ್ಯಚಿತ್ರ: ಮಿಕ ಅಜೀಜ್

17 ವರ್ಷಗಳಲ್ಲಿ 5422 ಕಪ್ಪುಹಣವನ್ನು 'ಸ್ವಚ್ಛ'ಗೊಳಸುವ ಪ್ರಕರಣಗಳು –ಶಿಕ್ಷೆಯಾದದ್ದು 23 ಪ್ರಕರಣಗಳಲ್ಲಿ: ಸಂಸತ್ತಿನಲ್ಲಿ ಸರಕಾರದ ಹೇಳಿಕೆ

ಜುಲೈ 25 ರಂದು ಸಂಸತ್ತಿನಲ್ಲಿ ಜೆಡಿ(ಯು) ಸಂಸದ್ ಸದಸ್ಯರ ಪ್ರಶ್ನೆಗೆ ಕೇಂದ್ರ ಹಣಕಾಸು ಮಂತ್ರಾಲಯ ಸಲ್ಲಿಸಿರುವ ಉತ್ತರದ ಪ್ರಕಾರ ಅಕ್ರಮ ಹಣವನ್ನು ಸಕ್ರಮಗೊಳಿಸುವುದನ್ನು ತಡೆಯುವ ಕಾನೂನಿನ(ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) 2005ರಿಂದ ಮಾರ್ಚ್ 31, 2022ರ ವರೆಗೆ ದಾಖಲುಗೊಳಿಸಿರುವ ಪ್ರಕರಣಗಳ ಸಂಖ್ಯೆ 5422. ಹಣಕಾಸು ರಾಜ್ಯಮಂತ್ರಿಗಳು ಸಲ್ಲಿಸಿರುವ ಪಿಎಂಎಲ್‌ಎ ಪ್ರಕರಣಗಳ ಮಾಹಿತಿ ಹೀಗಿದೆ:

ವರ್ಷ	ಕೇಸುಗಳು	ವರ್ಷ	ಕೇಸುಗಳು
2012–13	221	2017–18	148
2013–14	209	2018–19	195
2014–15	178	2019–20	562
2015–16	111	2020–21	981
2016–17	200	2021–22	1180

ಈ ಮಾಹಿತಿಯ ಪ್ರಕಾರ, ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ ಸರಕಾರದ ಆಳ್ವಿಕೆಯಲ್ಲಿ ಕಳೆದ 8 ವರ್ಷಗಳಲ್ಲಿ ದಾಖಲು ಮಾಡಿದ ಪ್ರಕರಣಗಳ ಸಂಖ್ಯೆ 3535, ಅಂದರೆ ಸುಮಾರು ಮೂರನೇ ಎರಡರಷ್ಟು. ಅದರಲ್ಲೂ ಎರಡನೇ ಮೋದಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ಇದು ತೀವ್ರವಾಗಿ ಹೆಚ್ಚಿದೆ, ಕಳೆದ ಮೂರು ವರ್ಷಗಳಲ್ಲಿ ಇ.ಡಿ. ದಾಖಲಿಸಿದ ಇಂತಹ ಪ್ರಕರಣಗಳ ಸಂಖ್ಯೆಯೇ 2723, ಅಂದರೆ 50% ದಷ್ಟು.

ಕಳೆದ 17 ವರ್ಷಗಳಲ್ಲಿ ಈ ಕಾಯ್ದೆಯ ಅಡಿಯಲ್ಲಿ ಶಿಕ್ಷೆಯಾದದ್ದು 23 ವ್ಯಕ್ತಿಗಳಿಗೆ ಎಂದೂ ಮಂತ್ರಿಗಳು ಸಂಸತ್ತಿಗೆ ಕೊಟ್ಟಿರುವ ಮಾಹಿತಿಗಳು ಹೇಳುತ್ತವೆ, ಅಂದರೆ 0.5% ಕ್ಕಿಂತಲೂ ಕಡಿಮೆ!

ಇದು ಜಾರಿ ನಿರ್ದೇಶನಾಲಯದ ಅಸಾಮರ್ಥ್ಯಕ್ಕಿಂತ ಹೆಚ್ಚಾಗಿ, ಅದು ದಾಳಿ ಇತ್ಯಾದಿ ಕಾರ್ಯಾಚರಣೆಗಳನ್ನು ನಡೆಸುವುದರ ಉದ್ದೇಶ ಕಪ್ಪು ಹಣವನ್ನು ಬಿಳಿ ಮಾಡಿಸುವುದನ್ನು ಪತ್ತೆ ಹಚ್ಚಿ ಶಿಕ್ಷಿಸುವುದಲ್ಲ ಎಂಬ ಸಂಗತಿಯತ್ತ ಬೊಟ್ಟುಮಾಡುತ್ತದೆ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಮೋದಿ ಸರಕಾರ ಇ.ಡಿ. ಮುಂತಾದ ಸರಕಾರೀ ಏಜೆನ್ಸಿಗಳನ್ನು ರಾಜಕೀಯ ವಿರೋಧಿಗಳ ಮೇಲೆ ಗುರಿಯಿಡಲು, ಅವರಿಗೆ ಕಿರುಕುಳ ಕೊಡಲು ಮತ್ತು ಅವರು ತಮಗೆ ಮಣಿಯುವಂತೆ ಮಾಡಲು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬುದನ್ನು ಇದು ದೃಢಪಡಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.



ವ್ಯಂಗ್ಯಚಿತ್ರ: ರಾಜೇಂದ್ರ ದೋಡಪ್ಕರ್



ಜಿಎಸ್‌ಟಿ ದರ ಏರಿಕೆಗಳೂ–ಹಣಕಾಸು ಸಚಿವರ ಟ್ವೀಟ್‌ಗಳೂ

ಆಹಾರ ವಸ್ತುಗಳ ಮೇಲೂ ಜಿಎಸ್‌ಟಿ ಹೇರುವ ಕ್ರಮಕ್ಕೆ ಸಾರ್ವತ್ರಿಕ ಟೀಕೆಗಳು ಬಂದಾಗ ಕೇಂದ್ರ ಹಣಕಾಸು ಸಚಿವರು ಅದನ್ನು ಸಮರ್ಥಿಸಿಕೊಳ್ಳು ಹಲವು ಟ್ವೀಟ್‌ಗಳನ್ನು ಮಾಡಿದ್ದಾರೆ. ಇವುಗಳ ಸತ್ಯಾಸತ್ಯತೆಯನ್ನು ಮತ್ತು ನಿಜ ಕಾರಣ–ಪರಿಣಾಮಗಳನ್ನು ಈ ಲೇಖನ ಎಳೆ–ಎಳೆಯಾಗಿ ವಿಶ್ಲೇಷಿಸುತ್ತದೆ. ಒಟ್ಟಾರೆಯಾಗಿ ಕಾರ್ಪೊರೇಟ್‌ಗಳು ಮತ್ತು ಕೇಂದ್ರ ಸರ್ಕಾರ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಕ್ರಮವನ್ನು ಅವರು ವಿರೋಧಿಸುತ್ತಾರೆ. ಬದಲಿಗೆ, ತೆರಿಗೆಯ ಹೊರೆಯನ್ನು ಅವರು ಜನಸಾಮಾನ್ಯರು ಬಳಸುವ ವಸ್ತುಗಳ ಮೇಲೆ ವರ್ಗಾಯಿಸಲು ಬಯಸುತ್ತಾರೆ. ಐಷಾರಾಮಿ ವಸ್ತುಗಳ ಮೇಲಿನ ತೆರಿಗೆಯನ್ನು ಮತ್ತಷ್ಟು ಕಡಿಮೆ ಮಾಡಬೇಕು ಮತ್ತು ಜನಸಾಮಾನ್ಯರು ದಿನ ನಿತ್ಯವೂ ಬಳಸುವ ಅಗತ್ಯ ವಸ್ತುಗಳ ಮೇಲಿನ ತೆರಿಗೆಯ ಹೊರೆಯನ್ನು ಹೆಚ್ಚಿಸಬೇಕು–ಇದು ಅವರ ಬಯಕೆ. ಇದಕ್ಕಿಂತಲೂ ಹೆಚ್ಚು ಪ್ರತಿಗಾಮಿ ನಿಲುಮೆ ಮತ್ತೊಂದಿರಲು ಸಾಧ್ಯವಿಲ್ಲ. ಆಹಾರ ಪದಾರ್ಥಗಳ ಬೆಲೆ ಏರಿಕೆಯೇ ದೇಶದ ಹಣದುಬ್ಬರದ ಪ್ರಮುಖ ಕಾರಣವಾಗಿರುವ ಪರಿಸ್ಥಿತಿಯಲ್ಲಿವೀ ಕ್ರಮಗಳು ಹಣದುಬ್ಬರದ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತವೆ. ಆದ್ದರಿಂದ ಈ ತೆರಿಗೆ ದರ ಏರಿಕೆಯು ಒಂದು ಪ್ರತಿಗಾಮಿ ಕ್ರಮವಾಗುತ್ತದೆ ಮತ್ತು ತೆರಿಗೆ ಸೋರಿಕೆಗೂ ಕಾರಣವಾಗುತ್ತದೆ ಎಂದು ಹೇಳುತ್ತಾರೆ ಕೇರಳದ ಹಿಂದಿನ ಎಲ್‌ಡಿಎಫ್ ಸರಕಾರದಲ್ಲಿ ಹಣಕಾಸು ಸಚಿವರಾಗಿದ್ದ ಡಾ.ಟಿ.ಎಂ.ಥಾಮಸ್ ಐಸಾಕ್.

ಡಾ.ಟಿ.ಎಂ.ಥಾಮಸ್ ಐಸಾಕ್ ಅನು: **ಕೆ.ಎಂ.ನಾಗರಾಜ್**

ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು "ಮುಂಚಿತವಾಗಿ ಪ್ಯಾಕ್ ಮಾಡಿದ ಮತ್ತು ಲೇಬಲ್ ಹಚ್ಚಿದ" ಬೇಳೆಕಾಳುಗಳು, ಧಾನ್ಯಗಳು, ಹಿಟ್ಟುಗಳು ಮತ್ತು ಮೊಸರು ಮುಂತಾದ ವಸ್ತುಗಳಿಗೆ 18.7.2022 ರಿಂದ ಜಿಎಸ್‌ಟಿ ಅನ್ವಯವಾಗುತ್ತದೆ ಎಂಬುದನ್ನು ಸರಣಿ ಟ್ವೀಟ್‌ಗಳ ಮೂಲಕ ತಿಳಿಸಿದ್ದಾರೆ. ಈ ಮೊದಲು ಒಂದು ಬ್ರ್ಯಾಂಡ್ ಹೆಸರಿನಲ್ಲಿದ್ದ ಮತ್ತು ಒಂದು ಕಂಟೇನರ್‌ನಲ್ಲಿ ಪ್ಯಾಕ್ ಮಾಡಿದ ಇಂತಹ ವಸ್ತುಗಳಿಗೆ ಮಾತ್ರ 5% ಜಿಎಸ್‌ಟಿ ವಿಧಿಸಲಾಗಿತ್ತು.

ಬ್ರ್ಯಾಂಡೆಡ್– ಅನ್‌ಬ್ರ್ಯಾಂಡೆಡ್ ವರ್ಗೀಕರಣ

ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ಈ ಅಸ್ಪಷ್ಟ ಹೇಳಿಕೆಯನ್ನು ನಾವು ಸ್ಪಷ್ಟಗೊಳಿಸಿಕೊಳ್ಳೋಣ. ಮೊದಲನೆಯದು, ಸುದೀರ್ಘ ಚರ್ಚೆಗಳ ನಂತರ ಜಿಎಸ್‌ಟಿಯನ್ನು(ಸರಕುಗಳು ಮತ್ತು ಸೇವೆಗಳ ತೆರಿಗೆ) ಮೂಲತಃ ರೂಪಿಸಿದಾಗ, ಆಹಾರ ಧಾನ್ಯಗಳು ಮತ್ತು ನಿತ್ಯ ಬಳಕೆಯ ಹಲವು ಅಗತ್ಯ ವಸ್ತುಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸಿತು. ಈ ವಸ್ತುಗಳನ್ನು ಒಂದು ನೋಂದಾಯಿತ ಬ್ರ್ಯಾಂಡ್ ಹೆಸರಿನಲ್ಲಿ ಮಾರಿದಾಗ ಮಾತ್ರ ತೆರಿಗೆ ವಿಧಿಸಲಾಗುತ್ತಿತ್ತು. ಹಾಗಾಗಿ, ಚಿಲ್ಲರೆ ವ್ಯಾಪಾರಿಗಳು ಅಥವಾ ಸಣ್ಣ ಕಂಪನಿಗಳು ಧಾನ್ಯಗಳನ್ನು ಅಥವಾ ಹಿಟ್ಟನ್ನು ಪ್ಯಾಕ್ ಮಾಡಿದ ಅಥವಾ ಲೇಬಲ್ ಹಚ್ಚಿದ ರೂಪದಲ್ಲಿ ಮಾರಿದಾಗ ಈ ವಸ್ತುಗಳಿಗೆ ತೆರಿಗೆ ಇರಲಿಲ್ಲ. ಆದರೆ, ದೊಡ್ಡ ದೊಡ್ಡ ಕಂಪೆನಿಗಳು ತಮ್ಮ ನೋಂದಾಯಿತ ಬ್ರ್ಯಾಂಡ್ ಹೆಸರಿನಲ್ಲಿ ಮಾರುತ್ತಿದ್ದ ಈ ವಸ್ತುಗಳಿಗೆ ತೆರಿಗೆ ವಿಧಿಸಲಾಗುತ್ತಿತ್ತು. ಬ್ರ್ಯಾಂಡೆಡ್ ಉತ್ಪನ್ನಗಳ ಹೆಚ್ಚಿನ ಬೆಲೆಗಳನ್ನು ತೆರಲಾರದ ಜನಸಾಮಾನ್ಯರು ಧಾನ್ಯಗಳನ್ನು ಅಥವಾ ಹಿಟ್ಟನ್ನು ಪ್ಯಾಕ್ ಮಾಡಿದ ಅಥವಾ ಲೇಬಲ್ ಹಚ್ಚಿದ ರೂಪದಲ್ಲಿ ಮಾರುತ್ತಿದ್ದ ಚಿಲ್ಲರೆ ವ್ಯಾಪಾರಿಗಳಿಂದ ಅಥವಾ ಸಣ್ಣ ಕಂಪನಿಗಳಿಂದ ಈ ವಸ್ತುಗಳನ್ನು ಕೊಳ್ಳುತ್ತಿದ್ದರು. ಹೀಗಾಗಿ, ಹಾಲಿ ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ಸಾಮಾನ್ಯ ಗ್ರಾಹಕರು ಮತ್ತು ಸಣ್ಣ ಕಂಪನಿಗಳು ತೆರಿಗೆ ಮುಕ್ತವಾಗಿದ್ದರು ಮತ್ತು ದೊಡ್ಡ ಹೆಸರಿನ ಬ್ರ್ಯಾಂಡ್‌ಗಳು ತೆರಿಗೆ ಬಲೆಯಲ್ಲಿದ್ದವು.


ಪ್ಯಾಕೇಜ್ ಗೊಂದಲ ಮತ್ತು ಜಾಣತಂತ್ರ

ಎರಡನೆಯದು, ಕೇಂದ್ರ ಹಣಕಾಸು ಸಚಿವರು ಇತ್ತೀಚೆಗೆ ಘೋಷಿಸಿದ ಬದಲಾವಣೆಗಳು ಪರಿಸ್ಥಿತಿಯನ್ನು ಉಲ್ಟಾ–ಪಲ್ಟಾ ಮಾಡಿವೆ. ಬ್ರ್ಯಾಂಡೆಡ್ ವಸ್ತುಗಳು ಮತ್ತು ಅನ್‌ಬ್ರ್ಯಾಂಡೆಡ್ ವಸ್ತುಗಳ ನಡುವಿನ ವ್ಯತ್ಯಾಸವನ್ನು ಅವರು ಅಳಿಸಿಹಾಕಿದ್ದಾರೆ. "ಮೊದಲೇ ಪ್ಯಾಕ್ ಮಾಡಿದ್ದ ಮತ್ತು ಲೇಬಲ್ ಹಚ್ಚಿದ್ದ" ರೂಪದಲ್ಲಿರುವ ಎಲ್ಲಾ ವಸ್ತುಗಳ ಮೇಲೂ ಜಿಎಸ್‌ಟಿಯನ್ನು 18.7.2022 ರಿಂದ ವಿಧಿಸಲಾಗುವುದು. ಹೊಸ ವ್ಯವಸ್ಥೆಯಲ್ಲಿ ಬ್ರ್ಯಾಂಡಿಂಗ್ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಹೀಗಾಗಿ, ಚಿಲ್ಲರೆ ಅಂಗಡಿಯ ಅಥವಾ ಸಣ್ಣ ಕಂಪನಿಯ ಅಥವಾ ಒಂದು ಪ್ರತಿಷ್ಠಿತ ಬ್ರ್ಯಾಂಡ್‌ನ ಅದೇ ಒಂದು ಸರಕಿನ "ಮೊದಲೇ ಪ್ಯಾಕ್ ಮಾಡಿದ್ದ ಮತ್ತು ಲೇಬಲ್ ಹಚ್ಚಿದ್ದ" ರೂಪದಲ್ಲಿರುವ ಸರಕಿಗೂ ಈಗ ಏಕರೂಪದ ತೆರಿಗೆ ವಿಧಿಸಲಾಗುವುದು.

ಕಾನೂನು ಮಾಪನಶಾಸ್ತ್ರ ಅಧಿನಿಯಮದ ಪ್ರಕಾರ, ಖರೀದಿದಾರ ಹಾಜರಿಲ್ಲದ, ಮೊಹರು ಹಾಕಿರಲಿ ಅಥವಾ ಇಲ್ಲದಿರಲಿ, ಒಂದು ಪೂರ್ವ–ನಿರ್ಧರಿತ ಪ್ರಮಾಣವನ್ನು ಒಂದು ಪ್ಯಾಕೇಜ್‌ನಲ್ಲಿ ಇರಿಸಿದ ಉತ್ಪನ್ನವು "ಮೊದಲೇ ಪ್ಯಾಕ್ ಮಾಡಿದ್ದ ಸರಕು" (pre-packaged commodity) ಎನಿಸಿಕೊಳ್ಳುತ್ತದೆ. ಈ ಸರಕುಗಳನ್ನು ಈಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುವುದು ಈ ಸ್ವರೂಪದಲ್ಲೇ. ಅವುಗಳಿಗೆ ಶೇ.5 ತೆರಿಗೆಯನ್ನು ವಿಧಿಸಲಾಗುವುದು.

ತೆರಿಗೆ ವಂಚನೆ ಸಲೀಸು

ಶೇ.5 ತೆರಿಗೆ ವಿಧಿಸುವ ಈ ಕ್ರಮದ ಹಿಂದಿರುವ ತರ್ಕಾಧಾರವಾದರೂ ಏನು? ಮತ್ತೊಮ್ಮೆ, ಹಣಕಾಸು ಸಚಿವರ ಟ್ವೀಟ್‌ಅನ್ನೇ ನಾವು ಉಲ್ಲೇಖಿಸೋಣ: "ಜಿಎಸ್‌ಟಿಯನ್ನು ಜಾರಿಗೆ ತಂದಾಗ, ಬ್ರ್ಯಾಂಡೆಡ್ ಧಾನ್ಯಗಳಿಗೆ, ಬೇಳೆಕಾಳುಗಳಿಗೆ ಮತ್ತು ಹಿಟ್ಟಿಗೆ 5% ಜಿಎಸ್ಟಿ ದರವನ್ನು ಅನ್ವಯಿಸಲಾಯಿತು. ನಂತರ, ಈ ಕ್ರಮವನ್ನು ನೋಂದಾಯಿತ ಬ್ರ್ಯಾಂಡ್ ಹೆಸರಿನಡಿಯಲ್ಲಿ ಅಥವಾ ಪೂರೈಕೆದಾರನು ಜಾರಿಗೊಳಿಸಬಹುದಾದ ಹಕ್ಕನ್ನು ನಿರ್ಬಂಧಪಡಿಸಲಾಗದ ಬ್ರ್ಯಾಂಡ್ ಹೆಸರಿನಡಿಯಲ್ಲಿ ಮಾರಾಟ ಮಾಡುವ ವಸ್ತುಗಳಿಗೆ ಮಾತ್ರ ತೆರಿಗೆ ಅನ್ವಯವಾಗುವಂತೆ ತಿದ್ದುಪಡಿ ಮಾಡಲಾಯಿತು. ಆದಾಗ್ಯೂ, ಈ ನಿಬಂಧನೆಯನ್ನು ಪ್ರತಿಷ್ಠಿತ ತಯಾರಕರು ಮತ್ತು ಬ್ರ್ಯಾಂಡ್ ಮಾಲೀಕರು ವ್ಯಾಪಕವಾಗಿ ದುರುಪಯೋಗಪಡಿಸಿಕೊಂಡದ್ದನ್ನು ಬಹಳ ಬೇಗನೇ ಗಮನಿಸಲಾಯಿತು ಮತ್ತು ಕ್ರಮೇಣ ಈ ವಸ್ತುಗಳಿಂದ ಜಿಎಸ್‌ಟಿ ಆದಾಯವು ಗಮನಾರ್ಹವಾಗಿ ಕುಸಿಯಿತು".



ಅಪಾರ ಸಂಪನ್ಮೂಲಗಳನ್ನು ಖರ್ಚು ಮಾಡಿ ಒಂದು ಬ್ರ್ಯಾಂಡ್ ಮೌಲ್ಯವನ್ನು ಸೃಷ್ಟಿಸಿದ ಕಂಪನಿಯು ಶೇ.5 ತೆರಿಗೆ ತೆರಬೇಕಾದ ಕಾರಣದಿಂದ ತನ್ನ ಬ್ರ್ಯಾಂಡ್ ಹೆಸರನ್ನು ಕಳೆದುಕೊಳ್ಳುವುದು/ಬಿಟ್ಟುಕೊಡುವುದು ವಿರಳವೇ. ನಂತರದಲ್ಲಿ ಮಾಡಿದ ಒಂದು ತಿದ್ದುಪಡಿ–ನಿಬಂಧನೆಯ ಪ್ರಕಾರ, ಬ್ರ್ಯಾಂಡ್ ಎಂಬುದನ್ನು "ನೋಂದಾಯಿತ ಬ್ರಾಂಡ್ ಅಥವಾ ಅಥವಾ ಪೂರೈಕೆದಾರನು ಜಾರಿಗೊಳಿಸಬಹುದಾದ ಹಕ್ಕನ್ನು ನಿರ್ಬಂಧಪಡಿಸಲಾಗದ ಬ್ರ್ಯಾಂಡ್" ಎಂದು ವ್ಯಾಖ್ಯಾನಿಸಲಾಯಿತು. ನಂತರ ಅವುಗಳನ್ನು, ಈ ಸಂಬಂಧವಾಗಿ, ತೆರಿಗೆಯಿಂದ ಹೊರಗಿಡಲಾಯಿತು.

ದೊಡ್ಡ ದೊಡ್ಡ ಕಂಪನಿಗಳು ತಾವು "ಜಾರಿಗೊಳಿಸಬಹುದಾದ ಹಕ್ಕನ್ನು" ತ್ಯಜಿಸುತ್ತಿದ್ದೇವೆ ಎಂಬ ಒಂದು ವಿವರಣಾತ್ಮಕ ಟಿಪ್ಪಣಿಯನ್ನು ಕಂಟೇನರ್ ಮೇಲೆ ಮುದ್ರಿಸಿದವು. ಇದು ತೆರಿಗೆ ತಪ್ಪಿಸುವ ಸ್ಪಷ್ಟ ಪ್ರಯತ್ನವೇ. ಆದ್ದರಿಂದ, ಈ ತಿದ್ದುಪಡಿಯನ್ನು ಮಾರ್ಪಡಿಸುವುದೇ ಒಂದು ಆದರ್ಶಪ್ರಾಯ ಪ್ರತಿಕ್ರಿಯೆಯಾಗಿರಬೇಕಿತ್ತು. ಆದರೆ ಈ ಸರಳ ಮಾರ್ಗದ ಬದಲಾಗಿ ಯಾರೋ ಒಬ್ಬ ಮಹಾನುಭಾವರು, ಬ್ರ್ಯಾಂಡೆಡ್ ಮತ್ತು ಅನ್‌ಬ್ರ್ಯಾಂಡೆಡ್ ವರ್ಗೀಕರಣವನ್ನು ತ್ಯಜಿಸುವ ಅದ್ಭುತ ಕಲ್ಪನೆಯನ್ನು ಬಳಕೆ ಮಾಡಿದರು. ನಿಜಕ್ಕೂ ಇದು ಕಾರ್ಪೊರೇಟ್‌ಗಳಿಗೆ ಸಹಾಯ ಮಾಡುವ ಜಾಣ್ಮೆಯ ತಂತ್ರವೇ.

ಫರ್–ಫರ್ ಜಿಎಸ್‌ಟಿ



"ಇನ್ನು ಮುಂದೆ ಇದು ಕೂಡ ನಮ್ಮೊಂದಿಗೇ ಊಟ ಮಾಡುತ್ತದೆ"
ವ್ಯಂಗ್ಯಚಿತ್ರ: ಅಲಂಕಾರ್ ಗೋಸ್ವಾಮಿ

25 ಕೆ.ಜಿ.ಗಿಂತ ಹೆಚ್ಚಿನ ಪ್ಯಾಕೇಜ್‌ಗಳು ಮತ್ತು ಕಾರ್ಪೊರೇಟ್‌ಪರ ಪಕ್ಷಪಾತ

ಈ ಆದೇಶವನ್ನು ಮತ್ತೊಂದು ಉಪ–ವಾಕ್ಯದೊಂದಿಗೆ ಓದಿದಾಗ, ಕಾರ್ಪೊರೇಟ್ ತುಷ್ಟೀಕರಣದ ಪೂರ್ಣ ಪ್ರಮಾಣ ಎಷ್ಟು ಎಂಬುದು ಎದ್ದು ಕಾಣುತ್ತದೆ. ಪ್ಯಾಕೇಜ್ಡ್ ಸರಕುಗಳ ನಿಯಮಗಳ ಅಡಿಯಲ್ಲಿ 25 ಕೆ.ಜಿ.ಗಿಂತ ಹೆಚ್ಚಿನ ಪ್ಯಾಕೇಜ್‌ಗಳಿಗೆ ಅವು ಒಳಗೊಂಡ ವಿವರಗಳ ಬಗ್ಗೆ ಘೋಷಣೆ ಮಾಡುವುದರಿಂದ ನಿರ್ದಿಷ್ಟ ವಿನಾಯಿತಿ ನೀಡಲಾಗಿದೆ. ಆದ್ದರಿಂದ ಅವು ಜಿಎಸ್‌ಟಿಯನ್ನು ಆಕರ್ಷಿಸುವುದಿಲ್ಲ ಎಂದು ಭಾವಿಸುವುದು ಉಚಿತವೇ. ಹಾಗಾಗಿ, ಬ್ರ್ಯಾಂಡೆಡ್ ಪೂರೈಕೆದಾರರು ತೆರಿಗೆ ಬಲೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಪ್ಯಾಕೇಜಿನ ತೂಕವನ್ನು 26 ಕೆಜಿಗೆ ಹೆಚ್ಚಿಸಬೇಕಾಗುತ್ತದೆ. ಈ ರೀತಿಯ ತೆರಿಗೆ ವಂಚನೆಯು ಈಗಾಗಲೇ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ದೊಡ್ಡ ಪ್ಯಾಕೇಜ್‌ಗಳಿಗೆ ನೀಡಲಾದ ಈ ವಿನಾಯಿತಿಯ ಬಗ್ಗೆ ಕೇಂದ್ರ ಹಣಕಾಸು ಸಚಿವರ ಸರಣಿ ಟ್ವೀಟ್‌ಗಳಲ್ಲಿ ಉಲ್ಲೇಖವಿಲ್ಲ.

ಈ ಹೊಸ ತಿದ್ದುಪಡಿಗಳು ಸ್ಪಷ್ಟವಾಗಿ ಕಾರ್ಪೊರೇಟ್ ಹಿತಾಸಕ್ತಿ–ಪರ ಪಕ್ಷಪಾತವನ್ನು ತೋರಿಸುತ್ತವೆ. ತೆರಿಗೆಯನ್ನು ಅವರು ದೊಡ್ಡ ಪ್ರಮಾಣದಲ್ಲಿ ತಪ್ಪಿಸಬಹುದು. ಈ ವಿಷಯದಲ್ಲಿ ಹಣಕಾಸು ಸಚಿವರು ತಪ್ಪೊಪ್ಪಿಕೊಂಡಿದ್ದಾರೆ: "ಬ್ರ್ಯಾಂಡೆಡ್ ಸರಕುಗಳ ಮೇಲೆ ತೆರಿಗೆ ಪಾವತಿಸುತ್ತಿದ್ದ ಪೂರೈಕೆದಾರರು ಮತ್ತು ವ್ಯಾಪಾರಿ ಸಂಘಗಳು ತೆರಿಗೆಯನ್ನು ವಿರೋಧಿಸಿದವು. ದುರುಪಯೋಗವನ್ನು ತಡೆಯುವ ಸಲುವಾಗಿ ಪ್ಯಾಕೇಜ್ ಮಾಡಿದ ಎಲ್ಲಾ ಸರಕುಗಳ ಮೇಲೆ ಜಿಎಸ್‌ಟಿಯನ್ನು ಏಕರೂಪವಾಗಿ ವಿಧಿಸುವಂತೆ ಅವರು ಸರ್ಕಾರಕ್ಕೆ ಪತ್ರ ಬರೆದರು. ತೆರಿಗೆಯ ಈ ವ್ಯಾಪಕ ವಂಚನೆಯನ್ನು ರಾಜ್ಯಗಳೂ ಸಹ ಗಮನಿಸಿದ್ದವು."

ಐಷಾರಾಮಿ ವಸ್ತುಗಳ ತೆರಿಗೆ ಕಡಿತ

ತೆರಿಗೆ ದರಗಳನ್ನು ಆರಂಭದಲ್ಲಿ ನಿರ್ಧರಿಸುವ ಸಮಯದಲ್ಲಿ, ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಡೆದ ವಿಸ್ತೃತ ಚರ್ಚೆಗಳು ಕೇಂದ್ರ ಮತ್ತು ರಾಜ್ಯಗಳ ಜಿಎಸ್‌ಟಿ–ಪೂರ್ವ ತೆರಿಗೆಗಳನ್ನು ವಿವರವಾಗಿ ಪರಿಶೀಲಿಸಿದ್ದವು ಮತ್ತು ಸರಕುಗಳ ಪ್ರತಿಯೊಂದರ ಮೇಲಿನ ಅಂದಿನ ಒಟ್ಟು ಹೊರೆಯನ್ನು ಪರಿಶೀಲಿಸಿದ್ದವು ಮತ್ತು ಹೊಸ ಜಿಎಸ್‌ಟಿ ದರಗಳು ಅಂದು ಕೇಂದ್ರ ಮತ್ತು ರಾಜ್ಯಗಳು ವಿಧಿಸುತ್ತಿದ್ದ ಒಟ್ಟು ಸಂಯೋಜಿತ ತೆರಿಗೆಗಳಿಗಿಂತ ಕಡಿಮೆ ಇರುವಂತೆ ಖಚಿತಪಡಿಸಿಕೊಳ್ಳಲು ಕಾಳಜಿ ವಹಿಸಲಾಗಿತ್ತು.

ಆಗ ಈ ಇಡೀ ಕಸರತ್ತಿನ ಅತಿ ದೊಡ್ಡ ಫಲಾನುಭವಿಗಳೆಂದರೆ ಗೃಹೋಪಯೋಗಿ ಬಾಳಿಕೆ ವಸ್ತುಗಳು. ಅವುಗಳ ಮೇಲೆ ಆಗ ಶೇ.30 ರಿಂದ ಶೇ.45ರ ವರೆಗಿನ ತೆರಿಗೆ ಇತ್ತು. ಅವುಗಳನ್ನು ಏಕಮಾತ್ರ ಶೇ.28ಕ್ಕೆ ಇಳಿಸಲಾಯಿತು. ಈ ದರವನ್ನು ಜಿಎಸ್‌ಟಿ ಅಡಿಯಲ್ಲಿ ಅತಿ ಹೆಚ್ಚಿನ ತೆರಿಗೆ ದರವೆಂದು ನಿರ್ಧರಿಸಲಾಯಿತು. ಜಿಎಸ್‌ಟಿಯ ಪ್ರಮುಖ ದರಗಳೆಂದರೆ 5, 12, 18 ಮತ್ತು 28. ಇದಲ್ಲದೆ ಶೂನ್ಯ ದರದ ಸರಕುಗಳು, ಚಿನ್ನಕ್ಕೆ ಶೇ.3 ಮತ್ತು ಪ್ರಶಸ್ತ ಲೋಹಗಳಿಗೆ ಶೇ.0.25 ತೆರಿಗೆಯನ್ನು ನಿಗದಿಪಡಿಸಲಾಗಿತ್ತು. ಒಂದು ವಿಸ್ತೃತವಾದ ಚರ್ಚಾ ಕಸರತ್ತಿನ ಮೂಲಕ ತೆರಿಗೆ ದರವು ಆದಾಯ ತಟಸ್ಥವಾಗಿರುತ್ತದೆ (ಅಂದರೆ, ಹೊಸ ಜಿಎಸ್‌ಟಿ ದರಗಳಿಂದ ಬರುವ ಆದಾಯವು ಜಿಎಸ್‌ಟಿ–ಪೂರ್ವ ಪರಿಸ್ಥಿತಿಗೆ ಹೋಲಿಸಿದರೆ ಆದಾಯ ಸ್ವೀಕೃತಿಗಳಲ್ಲಿ ಕೊರತೆಯಾಗುವುದಿಲ್ಲ). ಎಂಬ

ಪುಟ 14 ಕ್ಕೆ

ಕಾಳಿಸ್ವಾಮಿ ವಿರುದ್ಧ ಸುಮೊಟೋ ಪ್ರಕರಣ ದಾಖಲಿಸಲು ಆಗ್ರಹ

ಇನ್ನೂ 09 ಮುಸ್ಲಿಂರ ತಲೆಗಳು ಬೇಕು ಎಂದು ಹೇಳುವುದಲ್ಲದೇ, ಘನತೆವೆತ್ತ ಮುಖ್ಯಮಂತ್ರಿಗಳನ್ನು ಎತ್ತಲಿ ಅವರಿಗೆ ತಾಕತ್ತಿದ್ರೆ, ಗೃಹ ಸಚಿವರನ್ನು ಸೇರಿದಂತೆ ಹಲವಾರು ಮುಖಂಡರ ಜೀವ ಹತ್ಯೆ ಮಾಡುವಂತೆ ಸಂವಿಧಾನ ವಿರೋಧಿ ಪ್ರಚೋಧನಕಾರಿ ಹೇಳಿಕೆ ನೀಡಿದ್ದ ಕಾಳಿಸ್ವಾಮಿ ವಿರುದ್ಧ ಸುಮೊಟೋ ಪ್ರಕರಣವನ್ನು ದಾಖಲಿಸಿ, ಕ್ರಮಗೊಳ್ಳಲು ಪ್ರಗತಿಪರ ಸಂಘಟನೆಗಳು ಆಗ್ರಹಿಸಿವೆ.

"ಕಾಳಿಸ್ವಾಮಿ ಅಲಿಯಾಸ್ ರಿಷಿಕುಮಾರ" ಎಂಬುವವರು 29 ಆಗಸ್ಟ್ 2022 ರಂದು ಬಜರಂಗದಳ ಮತ್ತು ಹಿಂದೂ ಪರಿಷತ್ ನವರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಮಂಗಳೂರಿನ ಸುರತ್ಕಲ್‌ನಲ್ಲಿ ಫಾಜೀಲ್ ಎಂಬ ಯುವಕನನ್ನು ಹೊಡೆದಿದ್ದಾರೆ, ನಮ್ಮವರೇ (ಹಿಂದೂ ಸಂಘಟನೆಯವರು) ಹೊಡೆದಿದ್ದರೆ ನಾನು ಅವರನ್ನು ಅಭಿನಂದಿಸುತ್ತೇನೆ, ಇನ್ನೂ 09 ಮುಸ್ಲಿಂರ ತಲೆಗಳು ಬೇಕು ಎಂದು ಹೇಳುವುದಲ್ಲದೇ, ಘನತೆವೆತ್ತ ಮುಖ್ಯಮಂತ್ರಿಗಳನ್ನು ಎತ್ತಲಿ ಅವರಿಗೆ ತಾಕತ್ತಿದ್ರೆ, ಗೃಹ ಸಚಿವರನ್ನು ಸೇರಿದಂತೆ ಹಲವಾರು ಮುಖಂಡರ ಜೀವ ಹತ್ಯೆ ಮಾಡುವಂತೆ ಸಂವಿಧಾನ ವಿರೋಧಿ ಪ್ರಚೋಧನಕಾರಿ ಹೇಳಿಕೆಗಳನ್ನು ನೀಡಿದ್ದರು. ಇದನ್ನು ಖಂಡಿಸಿ ಮಾನ್ಯ ತುಮಕೂರು



(ಎಎಸ್‌ಪಿ) ಪೋಲಿಸ್ ವರಿಷ್ಠಾಧಿಕಾರಿಗಳನ್ನು ಭೇಟಿ ಮಾಡಿ ಸೂಕ್ತ ಕ್ರಮಕ್ಕೆ ಪ್ರಗತಿಪರ ಸಂಘಟನೆಗಳು ಆಗ್ರಹಿಸಿವೆ.

ದೂರು ಸ್ವೀಕರಿಸಿ ತುರ್ತು ಎಫ್.ಐ.ಆರ್‌ಗೆ ಸೂಚಿಸಿದ ಎಎಸ್‌ಪಿ ಉದೇಶ್‌ಕುಮಾರ್: ದೂರು ಸ್ವೀಕರಿಸಿ ಮಾತನಾಡಿದ ಉದೇಶ್ ಇದು ಅಚಾನಕ್ಕಾಗಿ ನಡೆದಿರುವ ಘಟನೆ ಕೋಮು ಅಶಾಂತಿ ಸೃಷ್ಠಿಸುವ ಯಾರೋಬ್ಬರನ್ನು ಸುಮ್ಮನೇ ಬಿಡುವುದಿಲ್ಲ ಅವರ ಮೇಲೆ ಸೂಕ್ತ ಕಾನೂನು ಕ್ರಮಕ್ಕೆ ಮುಂದಾಗುತ್ತೇವೆ. ಕಾರ್ಯಕ್ರಮದ ಬಗ್ಗೆ ಸ್ಪಷ್ಟ ಮಾಹಿತಿ ನೀಡದೇ ಪೋಲಿಸ್ ಇಲಾಖೆ ಗಮನಕ್ಕೂ ತರದೇ ಈತರದ ಪ್ರಕ್ಷುಬ್ಧ ವಾತವರಣಕ್ಕೆ ಕಾರಣೀಕರ್ತರಾದವರ ಮೇಲು ಕ್ರಮಕ್ಕೆ ಮುಂದಾಗುತ್ತೇವೆ ಎಂದರು.

ಈ ಸಂದರ್ಭದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಎ. ನರಸಿಂಹಮೂರ್ತಿ, ಸೈಯದ್‌ಮುಜೀಬ್, ಸುಬ್ರಮಣ್ಯ, ತಾಜುದ್ದೀನ್ ಷರೀಫ್, ದಲಿತ ಸಂಘಟನೆಗಳ ಮುಖಂಡರುಗಳಾದ ಪಿ.ಎನ್.ರಾಮಯ್ಯ, ಕೇಬಲ್ ರಘು, ಕೊಟ್ಟಶಂಕರ್, ಮರಳೂರು ಕೃಷ್ಣಮೂರ್ತಿ, ಜೆಸಿಬಿ ವೆಂಕಟೇಶ್, ರಾಮಯ್ಯ, ಟಿಸಿ, ಗಿರೀಶ್ ಮತ್ತು ಅಲ್ಪಸಂಖ್ಯಾತ ಮುಖಂಡರಾದ ಸೈಯದ್‌ಬುರ್ಹಾನುದ್ದೀನ್, ಕೊಳಗೇರಿ ಹಿತರಕ್ಷಣಾ ಸಮಿತಿಯ ಅರುಣ್, ತಿರುಮಲಯ್ಯ, ಸಂವಿಧಾನ ಸ್ನೇಹಿ ಬಳಗದ ತೇಜಸ್‌ಕುಮಾರ್, ಪಿಯುಸಿಎಲ್ ಸಂಘಟನೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಜಿಎಸ್‌ಟಿ ದರ ಏರಿಕೆಗಳೂ–ಹಣಕಾಸು ಸಚಿವರ ಟ್ವೀಟ್‌ಗಳೂ

ಪುಟ 13 ರಿಂದ

ಭರವಸೆ ನೀಡಲಾಗಿತ್ತು.

ಜಿಎಸ್‌ಟಿಯ ಕೆಳಮುಖ ಪರಿಷ್ಕರಣೆ

ದುರದೃಷ್ಟವಶಾತ್, ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ವಿಶೇಷವಾಗಿ ಶೇ.28ರ ಸ್ಲ್ಯಾಬ್ ಅಡಿಯಲ್ಲಿ ಬರುವ ಸರಕುಗಳ ಮೇಲಿನ ತೆರಿಗೆ ದರವನ್ನು ಕಡಿಮೆ ಮಾಡಲು ಮುಂದಾಯಿತು. ಈ ಕಡಿತಗಳು ಕೇಂದ್ರ ಮತ್ತು ರಾಜ್ಯಗಳ ಆದಾಯದ ಮೇಲೆ ಉಂಟುಮಾಡಬಹುದಾದ ಪರಿಣಾಮಗಳ ಬಗ್ಗೆ ಅಂದಾಜು ಪ್ರಕ್ರಿಯೆ ನಡೆಸಿರಲಿಲ್ಲ. ಮೇಲಾಗಿ, ಚುನಾವಣೆಗಳು ಸಮೀಪದಲ್ಲಿದ್ದ ಸಮಯದಲ್ಲಿ ಯಾವ ರಾಜ್ಯದ ಹಣಕಾಸು ಮಂತ್ರಿಯೂ ಅದನ್ನು ಆಕ್ಷೇಪಿಸಲಾಗಲಿಲ್ಲ. ಬದಲಾಗಿ, ಅವರು ದರ ಇಳಿಕೆಯ ಸ್ಪರ್ದೆಯಲ್ಲಿ ತೊಡಗಿದರು. ಪರಿಣಾಮವಾಗಿ, ಶೇ.28ರ ತೆರಿಗೆಯನ್ನು ರದ್ದುಪಡಿಸಲಾಯಿತು. ಈ ಅಡ್ ಹಾಕ್ ನಿರ್ಧಾರದಿಂದಾಗಿ ಹೊಸ ದರಗಳು ಇನ್ನು ಮುಂದೆ ಆದಾಯ ತಟಸ್ಥವಾಗಿ ಉಳಿಯದಾದವು.

ಶೇ.28ರ ತೆರಿಗೆಯನ್ನು ರದ್ದುಪಡಿಸಿದ ಕ್ರಮವು ಜಿಎಸ್‌ಟಿ ಆದಾಯದ ಇಳಿಕೆಗೆ ಮೂಲ ಕಾರಣವಾಗಿತ್ತು. ಈಗ ಪ್ರತಿಯೊಬ್ಬರಿಗೂ ಈ ತಪ್ಪಿನ ಅರಿವಾಗಿದೆ ಮತ್ತು ಮೇಲ್ಮುಖ ದರ ಪರಿಷ್ಕರಣೆ ಅನಿವಾರ್ಯ ಎಂಬುದು ಮನವರಿಕೆಯಾಗಿದೆ. ಶೇ.28ರ ತೆರಿಗೆ ದರವನ್ನು ಪೂರ್ವ ಸ್ಥಿತಿಗೆ ತರಬೇಕೆಂಬುದು ಸ್ಪಷ್ಟವಾಗಿದೆ. ನಾವು ಈಗಾಗಲೇ ಗಮನಿಸಿರುವಂತೆ, ಜಿಎಸ್‌ಟಿಯನ್ನು ರೂಪಿಸುವ ಸಮಯದಲ್ಲಿ ಗೃಹೋಪಯೋಗಿ ಬಾಳಿಕೆ ವಸ್ತುಗಳ ಮೇಲಿನ ತೆರಿಗೆಯನ್ನು ಗಣನೀಯವಾಗಿ ಇಳಿಕೆ ಮಾಡಲಾಗಿತ್ತು ಮತ್ತು ಚುನಾವಣಾ ಸಮಯದ ಉನ್ಮಾದದಲ್ಲಿ ಅವುಗಳ ಮೇಲಿನ ತೆರಿಗೆಯನ್ನು ಮತ್ತಷ್ಟು ಇಳಿಸಲಾಗಿತ್ತು.

ಜಿಎಸ್‌ಟಿ ಸಂರಚನೆಯಲ್ಲಿ ಪುರೋಗಾಮಿತ್ವ

ಒಂದು ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವ ಉದ್ದೇಶಕ್ಕಾಗಿ ತೆರಿಗೆ ದರಗಳನ್ನು ಸೂಕ್ತವಾಗಿ ಹೊಂದಿಸಿಕೊಳ್ಳಬೇಕಾಗುತ್ತದೆ. ಆದರೆ ಕಾರ್ಪೊರೇಟ್‌ಗಳು ಮತ್ತು ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ ಯಾವ ಸಲಹೆಯನ್ನೂ ಸ್ವೀಕರಿಸಲು ತಯಾರಿಲ್ಲ. ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಕ್ರಮವನ್ನು ಅವರು ವಿರೋಧಿಸುತ್ತಾರೆ. ಬದಲಿಗೆ, ತೆರಿಗೆಯ ಹೊರೆಯನ್ನು ಅವರು ಜನಸಾಮಾನ್ಯರು ಬಳಸುವ ವಸ್ತುಗಳ ಮೇಲೆ ವರ್ಗಾಯಿಸಲು ಬಯಸುತ್ತಾರೆ. ಪ್ರಸ್ತುತ ಬಹು–ದರಗಳ ಜಿಎಸ್‌ಟಿಯನ್ನು ಒಂದು ಇಲ್ಲವೇ ಕಡಿಮೆ ಸಂಖ್ಯೆಯ ದರಗಳಲ್ಲಿ ವಿಲೀನಗೊಳಿಸುವ ಕಾರ್ಪೊರೇಟ್ ಕೂಗಿಗೆ ಅವರ ಈ ನಿಲುಮೆಯು ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ.

ಏಕಮಾತ್ರ ದರದತ್ತ ಸಾಗಿದರೆ, ಪುರೋಗಾಮಿತ್ವದಲ್ಲಿ ಅಲ್ಪ ಸ್ವಲ್ಪ ಹೊರನೋಟದ ಹೋಲಿಕೆ ಹೊಂದಿರುವ ಜಿಎಸ್‌ಟಿಯು ಅದನ್ನೂ ಕಳೆದುಕೊಳ್ಳುತ್ತದೆ. ಹೇಳಿ ಕೇಳಿ ಪರೋಕ್ಷ ತೆರಿಗೆಗಳು (ಜಿಎಸ್‌ಟಿ) ತಿರೋಗಾಮಿಯಾಗಿರುತ್ತವೆ (ಅಂದರೆ, ತೆರಿಗೆ ದರಗಳು ಹೆಚ್ಚಿದಂತೆ ಕೆಳ ಹಂತದಲ್ಲಿರುವವರಿಗೆ ಹೆಚ್ಚು ತೆರಿಗೆಗಳು ಮತ್ತು ಮೇಲಣ ಹಂತಗಳಲ್ಲಿರುವವರಿಗೆ ಕಡಿಮೆ ತೆರಿಗೆಗಳು). ಗೃಹೋಪಯೋಗಿ ಬಾಳಿಕೆ ವಸ್ತುಗಳು ಮತ್ತು ನಗರವಾಸಿ ಗ್ರಾಹಕ ಉತ್ಪನ್ನಗಳ ಮೇಲಿನ ತೆರಿಗೆ ದರಗಳು ತೀವ್ರ ಕುಸಿತವನ್ನು ಕಂಡಿವೆ. ಒಂದು ವೇಳೆ ಗರಿಷ್ಠ ಶೇ.18ರ ಮಿತಿಯ ಬೇಡಿಕೆಯನ್ನು ಒಪ್ಪಿದರೆ ಈ ಉತ್ಪನ್ನಗಳನ್ನು ಬಳಸುವವರು ಮತ್ತಷ್ಟು ಲಾಭ ಪಡೆಯುತ್ತಾರೆ.

ದರ ಪರಿಷ್ಕರಣೆ – ಯಾರಿಗೆ ಲಾಭ, ಯಾರಿಗೆ ನಷ್ಟ

ಧಾನ್ಯಗಳು ಮತ್ತು ಮೊಸರಿನ ಮೇಲಿನ ತೆರಿಗೆಯನ್ನು ಶೇ.5 ರ ತೆರಿಗೆ ವ್ಯಾಪ್ತಿಗೆ ತರಲಾಗಿದೆ. ಹಲವು ವಸ್ತುಗಳ ಮೇಲಿನ ತೆರಿಗೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಸೋಲಾರ್ ವಾಟರ್ ಹೀಟರ್, ಚರ್ಮದ ಉತ್ಪನ್ನಗಳು, ರೂ.1000 ಕ್ಕಿಂತ ಕಡಿಮೆ ಬಾಡಿಗೆಯ ಹೋಟೆಲ್ ರೂಂಗಳು, ರೂ.500ಕ್ಕಿಂತ ಹೆಚ್ಚಿನ ಶುಲ್ಕದ ಆಸ್ಪತ್ರೆ ರೂಂಗಳು ಮತ್ತು ಗುತ್ತಿಗೆ ಸೇವೆಗಳನ್ನು ಶೇ.5 ರಿಂದ ಶೇ.12ಕ್ಕೆ ಏರಿಸಲಾಗಿದೆ. ಎಲ್‌ಇಡಿ ಬಲ್ಬ್‌ಗಳು, ಶಾಯಿ, ಬ್ಲೇಡ್‌ಗಳು, ಪಂಪ್‌ಗಳು, ಸೈಕಲ್‌ಗಳು ಮತ್ತು ವಿವಿಧ ರೀತಿಯ ಯಂತ್ರಗಳು ಮತ್ತು ಇತರ ಅನೇಕ ಸರಕುಗಳ ಮೇಲಿನ ತೆರಿಗೆಯನ್ನು ಶೇ.12 ರಿಂದ ಶೇ.18ಕ್ಕೆ ಏರಿಸಲಾಗಿದೆ.

ಭೋಗ ವಸ್ತುಗಳ ತೆರಿಗೆಯ ಬಗ್ಗೆ ಹೇಳುವುದಾದರೆ, ಒಂದೇ ಒಂದು ಭೋಗ ವಸ್ತುವಿನ ತೆರಿಯನ್ನೂ ಶೇ.18 ರಿಂದ ಶೇ.28ಕ್ಕೆ ಏರಿಸಲಿಲ್ಲ. ಆದ್ದರಿಂದ, ಉದ್ದೇಶ ಬಹಳ ಸ್ಪಷ್ಟವಾಗಿದೆ–ಭಾರತ ಸರ್ಕಾರವು ಶೇ.28ರ ಪದರವನ್ನು (…slab) ತೆಗೆದು ಹಾಕಲು ಬಯಸುತ್ತದೆ. ಅಂದರೆ, ಐಷಾರಾಮಿ ವಸ್ತುಗಳ ಮೇಲಿನ ತೆರಿಗೆಯನ್ನು ಮತ್ತಷ್ಟು ಕಡಿಮೆ ಮಾಡಲು ಬಯಸುತ್ತದೆ ಮತ್ತು ಜನಸಾಮಾನ್ಯರು ದಿನ ನಿತ್ಯವೂ ಬಳಸುವ ಅಗತ್ಯ ವಸ್ತುಗಳ ಮೇಲಿನ ತೆರಿಗೆಯ ಹೊರೆಯನ್ನು ಹೆಚ್ಚಿಸಲು ಬಯಸುತ್ತದೆ. ಇದಕ್ಕಿಂತಲೂ ಹೆಚ್ಚು ಪ್ರತಿಗಾಮಿ ನಿಲುಮೆ ಮತ್ತೊಂದಿರಲು ಸಾಧ್ಯವಿಲ್ಲ.

ಬೆಟ್ಟಕ್ಕೆ ಮಣ್ಣು ಹೊರುವ ಕೆಲಸ

ದರ ಬಾಹುಳ್ಯ ಸಮಸ್ಯೆಯನ್ನು ಉತ್ಪ್ರೇಕ್ಷಿಸಲಾಗಿದೆ. ಜಿಎಸ್‌ಟಿ ಬರುವ ಮೊದಲು ಇದ್ದ ದರಗಳ ಪಟ್ಟಿಯನ್ನು ನೋಡಿದಾಗ ಮಾತ್ರ ತೆರಿಗೆ ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ಸರಳೀಕರಿಸಲಾಗಿದೆ ಎಂಬುದು ಗೊತ್ತಾಗುತ್ತದೆ. ದೇಶದಲ್ಲಿರುವ ಸಾಮುದಾಯಿಕ ಬಡತನ ಮತ್ತು ಆದಾಯ ಅಸಮಾನತೆಗಳು ಗರಿಷ್ಠ ಮಟ್ಟದಲ್ಲಿರುವುದನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ರೊಟ್ಟಿ/ಮುದ್ದೆಯ ಹಿಟ್ಟು ಮತ್ತು ಒಂದು ಐಷಾರಾಮಿ ಕಾರು/ವಾಹನ ಇವುಗಳಿಗೆ ಸಮರೂಪ ತೆರಿಗೆ ದರ ಸೂಚಿಸುವುದು ಶುದ್ಧ ಅವಿವೇಕ ಆಗುತ್ತದೆ. ಕನಿಷ್ಠ ಪಕ್ಷ, ಸಮಾನತೆಯ ಆದರ್ಶವನ್ನು ಪರಿಗಣಿಸಬೇಕಾಗುತ್ತದೆ. ವ್ಯವಹಾರ ಸುಗಮತೆ ಎಷ್ಟು ಮುಖ್ಯವೋ ಸಮಾನತೆಯ ಆದರ್ಶವೂ ಅಷ್ಟೇ ಮುಖ್ಯ. ಸರಳೀಕರಣವು ಅತಿಯಾದಾಗ, ಬೆಟ್ಟಕ್ಕೆ ಮಣ್ಣು ಹೊರುವ ಕೆಲಸವಾಗುತ್ತದೆ.

ತೆರಿಗೆ ಪರಿಷ್ಕರಣೆಯ ಬಗ್ಗೆ ರಾಜ್ಯಗಳ ಭಿನ್ನ ಮತ

ತೆರಿಗೆ ಹೆಚ್ಚಳಕ್ಕೆ ಕೇಂದ್ರ ಹಣಕಾಸು ಸಚಿವರು ನೀಡಿದ ಮತ್ತೊಂದು ಸಮರ್ಥನೆಯೆಂದರೆ, "ಜಿಎಸ್‌ಟಿ ಜಾರಿಗೆ ಬರುವ ಮೊದಲು ರಾಜ್ಯಗಳು ಆಹಾರ ಧಾನ್ಯಗಳಿಂದ ಗಮನಾರ್ಹ ಆದಾಯವನ್ನು ಸಂಗ್ರಹಿಸುತ್ತಿದ್ದವು. ಪಂಜಾಬ್ ರಾಜ್ಯದಲ್ಲೇ 2,000 ಕೋಟಿ ರೂ.ಗಳಿಗೂ ಹೆಚ್ಚು ಆಹಾರ ಧಾನ್ಯಗಳ ಖರೀದಿ ತೆರಿಗೆ ಸಂಗ್ರಹಿಸಲಾಗಿತ್ತು. ಉತ್ತರ ಪ್ರದೇಶವು 700 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಇದು ನಿಜ. ರಫ್ತು ಮಾಡುವ ರಾಜ್ಯವಾಗಿದ್ದ ಪಂಜಾಬಿನಲ್ಲಿ ಧಾನ್ಯಗಳ ಮೇಲಿನ ತೆರಿಗೆಯು ಅಧಿಕವಾಗಿತ್ತು ಮತ್ತು ಕೆಲವು ರಾಜ್ಯಗಳು, ವಿಶೇಷವಾಗಿ, ಬ್ರ್ಯಾಂಡೆಡ್ ಆಹಾರ ಧಾನ್ಯಗಳು ಮತ್ತು ಧಾನ್ಯ ಉತ್ಪನ್ನಗಳ ಮೇಲೆ ಕಡಿಮೆ ತೆರಿಗೆ ಇತ್ತು. ಆದರೆ ಇದು ಭವಿಷ್ಯದಲ್ಲಿ ಎಲ್ಲ ರಾಜ್ಯಗಳಿಗೂ ಸಂಗತವಾಗುವುದಿಲ್ಲ. ಹಾಗೆ ನೋಡಿದರೆ, ಹಿಂದೆ ದೇಶದಲ್ಲಿ ಧಾನ್ಯಗಳಿಗೆ ತೆರಿಗೆ ವಿನಾಯಿತಿ ಇತ್ತು.

ಜೊತೆಗೆ, ಜಿಎಸ್‌ಟಿ ದರ ಪರಿಷ್ಕರಣೆಯನ್ನು ಎಲ್ಲಾ ರಾಜ್ಯಗಳೂ ಒಪ್ಪಿಕೊಂಡಿವೆ ಎಂದು ಕೇಂದ್ರ ಹಣಕಾಸು ಸಚಿವರು ಹೇಳಿದ್ದಾರೆ. "ಇದು ಜಿಎಸ್‌ಟಿ ಮಂಡಳಿಯ ಸರ್ವಾನುಮತದ ನಿರ್ಧಾರವಾಗಿತ್ತು. ಜೂನ್ 28, 2022 ರಂದು ಚಂಡೀಗಢದಲ್ಲಿ ನಡೆದ 47ನೇ ಸಭೆಯಲ್ಲಿ ತೆರಿಗೆ ದರ ಸುಧಾರಣೆ ಕುರಿತ ಸಚಿವರ ಸಮಿತಿಯು(ಜಿಒಎಂ) ಈ ವಿಷಯವನ್ನು ಮಂಡಿಸಿದಾಗ ಎಲ್ಲಾ ರಾಜ್ಯಗಳೂ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಹಾಜರಿದ್ದವು. ಈ ನಿರ್ಧಾರಕ್ಕೆ ಬಿಜೆಪಿಯೇತರ ರಾಜ್ಯಗಳೂ (ಪಂಜಾಬ್, ಛತ್ತೀಸ್‌ಗಢ, ರಾಜಸ್ಥಾನ, ತಮಿಳು ನಾಡು, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕೇರಳ) ಸೇರಿದಂತೆ ಎಲ್ಲಾ ರಾಜ್ಯಗಳೂ ಸಹಮತ ವ್ಯಕ್ತಪಡಿಸಿವೆ. ಜಿಎಸ್‌ಟಿ ಮಂಡಳಿಯ ಈ ನಿರ್ಧಾರವು ಮತ್ತೊಮ್ಮೆ ಒಮ್ಮತದಿಂದ ಕೂಡಿತ್ತು" ಎಂದು ಹೇಳಿದ್ದಾರೆ.

ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ಈ ಹೇಳಿಕೆಯು ನಿಜವಲ್ಲ. ಅಗತ್ಯ ವಸ್ತುಗಳ ಮೇಲೆ ತೆರಿಗೆ ವಿಧಿಸುವ ಬಗ್ಗೆ ಕೇರಳದ ಹಣಕಾಸು ಸಚಿವರು ತಮ್ಮ ಅಸಮ್ಮತಿಯನ್ನು ಪತ್ರ ಮುಖೇನ ಸಚಿವರ ಸಮಿತಿಗೆ ತಿಳಿಸಿದ್ದರು. ಕೆಲವು ರಾಜ್ಯಗಳು ಪರಿಷತ್ತಿನ ಸಭೆಯಲ್ಲೇ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದವು. ಆದರೆ ಅಭಿಮತಗಳ ಎಣಿಕೆ ನಡೆಯಲಿಲ್ಲ. ಇದು ಪರಿಷತ್ತಿನ ರೂಢಿಯೂ ಹೌದು. ಲಾಟರಿ ತೆರಿಗೆ ದರ ಪರಿಷ್ಕರಣೆಯ ಸಮಯದಲ್ಲಿ ಮಾತ್ರ ಕೇರಳವು ಮತ ವಿಭಜನೆಯನ್ನು ಒತ್ತಾಯಿಸಿತ್ತು. ಆದ್ದರಿಂದ, ಎಲ್ಲಾ ರಾಜ್ಯಗಳೂ ಈ ನಿರ್ಧಾರವನ್ನು ಒಪ್ಪಿಕೊಂಡಿವೆ ಎಂದು ಹೇಳುವುದು ತರವಲ್ಲ.

ಹಣದುಬ್ಬರದ ಬೆಂಕಿಗೆ ತುಪ್ಪ ಸುರಿದ ತೆರಿಗೆ ಹೆಚ್ಚಳ

ಕೊನೆಯದಾಗಿ, ದೇಶವು ಒಂದು ಭೀಕರ ಹಣದುಬ್ಬರದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಮಯದಲ್ಲಿ ಜಿಎಸ್‌ಟಿ ದರ ಏರಿಸುವ ನಿರ್ಧಾರವು ನೋವಿನ ಸಂಗತಿಯಾಗಿದೆ. ಚಿಲ್ಲರೆ ಹಣದುಬ್ಬರವು ಶೇ.7ಕ್ಕಿಂತಲೂ ಅಧಿಕವಾಗಿದೆ. ಸಗಟು ಬೆಲೆ ಸೂಚ್ಯಂಕವು ಶೇ.15ರಷ್ಟು ಏರಿಕೆಯನ್ನು ದಾಖಲಿಸಿದೆ. ಸಗಟು ಬೆಲೆ ಸೂಚ್ಯಂಕದಲ್ಲಿ ಶೇ.24ರಷ್ಟು ಪ್ರಾಮುಖ್ಯತೆ(weightage) ಹೊಂದಿರುವ ಆಹಾರ ಪದಾರ್ಥಗಳು ಜೂನ್ ತಿಂಗಳಲ್ಲಿ ಶೇ.16.9ರಷ್ಟು ಏರಿಕೆಯಾಗಿವೆ. ಹಾಗಾಗಿ, ಆಹಾರ ಪದಾರ್ಥಗಳ ಬೆಲೆ ಏರಿಕೆಯೇ ದೇಶದ ಹಣದುಬ್ಬರದ ಪ್ರಮುಖ ಕಾರಣ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಪರಿಸ್ಥಿತಿಯಲ್ಲಿ ಧಾನ್ಯಗಳ ಮೇಲೆ ಶೇ.5ರ ತೆರಿಗೆ ಹೇರಿರುವ ಕ್ರಮವು ಹಣದುಬ್ಬರದ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಆದ್ದರಿಂದ ಈ ತೆರಿಗೆ ದರ ಏರಿಕೆಯು ಒಂದು ಪ್ರತಿಗಾಮಿ ಕ್ರಮವಾಗುತ್ತದೆ ಮತ್ತು ತೆರಿಗೆ ಸೋರಿಕೆಗೂ ಕಾರಣವಾಗುತ್ತದೆ. ●

ಡೈರಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಹಿಂಪಡೆಯಲು ಒತ್ತಾಯಿಸಿ ದೇಶಾದ್ಯಂತ ಬೀದಿಗಿಳಿದ ಹೈನು ರೈತರು

ಜಿಎಸ್‌ಟಿ ಮಂಡಳಿ ಜೂನ್ 28–29 ರಂದು ನಡೆದ ತನ್ನ 47ನೇ ಸಭೆಯಲ್ಲಿ ಡೈರಿ ಉತ್ಪನ್ನಗಳ ಮೇಲೆ ಶೇ.5 ರಷ್ಟು ಜಿಎಸ್‌ಟಿ ಮತ್ತು ಡೈರಿ ಯಂತ್ರೋಪಕರಣಗಳ ಮೇಲೆ ಶೇ.18 ರಷ್ಟು ಜಿಎಸ್‌ಟಿ ವಿಧಿಸಲು ಶಿಫಾರಸು ಮಾಡಿರುವ ಕ್ರಮವು, ಅದರೊಂದಿಗೆ ಹೈನುಗಾರಿಕೆಯಲ್ಲಿ ನ್ಯಾಯಯುತ ಮತ್ತು ಫಲದಾಯಕ ಬೆಲೆ (ಎಫ್‌ಆರ್‌ಪಿ) ಇಲ್ಲದಿರುವುದು ಹಾಗೂ ಹಸಿರು ಮೇವಿನ ಏರುತ್ತಿರುವ ವೆಚ್ಚಗಳ ಜೊತೆಗೆ ಡೈರಿ ಉತ್ಪಾದನೆಯಲ್ಲಿ ತೊಡಗಿರುವ 9 ಕೋಟಿ ಕುಟುಂಬಗಳಲ್ಲಿ 75% ರಷ್ಟಿರುವ ಸಣ್ಣ ಡೈರಿ ರೈತರ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಭಾರತ ಡೈರಿ ರೈತರ ಒಕ್ಕೂಟ(ಡಿಎಫ್‌ಎಫ್‌ಐ) ಅಭಿಪ್ರಾಯಪಟ್ಟಿದೆ. ಆದ್ದರಿಂದ ಅದು ಈ ವಿಷಯದ ಮೇಲೆ ಜುಲೈ 27 ರಂದು ದೇಶವ್ಯಾಪಿ ಮತಪ್ರದರ್ಶನಕ್ಕೆ ಕರೆ ನೀಡಿತು.



ಅಂದು ರಾಜಸ್ಥಾನ, ಹರಿಯಾಣ, ಉತ್ತರ ಪ್ರದೇಶ ಮತ್ತು ಕೇರಳದಿಂದ ಸುಮಾರು 150 ಹೈನು ರೈತರು ದೆಹಲಿಗೆ ಬಂದು ಜಿಎಸ್‌ಟಿ ಹೇರಿಕೆಯನ್ನು ವಿರೋಧಿಸಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು ಮತ್ತು ಹಾಲಿಗೆ ಎಫ್‌ಆರ್‌ಪಿ ಕೊಡಬೇಕು ಮತ್ತು ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಬೇಕೆಂದು ಒತ್ತಾಯಿಸಿದರು. ಸಂಸದರ ಮೂಲಕ ಈ ರೈತರು ಕೇಂದ್ರ ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವರನ್ನು ಭೇಟಿ ಮಾಡಿ ಬೇಡಿಕೆಗಳ ಮನವಿ ಸಲ್ಲಿಸಲು ಅವಕಾಶ ಕೋರಿದ್ದಾರೆ.

ಅದೇ ದಿನ, ದೇಶದ ಇತರೆಲ್ಲ ಕಡೆಗಳಲ್ಲಿ ಹೈನು ರೈತರು ಸ್ಥಳೀಯ ಹಾಲಿನ ಬೂತ್‌ಗಳು, ಸಹಕಾರಿ ಸಂಘಗಳು ಮತ್ತು ಡಿಸಿ ಕಚೇರಿಗಳ ಎದುರು ಮತಪ್ರದರ್ಶನಗಳನ್ನು ನಡೆಸಿದರು, ಜಿಎಸ್‌ಟಿ ಹಿಂಪಡೆಯಲು ಮತ್ತು ಹಾಲು ವಲಯದಲ್ಲಿ ಎಫ್‌ಆರ್‌ಪಿ ಪರಿಚಯಿಸುವಂತೆ ಒತ್ತಾಯಿಸಿದರು. ಕರ್ನಾಟಕ, ತೆಲಂಗಾಣ, ಕೇರಳ, ಆಂಧ್ರಪ್ರದೇಶ, ತ್ರಿಪುರಾ, ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ, ಹರಿಯಾಣ ಮತ್ತು ಇತರ ರಾಜ್ಯಗಳ ಡೈರಿ ಉತ್ಪಾದಕರು ತಮ್ಮ ಪ್ರದೇಶಗಳಲ್ಲಿ ಪ್ರದರ್ಶನಗಳಲ್ಲಿ ಭಾಗವಹಿಸಿದರು. ಇದಕ್ಕೂ ಒಂದು ವಾರದ ಮೊದಲು, ಈ ರಾಜ್ಯಗಳಲ್ಲಿನ ಡಿಎಫ್‌ಎಫ್‌ಐ ಕಾರ್ಯಕರ್ತರು ಹೊಸ ಜಿಎಸ್‌ಟಿಯನ್ನು ತಿರಸ್ಕರಿಸುವುದನ್ನು ತಿಳಿಸಲು ಡೈರಿ ಉತ್ಪಾದಕರಿಂದ ಸಹಿಗಳನ್ನು ಸಂಗ್ರಹಿಸಿದರು.

ಜಂತರ್ ಮಂತರ್ ಮತ ಪ್ರದರ್ಶನವನ್ನು ಎಐಕೆಎಸ್‌ನ ಅಧ್ಯಕ್ಷ ಡಾ.ಅಶೋಕ್ ಧವಳೆ ಉದ್ಘಾಟಿಸಿದರು ಮತ್ತು ಸಭೆಯ ಅಧ್ಯಕ್ಷತೆಯನ್ನು ಕೇರಳ ರೈತ ಸಂಘದ ಜಂಟಿ ಕಾರ್ಯದರ್ಶಿ ಮತ್ತು ಡಿಎಫ್‌ಎಫ್‌ಐ ಸಂಚಾಲಕ ವಿ.ಎಸ್. ಪದ್ಮಕುಮಾರ್ ವಹಿಸಿದ್ದರು. ಭರತ್ ಸಿಂಗ್, ಯುಪಿ ಕಿಸಾನ್ ಸಭಾದ ಅಧ್ಯಕ್ಷರು ಸ್ವಾಗತ ಭಾಷಣ ಮಾಡಿದರು.; ರಾಜ್ಯಸಭಾ ಸಂಸದರಾದ ಎ.ಎ.ರಹೀಮ್ ಮತ್ತು ಡಾ.ವಿ.ಶಿವದಾಸನ್ ಪ್ರತಿಭಟನೆಗೆ ಬಂದು ಡೈರಿ ರೈತರ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದರು. ಪಿ. ಕೃಷ್ಣಪ್ರಸಾದ್ (ಆರ್ಥಿಕ ಕಾರ್ಯದರ್ಶಿ, ಎಐಕೆಎಸ್), ಸುಮಿತ್ ಸಿಂಗ್ (ಕಾರ್ಯದರ್ಶಿ, ಕಿಸಾನ್ ಸಭಾ ಹರಿಯಾಣ), ಇಂದರ್‌ಜಿತ್ ಸಿಂಗ್ (ಉಪಾಧ್ಯಕ್ಷ, ಕಿಸಾನ್ ಸಭಾ ಹರಿಯಾಣ), ದಿನೇಶ್ ಸಿವಾಚ್ (ಹರಿಯಾಣ ಸಂಚಾಲಕ, ಡಿಎಫ್‌ಎಫ್‌ಐ), ಮತ್ತು ಕಿಸಾನ್ ನಾಯಕ ಡಿಂಪಲ್ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಪ್ರತಿಭಟನೆಯ ನಂತರ ದೇಶಾದ್ಯಂತ ಸಂಗ್ರಹಿಸಿದ ಸಹಿಗಳೊಂದಿಗೆ ಡಿಎಫ್‌ಎಫ್‌ಐ ನಿಯೋಗವು ಕೇಂದ್ರ ಸಚಿವರನ್ನು ಭೇಟಿ ಮಾಡಿ ಬೇಡಿಕೆಗಳ ಜ್ಞಾಪಕ ಪತ್ರದೊಂದಿಗೆ ಸಹಿಗಳನ್ನು ಸಲ್ಲಿಸಲಾಗುವುದು ಎಂದು ಒಕ್ಕೂಟ ಹೇಳಿದೆ.

ಟಿಎಂಸಿಯ ಭ್ರಷ್ಟ ಆಳ್ವಿಕೆಯ ವಿರುದ್ಧ ಕೊಲ್ಕತಾದಲ್ಲಿ ಬೃಹತ್ ರ‍್ಯಾಲಿ



ಆಡಳಿತಾರೂಢ ಟಿಎಂಸಿಯಿಂದ ಪ್ರಜಾಸತ್ತಾತ್ಮಕ ಭಾರತದ ಇತಿಹಾಸದಲ್ಲಿ ಇದುವರೆಗಿನ ಅತಿದೊಡ್ಡ ರಾಜಕೀಯ ಮತ್ತು ಆಡಳಿತಾತ್ಮಕ ಹಗರಣದ ವಿರುದ್ಧ ಎಡರಂಗವು ಆಯೋಜಿಸಿದ್ದ ಪ್ರತಿಭಟನಾ ರ‍್ಯಾಲಿಗಳ ಕೊನೆಯಲ್ಲಿ ಕೊಲ್ಕತಾದ ಧರ್ಮತೊಲಾದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಪಶ್ಚಿಮ ಬಂಗಾಲ ಸಿಪಿಐ(ಎಂ) ಕಾರ್ಯದರ್ಶಿ ಮತ್ತು ಪೊಲಿಟ್ ಬ್ಯುರೊ ಸದಸ್ಯರಾದ ಮಹಮ್ಮದ್ ಸಲೀಂ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಹೌರಾ ನಿಲ್ದಾಣ, ಪಾರ್ಕ್ ಸರ್ಕಸ್‌ನಿಂದ ಆರಂಭವಾದ ರ‍್ಯಾಲಿಗಳು ಧರ್ಮತಾಳದಲ್ಲಿ ಮುಕ್ತಾಯಗೊಂಡವು. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರದ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಸಂಪೂರ್ಣ ನಿರ್ಲಜ್ಜ ತನವು ಕಳೆದ ಒಂದು ದಶಕದಲ್ಲಿ ಬಂಗಾಳದಲ್ಲಿ ನಿರುದ್ಯೋಗವನ್ನು ಅತ್ಯಂತ ವೇಗದಲ್ಲಿ ಹೆಚ್ಚಿಸಿದೆ. 1 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇವೆ, ಬಂಗಾಳದ ಪ್ರತಿಯೊಂದು ಶಾಲೆಯು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಬೃಹತ್ ಕೊರತೆಯನ್ನು ಎದುರಿಸುತ್ತಿದೆ ಎಂದು ಅವರು ಹೇಳಿದರು.

ಕಾಡು ಪ್ರಾಣಿಗಳ ಕಾಟ-ಅಗತ್ಯ ಕ್ರಮಗಳನ್ನು ಆಗ್ರಹಿಸಿ ದೆಹಲಿಯಲ್ಲಿ ಧರಣಿ

ಕಳೆದ 10 ವರ್ಷಗಳಲ್ಲಿ 1300 ಕ್ಕೂ ಹೆಚ್ಚು ಜನರ ಸಾವು, ತೀವ್ರ ಗಾಯಗಳು 4000 ಕ್ಕೂ ಹೆಚ್ಚು ಜನರಿಗೆ ಮತ್ತು ಕೋಟ್ಯಂತರ ರೂಪಾಯಿ ಬೆಳೆ ನಷ್ಟ ಉಂಟು ಮಾಡಿರುವ ಕಾಡು ಪ್ರಾಣಿಗಳ ಹಾವಳಿಯ ವಿರುದ್ಧ ಜುಲೈ 26, 2022 ರಂದು, ಕೇರಳ ರೈತ ಸಂಘದ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ನೂರಾರು ರೈತರ ಧರಣಿ ನಡೆಸಿದರು.

ಎಐಕೆಎಸ್ ಅಧ್ಯಕ್ಷ ಡಾ.ಅಶೋಕ್ ಧವಳೆ, ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ. ಕೃಷ್ಣ ಪ್ರಸಾದ್, ಕೇರಳ ರೈತ ಸಂಘದ ರಾಜ್ಯ ಕಾರ್ಯದರ್ಶಿ ವಲ್ಸನ್ ಪನೋಲಿ, ಸಂಸದರಾದ ಡಾ. ವಿ. ಶಿವದಾಸನ್ ಮತ್ತು ಜಾನ್ ಬ್ರಿಟ್ಟಾಸ್ ಅವರು ಸಂಸತ್ ಭವನದಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರಯಾದವ್ ಅವರನ್ನು ಭೇಟಿ ಮಾಡಿದರು. ವನ್ಯಜೀವಿ ದಾಳಿಗೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಪರಿಣಾಮಕಾರಿ ಕ್ರಮಕ್ಕಾಗಿ ನಿರ್ದಿಷ್ಟ ಬೇಡಿಕೆಗಳನ್ನು ಸಲ್ಲಿಸುವ ಜ್ಞಾಪಕ ಪತ್ರವನ್ನು ಸಲ್ಲಿಸಿದರು. ಸಚಿವರು ಕೆಲವು ಬೇಡಿಕೆಗಳಿಗೆ ಸಮ್ಮತಿಸಿ ಅವುಗಳ ಅನುಷ್ಠಾನಕ್ಕೆ ಭರವಸೆ ನೀಡಿದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ ಅವರು ಧರಣಿಯನ್ನು ಉದ್ಘಾಟಿಸಿದರು ಮತ್ತು ಡಾ. ಅಶೋಕ್ ಧವಳೆ, ಪಿ. ಕೃಷ್ಣಪ್ರಸಾದ್, ವಲ್ಸನ್ ಪನೋಲಿ, ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂಕೃಷ್ಣನ್, ಸಂಸದರಾದ ಎಲಮರಮ್‌ಕರೀಂ ಮತ್ತು ವಿ. ಶಿವದಾಸನ್ ಮತ್ತು ಇತರ ಕೇರಳ ಮುಖಂಡರು ಮಾತನಾಡಿದರು.



ಆಕಾಶ್ ಹಸ್ಸನ್ ಮೇಲೆ ನಿಷೇಧ ಮತ್ತು ರವಿ ನಾಯರ್ ಮೇಲೆ ಮಾನನಷ್ಟ ಮೊಕದ್ದಮೆ-ಪತ್ರಕರ್ತರ ಸಂಘಗಳ ಖಂಡನೆ

ದೆಹಲಿ ಪತ್ರಕರ್ತರ ಸಂಘ (ಡಿಯುಜೆ) ಮತ್ತು ಕೇರಳ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ದೆಹಲಿ ಘಟಕ ಜಂಟಿ ಹೇಳಿಕೆಯಲ್ಲಿ ಕಾಶ್ಮೀರಿ ಪತ್ರಕರ್ತ ಆಕಾಶ್ ಹಸ್ಸನ್ ಶ್ರೀಲಂಕಾಕ್ಕೆ ವರದಿ ಮಾಡಲು ವಿಮಾನ ಪ್ರಯಾಣ ಮಾಡದಂತೆ ತಡೆದಿರುವುದು ಮತ್ತು ಅದಾನಿ ಮಾನನಷ್ಟ ಮೊಕದ್ದಮೆಯಲ್ಲಿ ಪತ್ರಕರ್ತ ರವಿ ನಾಯರ್ ವಿರುದ್ಧ ಬಂಧನ ವಾರಂಟ್ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿವೆ. "ಈ ದಾಳಿಗಳು ಇಂದು ಭಾರತದಲ್ಲಿ ಸ್ವತಂತ್ರ ಪತ್ರಕರ್ತರು ಮತ್ತು ಪತ್ರಿಕೋದ್ಯಮಕ್ಕೆ ನಿರಂತರ ದಾಳಿ ಮತ್ತು ಬೆದರಿಕೆಗಳ ಮುಂದುವರಿಕೆಯ ಭಾಗವಾಗಿವೆ" ಎಂದು ಡಿಯುಜೆ ಅಧ್ಯಕ್ಷ ಎಸ್.ಕೆ.ಪಾಂಡೆ ಮತ್ತು ಕೆಯುಡಬ್ಲ್ಯೂಜೆ ದೆಹಲಿ ಘಟಕದ ಕಾರ್ಯದರ್ಶಿ ಧನಸುಮೋದ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜುಲೈ 26 ರಂದು ಇಂದಿರಾ ಗಾಂಧಿ ಅಂತರಾಷ್ಟ್ರೀಯ (ಐಜಿಐ) ವಿಮಾನ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು ಶ್ರೀಲಂಕಾದ ರಾಜಧಾನಿ ಕೊಲಂಬೊಗೆ ಹಾರಾಟ ನಡೆಸದಂತೆ ಆಕಾಶ್ ಹಸ್ಸನ್ ಅವರನ್ನು ತಡೆದಿರುವುದು ಜಮ್ಮು ಮತ್ತು ಕಾಶ್ಮೀರದಲ್ಲಿ ಪತ್ರಕರ್ತರ ಮೇಲಿನ ಒಟ್ಟಾರೆ ನಿರ್ಬಂಧದ ಭಾಗವಾಗಿದೆಎಂದು ಕಾಣಲಾಗಿದೆ.

ಪತ್ರಕರ್ತ ರವಿ ನಾಯರ್ ಬಗ್ಗೆಹೇಳುವುದಾದರೆ, ಕಳೆದ ಕೆಲವು ವರ್ಷಗಳಲ್ಲಿ ಅವರು ಹಲವಾರು ತನಿಖಾ ಸ್ಟೋರಿಗಳನ್ನು ಮಾಡಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ, ಅವುಗಳಲ್ಲಿ ಕೆಲವು ಬಿಜೆಪಿಯ ಆರ್ಥಿಕ ನೀತಿಗಳ ಮತ್ತು ವಿವಾದಾತ್ಮಕ ರಫೇಲ್ ಒಪ್ಪಂದವನ್ನು ಟೀಕಿಸಿದವುಗಳು.

ಇದಲ್ಲದೆ ಅವರು ಚುನಾವಣಾ ಬಾಂಡ್‌ಗಳು, ಸಿಎಜಿ ಮತ್ತು ಇತರ ವಿಷಯಗಳಲ್ಲಿ ಅನೇಕ ಸಂಗತಿಗಳನ್ನು ಬಯಲಿಗೆ ತಂದಿದ್ದಾರೆ. ಹಸ್ಸನ್ ಅವರು ದಿ ಗಾರ್ಡಿಯನ್‌ಗೆ ಬರೆಯುತ್ತಿದ್ದು ಕಾಶ್ಮೀರ ಮತ್ತು ಇತರ ಭಾಗಗಳಲ್ಲಿ ಮಾನವ ಹಕ್ಕುಗಳ ಬರೆಯುತ್ತ ಬಂದಿದ್ದಾರೆ. ವಾಸ್ತವವಾಗಿ, ಅವರು ಇತ್ತೀಚೆಗೆ "ನ್ಯೂ ವಾಯ್ಸ್' (ಹೊಸ ಧ್ವನಿ) ವಿಭಾಗದಲ್ಲಿ ಒನ್ ವರ್ಲ್ಡ್ ಮೀಡಿಯಾ ಅವಾರ್ಡ್ 2022 ರ ಅಂತಿಮ ಪಟ್ಟಿಗೆ ನಾಮನಿರ್ದೇಶನಗೊಂಡಿದ್ದರು. ಜುಲೈ 25 ಸೋಮವಾರದಂದು ಸ್ವತಂತ್ರ ಪತ್ರಕರ್ತ ರವಿ ನಾಯರ್‌ಗೆ ದೆಹಲಿ ಪೊಲೀಸರು ಗುಜರಾತ್‌ನ ಗಾಂಧಿನಗರದ ನ್ಯಾಯಾಲಯಕ್ಕೆ ಹಾಜರಾಗಲು ಜಾಮೀನು ನೀಡಬಹುದಾದ ವಾರಂಟ್ ಕಳಿಸಿದ್ದಾರೆ ಎಂದು ತಿಳಿದುಬಂದಿದೆ. ಅವರು ಯಾವುದೇ ನ್ಯಾಯಾಲಯದ ಸಮನ್ಸ್ ಅಥವಾ ಅವರ ವಿರುದ್ಧ ದಾಖಲಾಗಿರುವ ದೂರನ್ನು ಸಹ ಪಡೆದಿಲ್ಲ ಎಂದು ವರದಿಯಾಗಿದೆ ಎಂದು ಜಂಟಿ ಹೇಳಿಕೆ ತಿಳಿಸಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE AUGUST 1-7, 2022 Price: Rs. 10/- Date of Publication: 29 JULY 2022 RNI No. KARKAN /2006/17926 Posted on 01-08-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕಸ್ತೂರಿ ರಂಗನ್ ವರದಿ-ಕರಡು ಅಧಿಸೂಚನೆ ಕಣ್ಣಿಗೆ ಮಣ್ಣೆರೆಚುವ ತಂತ್ರವೇ?

ಡಾ.ಐ.ಆರ್.ದುರ್ಗಾಪ್ರಸಾದ್

ಕಸ್ತೂರಿ ರಂಗನ್ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯ ಒಂದು ಹೆಜ್ಜೆ ಮುಂದಡಿಯಾಗಿ ಕೇಂದ್ರದಲ್ಲಿರುವ ನರೇಂದ್ರ ಮೋದಿ ಸರಕಾರ ಇದೇ 2022ರ ಜುಲೈ 6ರಂದು ಮತ್ತೊಂದು ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ. ಇದು ಪ್ರಕಟವಾಗುತ್ತಲೇ ನಮ್ಮ ರಾಜ್ಯದ ಮಂತ್ರಿಮಂಡಲದ ಸದಸ್ಯರುಗಳು ಈ ವರದಿಗೆ ವಿರೋಧ ವ್ಯಕ್ತಪಡಿಸಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ.

"ಪಶ್ಚಿಮ ಘಟ್ಟದ ರಕ್ಷಣೆಗೆ ಅವೈಜ್ಞಾನಿಕವಾದ ಕಸ್ತೂರಿ ರಂಗನ್ ಸಮಿತಿಯ ವರದಿ ಅಗತ್ಯವಿಲ್ಲ. ಇದನ್ನು ಒಗ್ಗೂರಲಿನಿಂದ ವಿರೋಧಿಸುವ ಅಗತ್ಯವಿದೆ. ಅರಣ್ಯ ರಕ್ಷಣೆಗೆ ಈಗಿರುವ ಕಾಯ್ದೆಗಳೇ ಸಾಕು" ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರೆಂದು ವರದಿಯಾಯಿತು. ಜುಲೈ 18ರಂದು ಈ ಬಗ್ಗೆ ಚರ್ಚಿಸಲು ಚಿಕ್ಕಮಗಳೂರಿನಲ್ಲಿ ಸಭೆ ಕರೆದಿದ್ದಾರೆಂದರು.

"ಈ ಕಾಯ್ದೆಯ ಬಗ್ಗೆ ಎರಡು ತಿಂಗಳ ಹಿಂದೆ ಪರಿಸರ ಮಂತ್ರಾಲಯ ದೆಹಲಿಯಲ್ಲಿ ನಡೆಸಿದ ಸಭೆಯಲ್ಲಿ ತೀವ್ರವಾಗಿ ವಿರೋಧಿಸಿದ್ದೇನೆ" ಎಂದು ಮಂತ್ರಿಗಳು ಹೇಳಿದ್ದರು.

ಜ್ಞಾನೇಂದ್ರರವರು ಹೇಳಿದಂತೆ ಸಂಬಂಧಿಸಿದ ಜನಪ್ರತಿನಿಧಿಗಳ ಸಭೆಯೂ ನಡೆದಿದೆ. ಜುಲೈ 22 ರಂದು ನಡೆಯುವ ಸಚಿವ ಸಂಪುಟದ ಸಭೆಯಲ್ಲಿ "ಈ ಅಧಿಸೂಚನೆ ಒಪ್ಪಲಾಗದು" ಎಂದು ನಿರ್ಣಯ ಅಂಗೀಕರಿಸುವುದು; ಮುಖ್ಯ ಮಂತ್ರಿಯವರ ನೇತೃತ್ವದಲ್ಲಿ ದೆಹಲಿಗೆ ಹೋಗಿ ಪರಿಸರ ಸಚಿವರ ಸಮ್ಮುಖದಲ್ಲಿ ರಾಜ್ಯದ ನಿಲುವು ಸ್ಪಷ್ಟಪಡಿಸುವುದು ಮತ್ತು ಹಿರಿಯ ನುರಿತ ವಕೀಲರನ್ನು ನೇಮಿಸಿ ಹಸಿರು ಪೀಠದಲ್ಲಿ ಈ ಅಧಿಸೂಚನೆ ವಿರುದ್ಧ ಕಾನೂನು ಹೋರಾಟ ಮಾಡುವುದು – ಈ ರೀತಿಯಲ್ಲಿ 'ತ್ರಿವಿಧ ಹೋರಾಟ ಮಾಡಲು ಭಾರತೀಯ ಜನತಾ ಪಕ್ಷ ಸಿದ್ಧವಾಗಿದೆ' ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

22ರಂದು ಸಂಪುಟದ ಸಭೆಯೂ ನಡೆದಿದೆ. 'ಸಂಪುಟದ ಸಭೆ ನಡೆದ ನಂತರ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ "ಕಸ್ತೂರಿ ರಂಗನ್ ವರದಿ ಜಾರಿಯಿಂದ ಈ ಭಾಗದ ಜನರಿಗೆ ಅನ್ಯಾಯವಾಗಲಿದೆ. ಈ ವಿಚಾರದಲ್ಲಿ ಹೊಂದಾಣಿಕೆ ಸಾಧ್ಯವಿಲ್ಲ" ಎಂದು ಹೇಳಿದ್ದೆವು. ನಮ್ಮ ನಿಲುವನ್ನು ಈಗಾಗಲೇ ಎರಡು ಬಾರಿ ಹೇಳಿದ್ದೇವೆ. ಸಂಪುಟದ ಅನುಮೋದನೆಯಿಂದ ಮೂರನೇ ಬಾರಿಗೆ ಇದನ್ನು ಹೇಳುತ್ತಿದ್ದೇವೆ.

ರಾಜ್ಯ ಸರಕಾರ ವರದಿ ಒಪ್ಪಿಕೊಂಡು ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ವಲಯಗಳಿಂದ ಜನರನ್ನು ಸ್ಥಳಾಂತರಿಸಲು ಸಾಧ್ಯವಿಲ್ಲ. ನಾವು ಕೇಂದ್ರಕ್ಕೆ ಪತ್ರ ಬರೆಯುತ್ತೇವೆ ಮತ್ತು ಚರ್ಚೆಯ ನಂತರ ಮನವಿಯೊಂದನ್ನು ನೀಡುತ್ತೇವೆ. ಮುಂದಿನ ದಿನಗಳಲ್ಲಿ ರಾಜ್ಯದ ನಿರ್ಧಾರವನ್ನು ತಿಳಿಸಲು ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ರಾಜ್ಯದಿಂದ ನಿಯೋಗ ದೆಹಲಿಗೆ ಹೋಗಲಿದೆ ಎಂದು ತಿಳಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

"ಈ ಬಗ್ಗೆ ಈ ಹಿಂದೆ ವ್ಯಕ್ತವಾದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಿಲ್ಲ, ಸರಿಯಾದ ಹಾಗೂ ವೈಜ್ಞಾನಿಕವಾದ ಸರ್ವೆ ನಡೆದಿಲ್ಲ ನೂತನ ಅಧಿಸೂಚನೆ ಅನುಷ್ಠಾನಕ್ಕೆ ಬಂದರೆ ಗ್ರಾಮೀಣ ಭಾಗದ ಜನರ ಬದುಕು ಅಸಹನೀಯವಾಗುತ್ತದೆ. ಹೀಗಾಗಿ ಶತಾಯಗತಾಯ ವಿರೋಧಿಸಲಾಗುವುದು" ಎಂದು ಜ್ಞಾನೇಂದ್ರ ಮತ್ತೆ ಹೇಳಿದ್ದಾರೆ.

"ಸೆಟ್‌ಲೈಟ್ ಮೂಲಕ ಚಿತ್ರೀಕರಿಸಿ ಅವೈಜ್ಞಾನಿಕವಾಗಿ ನೀಡಿರುವ ಏಕ ವ್ಯಕ್ತಿಯ ಈ ವರದಿ ಜನವಿರೋಧಿಯಾಗಿದೆ. ಈ ವರದಿ ಈ ಪ್ರದೇಶದ ಜನರಿಗೆ ಮಾರಕವಾಗಿ ಪರಿಣಮಿಸಲಿದೆ" ಎಂದೂ ಸೇರಿಸಿದ್ದಾರೆ.

"2010ರಲ್ಲಿ ಗಾಡ್ಗೀಳ್ ವರದಿ ಬಂದಿತ್ತು. ಬಳಿಕ ಕಸ್ತೂರಿ ರಂಗನ್ ವರದಿ ಬಂದಿತು. ಇದನ್ನು ಒಪ್ಪಲು ಸಾಧ್ಯವಿಲ್ಲವೆಂದು ರಾಜ್ಯ ಅನೇಕ ಬಾರಿ ತಿಳಿಸಿದೆ. ಯಡಿಯೂರಪ್ಪ ಮುಖ್ಯ ಮಂತ್ರಿಯಾಗಿದ್ದಾಗ ಎರಡು ಬಾರಿ ಪತ್ರವನ್ನೂ ಬರೆಯಲಾಗಿದೆ. ಒಮ್ಮೆ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಿಯೋಗ ತೆರಳಿ ತಿಳಿಸಲಾಗಿದೆ. ಆದರೂ ಅಧಿಸೂಚನೆ ಪ್ರಕಟವಾಗಿದೆ ಎಂದರೆ ಇದು ಕೇಂದ್ರ ಸರಕಾರದ ಮೊಂಡುತನವಾಗಿದೆ" ಎಂದು ಭಾಜಪ ಪರ ಪತ್ರಿಕೆಯೊಂದು ಬರೆದಿದೆ.

ಮಂತ್ರಿಮಂಡಲ ಈ ಬಗ್ಗೆ ತೀರ್ಮಾನವನ್ನೂ ತೆಗೆದುಕೊಂಡಿತು. ಶೋಭಾ ಕರಂದ್ಲಾಜೆ, ನವೀನ ಕುಮಾರ್ ಕಟೀಲು, ಸಿ.ಟಿ. ರವಿ, ಪ್ರತಾಪ್ ಸಿಂಹ ಬಿ.ವೈ. ರಾಘವೇಂದ್ರ, ಗೋವಿಂದ ಕಾರಜೋಳ ಅರಗ ಜ್ಞಾನೇಂದ್ರ ಮತ್ತು ಜೀವರಾಜ್ ರವರಿದ್ದ ನಿಯೋಗ ಕೇಂದ್ರ ಪರಿಸರ ಇಲಾಖೆಯ ಸಚಿವ ಭೂಪೇಂದರ್ ಯಾದವ್‌ರನ್ನು ಭೇಟಿಯಾಗಿದೆ. "ಕಸ್ತೂರಿ ರಂಗನ್ ಸಮಿತಿ ವರದಿ ಅವೈಜ್ಞಾನಿಕ" ಎಂದು ಬೊಮ್ಮಾಯಿ ವಿವರಿಸಿದ್ದಾರೆ.

2104ರ ಲೋಕಸಭಾ ಚುನಾವಣೆಯಲ್ಲಿ "ನಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಕಸ್ತೂರಿ ರಂಗನ್ ಸಮಿತಿ ವರದಿ ಅನುಷ್ಠಾನಕ್ಕೆ ತರುವುದಿಲ್ಲ" ಎಂದು ಭರವಸೆ ಕೊಟ್ಟು ಭಾರತೀಯ ಜನತಾ ಪಕ್ಷ ಗೆದ್ದಿತ್ತು. ಕರ್ನಾಟಕದಲ್ಲಿ ಪಶ್ಚಿಮ ಘಟ್ಟ ಪ್ರದೇಶದಿಂದ ಆ ಪಕ್ಷದ ಅತಿರಥ ಮಹಾರಥರೇ ಗೆದ್ದಿದ್ದರು. 8 ಸದಸ್ಯರಲ್ಲಿ 6 ಸದಸ್ಯರು ಆ ಪಕ್ಷದವರೇ ಆಗಿದ್ದರು. ವರದಿಯ ಅನುಷ್ಠಾನವನ್ನು ತಡೆಯಲು ಅವರು ಏನೂ ಪ್ರಯತ್ನ ಮಾಡಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕೇಂದ್ರ ಸರಕಾರ ಎರಡು ಬಾರಿ ಸಂಸದರುಗಳ ಸಭೆ ಕರೆದಿತ್ತು. ಇವರು ಆ ಸಭೆಗಳಲ್ಲಿ ಭಾಗವಹಿಸಿ ವಿರೋಧ ವ್ಯಕ್ತಪಡಿಸಲಿಲ್ಲ. ಜನಪ್ರತಿನಿಧಿಗಳಾಗಿ ತಮ್ಮ ಕರ್ತವ್ಯ ನೆರವೇರಿಸಲಿಲ್ಲ.





ಕೇಂದ್ರ ಸರಕಾರ ಅಧಿಕಾರಿಗಳಿರುವ ಸಮಿತಿಯೊಂದನ್ನು ರಚಿಸಿದೆ. ಅದು ಕರ್ನಾಟಕದಲ್ಲಿ ಪರಿಸರ ಸೂಕ್ಷ್ಮ ಪದೇಶಗಳೆಂದು ಘೋಷಿಸಲ್ಪಟ್ಟಿರುವ ಪ್ರದೇಶಗಳನ್ನು ಸಂದರ್ಶಿಸಿ ಮಾಹಿತಿಗಳನ್ನು ಪಡೆದು ವರದಿ ಸಿದ್ಧಗೊಳಿಸುತ್ತದೆ. ಈ ಸಮಿತಿಗೆ ಒಂದು ವರ್ಷದ ಅವಧಿಯನ್ನು ಕೊಡಲಾಗಿದೆ.

ಈ ಬಗ್ಗೆ "ವರದಿಯ ಅನುಷ್ಠಾನಕ್ಕೆ ಕಾಲಾವಧಿ ಸಿಕ್ಕಿದಂತಾಯಿತು" ಎಂದು ಪ್ರತಾಪ್ ಸಿಂಹ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳನ್ನು ಕಾಣುವಾಗ ಈ ಭಾ.ಜ.ಪ. ಮುಖಂಡರುಗಳಿಂದ ಜನತೆಗೆ ಪರಿಹಾರ ಸಿಕ್ಕಿತು ಎಂಬ ಅಭಿಪ್ರಾಯ ಸೃಷ್ಟಿಯಾಗುತ್ತದೆ.

ಭಾರತೀಯ ಜನತಾ ಪಕ್ಷದ ರಾಜ್ಯ ನಾಯಕತ್ವದ ಈ ನಾಟಕ ಜನರ ಕಣ್ಣಿಗೆ ಮಣ್ಣೆರಚುವ ತಂತ್ರವಾಗಿದೆ. ಇದರಿಂದಷ್ಟೇ ವರದಿ ಅನುಷ್ಠಾನವನ್ನು ತಡೆಯಲು ಇವರಿಂದ ಸಾಧ್ಯವಿಲ್ಲ.

ಮುಂದಿನ ಚುನಾವಣೆಯನ್ನು ಗಮನದಲಿಟ್ಟುಕೊಂಡು ಈ ಮಂದಿ ಈ ನಾಟಕವನ್ನಾಡಿದ್ದಾರೆ.

ವರದಿ ಕೊಡಲು ಈ ಸಮಿತಿಗೆ ಒಂದು ವರ್ಷದ ಅವಧಿ ಕೊಟ್ಟಿದ್ದಾರೆ. ಚುನಾವಣೆ 9 ತಿಂಗಳಲ್ಲಿ ಬರುತ್ತದೆ. ಆದ್ದರಿಂದ ಈ ಸಮಿತಿಯನ್ನು ತೋರಿಸಿ ತಾನು ರಕ್ಷಣೆ ಪಡೆಯಬಹುದು ಎನ್ನುವುದು ಭಾರತೀಯ ಜನತಾ ಪಕ್ಷದವರ ಲೆಕ್ಕಾಚಾರ. ಚುನಾವಣೆ ಆಗುವವರೆಗೆ ತಮ್ಮ ವಂಚನೆ ಮರೆಯಾದರೆ ಅನಂತರ ಮತ್ತೆ 5 ವರ್ಷಗಳ ನಮ್ಮ ಅಧಿಕಾರವಿರುತ್ತದೆ ಎನ್ನುವುದರಿಂದಲೇ ಇಂತಹ ಸಮಿತಿಯನ್ನು ಕೇಂದ್ರದಿಂದ ಇವರು ರಚಿಸಿದ್ದಾರೆ.

ಬೊಮ್ಮಾಯಿ "ಕಸ್ತೂರಿ ರಂಗನ್ ಸಮಿತಿ ವರದಿ ಅವೈಜ್ಞಾನಿಕ" ಎಂದು ಇವತ್ತು ಹೇಳುತ್ತಿದ್ದಾರೆ. ಆದರೆ 2014ರಲ್ಲಿಯೇ ಇವರ ಆರಾಧ್ಯ ದೈವ ನರೇಂದ್ರ ಮೋದಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಅವರ ಸರಕಾರ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡಾವಿಟ್ ಮಂಡಿಸಿ "ನಮ್ಮ ಸರಕಾರ ಕಸ್ತೂರಿ ರಂಗನ್ ಸಮಿತಿಯ ವರದಿ ಅನುಷ್ಠಾನಕ್ಕೆ ತರುವುದಾಗಿ" ಒಪ್ಪಿಕೊಂಡದ್ದಾಗಿದೆ. ಆಗ ಬೊಮ್ಮಾಯಿ ಈ ಆಕ್ಷೇಪ ಹಾಕಲಿಲ್ಲ.!

2014ರ ಲೋಕಸಭಾ ಚುನಾವಣೆಯಲ್ಲಿ "ನಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರುವುದಿಲ್ಲ" ಎಂದು ಭರವಸೆ ಕೊಟ್ಟು ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಗೆದ್ದಿತ್ತು. ಕರ್ನಾಟಕದಲ್ಲಿ ಪಶ್ಚಿಮ ಘಟ್ಟ ಪ್ರದೇಶದಿಂದ ಆ ಪಕ್ಷದ ಅತಿರಥ ಮಹಾರಥರೇ ಗೆದ್ದಿದ್ದರು. 8 ಸದಸ್ಯರಲ್ಲಿ 6 ಸದಸ್ಯರು ಆ ಪಕ್ಷದವರೇ ಆಗಿದ್ದರು. ವರದಿಯ ಅನುಷ್ಠಾನವನ್ನು ತಡೆಯಲು ಅವರು ಏನೂ ಪ್ರಯತ್ನ ಮಾಡಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕೇಂದ್ರ ಸರಕಾರ ಎರಡು ಬಾರಿ ಸಂಸದರುಗಳ ಸಭೆ ಕರೆದಿತ್ತು. ಇವರು ಆ ಸಭೆಗಳಲ್ಲಿ ಭಾಗವಹಿಸಿ ವಿರೋಧ ವ್ಯಕ್ತಪಡಿಸಲಿಲ್ಲ. ಜನಪ್ರತಿನಿಧಿಗಳಾಗಿ ತಮ್ಮ ಕರ್ತವ್ಯ ನೆರವೇರಿಸಲಿಲ್ಲ.

ಸಮಿತಿಯ ಅಧ್ಯಯನವು ಅವೈಜ್ಞಾನಿಕವಾಗಿದೆ. ಪರಿಸರ ಸೂಕ್ಷ್ಮ ಪ್ರದೇಶಗಳನ್ನು ನಿರ್ಣಯಿಸುವಾಗ ಸ್ಥಳೀಯವಾಗಿ ಪರಿಶೀಲನೆ ನಡೆಸಲಿಲ್ಲ." ಎಂದು ಬೊಮ್ಮಾಯಿಯವರನ್ನೊಳಗೊಂಡು ಭಾಜಪ ಮುಖಂಡರು ಬೊಬ್ಬಿಡುತ್ತಿದ್ದಾರೆ. ಆದರೆ ಇದಕ್ಕೆ ಇವರೇ ಕಾರಣರಾಗಿದ್ದಾರೆ.

2014ರಲ್ಲಿಯೇ ಕೇಂದ್ರ ಸರಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡಾವಿಟ್ ಮಂಡಿಸಿದಾಗ ಅದರಲ್ಲಿಯೇ 'ಪರಿಸರ ಸೂಕ್ಷ್ಮ ಪ್ರದೇಶ'ದ ಮಾನದಂಡವನ್ನು ನಮೂದಿಸಿ "ಈ ಮಾನದಂಡದ ಆಧಾರದಲ್ಲಿ ತಮ್ಮ ರಾಜ್ಯಗಳಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಹೆಸರಿಸಲ್ಪಟ್ಟ ಪ್ರದೇಶಗಳನ್ನು ಸ್ಥಳೀಯವಾಗಿ ಅಧ್ಯಯನ ನಡೆಸಿ ಕೆಲವು ಪ್ರದೇಶಗಳನ್ನು ಬಿಡುವ, ಕೆಲವನ್ನು ಸೇರಿಸುವ ಪ್ರಕ್ರಿಯೆಯನ್ನು ರಾಜ್ಯ ಸರಕಾರಗಳು ನಡೆಸಬಹುದು ಮತ್ತು ವರದಿಯನ್ನು ಕಳುಹಿಸಬಹುದು" ಎಂದು ಹೇಳಿತ್ತು. ಕಳೆದ ಮೂರು ವರ್ಷಗಳ ಕಾಲ ನಮ್ಮ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷವೇ ಅಧಿಕಾರದಲ್ಲಿತ್ತು. ಆಗ ಇವರು ಈ ಅಧ್ಯಯನ ಮಾಡಬೇಕಿತ್ತು. ತಮ್ಮ ಕರ್ತವ್ಯವನ್ನು ನೆರವೇರಿಸದೆ ಇವತ್ತು ಬೊಮ್ಮಯಿ ಮೊಸಳೆ ಕಣ್ಣೀರಿಡುವುದು ವಂಚನೆಯಾಗಿದೆ.

ಕೇರಳದಲ್ಲಿ ಅಂದೇ ರಾಜ್ಯ ಸರಕಾರವೇ ಸ್ಥಳೀಯವಾಗಿ ಅಧ್ಯಯನ ನಡೆಸಿ ವರದಿ ತಯಾರಿಸಿ ಸಲ್ಲಿಸಿ ತನಗೆ ಬೇಕಾದದ್ದನ್ನು ಸಾಧಿಸಿಕೊಂಡಿದೆ.

ಒಟ್ಟಾರೆಯಾಗಿ, ಕಸ್ತೂರಿ ರಂಗನ್ ಸಮಿತಿಯ ವರದಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷವು ಜನರಿಗೆ ವಂಚಿಸುತ್ತಾ ಬಂದಿದ್ದು ಈಗ ತಾನೆಸಗಿದ ವಂಚನೆಯನ್ನು ಮರೆಮಾಚಲು ನಾಟಕವಾಡುತ್ತಿದೆ, ಅಂತರ್ಮತೀಯ ಗಲಭೆಗಳನ್ನು ಸೃಷ್ಟಿಸುತ್ತಿದೆ.

ಕಸ್ತೂರಿರಂಗನ್ ಸಮಿತಿ ವರದಿಯಿಂದ ವಿಮೋಚಿತರಾಗಲು ಪ್ರಬಲವಾದ ಚಳವಳಿ ಅಗತ್ಯವಲ್ಲದೆ ಭಾರತೀಯ ಜನತಾ ಪಕ್ಷದ ಮುಖಂಡರುಗಳ ಸುಳ್ಳುಗಳನ್ನು ನಂಬುವುದಲ್ಲ.

ಇದರೊಂದಿಗೆ, ದೇಶದ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ಒಂದು ತೀರ್ಪು ಕೊಟ್ಟು ವನ್ಯ ಜೀವಿಧಾಮಗಳು ಮತ್ತು ನ್ಯಾಷನಲ್ ಪಾರ್ಕ್‌ಗಳ ಸುತ್ತಲೂ ಒಂದು ಕಿ.ಮೀ.ವರೆಗೆ ಬಫರ್ ಝೋನ್ ರೂಪಿಸಬೇಕೆಂದು ಆದೇಶಿಸಿದೆ. ಇದರಿಂದ ಇನ್ನಷ್ಟು ಜನ ಸಂಕಷ್ಟಕ್ಕೆ ಒಳಗಾಗಲಿದ್ದಾರೆ.

ನಮ್ಮ ರಾಜ್ಯದಲ್ಲಿ ಈ ಬಗ್ಗೆ ಯಾರೂ ತುಟಿಪಿಟಿಕ್ ಎನ್ನುತ್ತಿಲ್ಲ. ಕೇರಳದಲ್ಲಿ ಈ ಬಗ್ಗೆ ಜನಚಳುವಳಿಗಳು ನಡೆದಿವೆ, ಸರಕಾರ ಮಧ್ಯ ಪ್ರವೇಶ ಮಾಡಿದೆ, ವಿಧಾನಸಭೆಯಲ್ಲಿ ಏಕಕಂಠದಿಂದ ನಿರ್ಣಯವನ್ನು ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿದೆ. ಅಲ್ಲಿನ ಅರಣ್ಯ ಮಂತ್ರಿಗಳು ದೆಹಲಿಗೆ ಹೋಗಿ ಸಂಬಂಧಿಸಿದ ಮಂತ್ರಿಗಳನ್ನು ಭೇಟಿಯಾಗಿ ವಿವರಿಸಿ ಅಗತ್ಯ ರಿಯಾಯಿತಿಗಳನ್ನು ಪಡೆದಿದ್ದಾರೆ.

ಈ ಎಲ್ಲಾ ವಿಷಯಗಳ ಬಗ್ಗೆಯೂ ಪ್ರಬಲವಾದ ಜನಚಳುವಳಿ ರೂಪುಗೊಳ್ಳಬೇಕು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**